ನಡುವಿನ ಸಮುದ್ರದಂತೆ ಶಾಂತವಾಗಿರುತ್ತದೆ. ಈ ಬ್ಯಾರಿಯರ್ ರೀಫ್‌ಗಳ ಬಳಿ ಸಾಗರದ ಹೆದ್ದರೆಗಳು ಭಯಂಕರವಾಗಿ ಬಂದು ಅಪ್ಪಳಿಸುತ್ತಿರುತ್ತವೆ. ಸುತ್ತಿ ಸುತ್ತಿ ಉರುಳುವ ಮಹಾ ಸಾಗರದ ಅಲೆಗಳಿಂದಾಗಿ ಈ ಬ್ಯಾರಿಯರ್ ರೀಫ್‌ಗಳ ಬಳಿ ನಿರಂತರವಾಗಿ ಸಮುದ್ರ ಒಳ ಸೆಳೆಯುತ್ತಾ ಸುಳಿಗಳಿಂದೊಡಗೂಡಿರುತ್ತವೆ.

ಸಹಸ್ರಾರು ಮೈಲಿ ಪ್ರಯಾಣ ಮಾಡಿ ಈ ದ್ವೀಪಗಳನ್ನು ಕಂಡು ಅಲ್ಲಿಗೆ ಹೋಗಲೆತ್ನಿಸದ ನಾವಿಕರ ನೌಕೆಗಳನ್ನು ಸಮುದ್ರ ಈ ರೀಫ್‌ಗಳಿಗೆ ತೆಗೆದಪ್ಪಳಿಸಿ ಒಳಗೆ ಸೆಳೆದುಬಿಟ್ಟಿರುವ ಅನೇಕ ಉದಾಹರಣೆಗಳಿದ್ದಾವೆ. ಬ್ಯಾರಿಯರ್ ರೀಫ್‌ಗಳಿರುವ ಕಡೆಗಳಲ್ಲೆಲ್ಲಾ ಎಲ್ಲಿ ಬ್ಯಾರಿಯರ್ ರೀಫ್ ಆಳವಾಗಿ ಸಮುದ್ರಕ್ಕೆ ದಾರಿ ಮಾಡಿಕೊಟ್ಟಿದೆಯೋ ಆ ಕಡೆಗಳಿಂದಲೇ ದೋಣಿಗಳನ್ನು ದ್ವೀಪಗಳ ಬಳಿಗೆ ಒಯ್ಯಬಹುದು. ಬ್ಯಾರಿಯರ್ ರೀಫ್‌ಗಳನ್ನು ಸಮುದ್ರದ ಸುತ್ತ ಕಟ್ಟಿದ ಅದೃಶ್ಯ ಕೋಟೆಗಳೆಂದೇ ಕರೆಯಬಹುದು.

ಡಾರ್ವಿನ್ ಅಟಾಲ್‌ಗಳನ್ನೂ ಸಹ ಒಂದಾನೊಂದು ಕಾಲದಲ್ಲಿ ದ್ವೀಪದ ಸುತ್ತ ಇದ್ದ ಬ್ಯಾರಿಯರ್ ರೀಫ್‌ಗಳೆಂದೇ ಹೇಳುತ್ತಾನೆ. ದ್ವೀಪ ಸಮುದ್ರದೊಳಗೆ ನಿಧಾನವಾಗಿ ಕುಸಿಯುತ್ತಾ ಹೋದಂತೆಲ್ಲಾ ಬ್ಯಾರಿಯರ್ ರೀಫ್‌ಗಳು ಬೆಳೆಬೆಳೆದು ದ್ವೀಪ ಸಮುದ್ರದೊಳಗಡೆ ಕುಸಿದ ಮೇಲೂ ಇವು ಮಾತ್ರ ಸಮುದ್ರ ಮಟ್ಟಕ್ಕೇ ಬೆಳೆದು ಅಟಾಲ್‌ಗಳಾಗಿರಬಹುದೆಂದು ತನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ.

ಫ್ರಿಂಜಿಂಗ್ ರೀಫ್‌ಗಳೆಂದರೆ ದ್ವೀಪಗಳ ಕಲ್ಲಿನ ದಡ ಆಳಸಾಗರದ ಕಡೆಗೆ ನಿಧಾನವಾಗಿ ಇಳಿಜಾರಾಗುತ್ತಾ ಹೋದರೆ ಅದರ ಮೇಲೆ ರೂಪುಗೊಳ್ಳುವ ಹವಳದ ದಂಡೆಗಳು. ಇವು ಸಹ ಬ್ಯಾರಿಯರ್ ರೀಫ್‌ಗಳಂತೆ ರೂಪುಗೊಳ್ಳಬಹುದಾದ ಹವಳದ ದಂಡೆಗಳಾದರೂ ಅದರಂತೆ ಇವು ದ್ವೀಪದ ಸುತ್ತ ಕೋಟೆಯೋಪಾದಿಯಲ್ಲಿ ರೂಪುಗೊಳ್ಳುವುದಿಲ್ಲ. ದೋಣಿಗಳಾಗಲೀ ಹಡಗಾಗಲೀ ದ್ವೀಪದ ಬಳಿಗೆ ಹೋಗಲು ಇವುಗಳಿಂದ ಅಡ್ಡಿ ಒದಗುವುದಿಲ್ಲ.

ಅಂಡಮಾನ್ ದ್ವೀಪಗಳ ಹವಳದ ದಂಡೆಗಳನ್ನು ಫ್ರಿಂಜಿಂಗ್ ರೀಫ್ ವರ್ಗಕ್ಕೆ ಸೇರಿಸಬಹುದೆಂದು ನನಗೆ ಮೇಲುನೋಟಕ್ಕೆ ಕಂಡಿತು. ಸಮುದ್ರ ಎಲ್ಲೆಡೆಯೂ ಅಡೆತಡೆಗಳಿಲ್ಲದೆ ದ್ವೀಪದ ದಡದವರೆಗೂ ಬರುತ್ತಿತ್ತು. ಅಂಡಮಾನಿನಲ್ಲಿ ಯಾರನ್ನು ಕೇಳಿದರೂ ಇವು ಯಾವ ವರ್ಗಕ್ಕೆ ಸೇರಿಸ

This PDF was created using the Sonic PDF Creator.
To remove this watermark, please license this product at www.investintech.com

ಬಹುದಾದ ಹವಳದ ದಂಡೆಗಳೆಂದು ಹೇಳಲಿಲ್ಲ. ಯಾರೂ ಇದನ್ನು ತಲೆಗೆ ಹಚ್ಚಿಕೊಂಡೇ ಇರಲಿಲ್ಲ.

This PDF was created using the Sonic PDF Creator.
To remove this watermark, please license this product at www.investintech.com

# 11. ಮಾಯಾ ಬಂದರ್ ಚಲೋ

ಚಂದ್ರು ರಾಮದಾಸ್ ನಾನು ಯೂತ್ ಹಾಸ್ಟೆಲಿನ ಎದುರಿದ್ದ ಸಮುದ್ರದ ಜೆಟ್ಟಿ ಮೇಲೆ ಕುಳಿತುಕೊಂಡಿದ್ದೆವು. ಸುಮ್ಮನೆ ಕುಳಿತಿರುವುದರ ಬದಲು ನಮ್ಮ ಇರುವಿಕೆಗೆ ಒಂದು ಉದ್ದೇಶ ಆರೋಪಿಸಲು ಗಾಳಗಳನ್ನು ನೀರಿಗೆಸೆದು ಕುಳಿತಿದ್ದೆವಷ್ಟೆ. ರಾತ್ರಿ ಹತ್ತುಗಂಟೆ ಇರಬಹುದು. ನಮ್ಮ ಗಾಳಗಳಿಗೆ ಚುಚ್ಚಿದ್ದ ತಿಂಡಿಗೆ ನೀರಿನಲ್ಲಿ ಯಾವುದೂ ಗಿರಾಕಿ ಇದ್ದಂತೆ ಕಾಣಲಿಲ್ಲ. ನನಗೆ ಗಿರಾಕಿಗಳ ಅಗತ್ಯವೂ ಇರಲಿಲ್ಲ. ದೂರದಲ್ಲಿ ಸಮುದ್ರದ ಅಲೆಗಳ ಮೇಲೆ ಕುಣಿಯುತ್ತಿದ್ದ ಪೋರ್ಟ್‌ಬ್ಲೇರಿನ ದೀಪಗಳನ್ನು ನೋಡುತ್ತಾ ಕುಳಿತಿದ್ದೆ.

ದೂರದಲ್ಲಿ ಕುಳಿತಿದ್ದ ರಾಮದಾಸ್ 'ಅರೆರೆರೆ' ಎಂದು ಕೂಗುತ್ತಾ ಗಾಳದ ಫೈಬರ್ ಗ್ಲಾಸ್ ರಾಡನ್ನು ಜಗ್ಗಾಡಿ ಎಂಥದನ್ನೋ ರಪ್ಪನೆ ಜೆಟ್ಟಿಮೇಲೆ ಎತ್ತಿ ಹಾಕಿದರು. ಜೆಟ್ಟಿಯ ಇಕ್ಕಟ್ಟಿನ ಜಾಗದಲ್ಲಿ ಆ ಜೀವಿ ಬಿದ್ದು ಡಬಡಬ ಕುಣಿದಾಡತೊಡಗಿದೊಡನೆ ಅಲ್ಲಿಯೇ ಪಕ್ಕ ಕುಳಿತಿದ್ದವರು ಓಟಕಿತ್ತರು. ರಾಮದಾಸ್ ಸಹ ಗಾಳ ಕೈಬಿಟ್ಟು ಓಡಿದರು. ಮತ್ತಾರೋ ಇಬ್ಬರು ಅದೇನೆಂದು ಇಣುಕಿ ನೋಡಲು ಬಂದವರೂ ಸಹ ಅದು ಅವರ ಕಾಲಬುಡದಲ್ಲೇ ಡಬಡಬ ಎನ್ನಿಸಲು ಹಾರಿಬಿದ್ದು ಓಡಿದರು.

"ಎಲಾ ಇವರ! ಅದೆಂಥ ಕಡಲಿನ ಭೂತ ಎತ್ತಿ ಹಾಕಿದಾರಪ್ಪ!" ಎಂದು ಆಶ್ಚರ್ಯದಿಂದ ನನ್ನ ಗಾಳ ಶಾಂತ ಕೈಗೆ ಹಿಡಿದುಕೊಳ್ಳಲು ಕೊಟ್ಟು ರಾಮದಾಸ್ ಬಳಿಗೆ ಹೋದೆ.

This PDF was created using the Sonic PDF Creator.
To remove this watermark, please license this product at www.investintech.com

"ಏನ್ರೀ ರಾಮ್‌ದಾಸ್?''ಎಂದೆ.

"ಎಂಥದೋ ಹಾರಿಬಲ್. ಕತ್ತಲೆಯಲ್ಲಿ ಕಾಣೋದೇ ಇಲ್ಲ. ಮೈಮೇಲೇ ಬೀಳುತ್ತೆ.''

"ಮೀನಲ್ಲವೆ?''

"ಮೀನಾಗಿದ್ದರೆ ನಾನ್ಯಾಕೆ ಓಡೋಗ್ತಿದೆ. ಎಂಥತೋ ಹಾವಿನ ತರ ಕಾಣುತ್ತ''

"ಹಾವೆಲ್ರಿ ನೀರೊಳಗಿರ್ತದೆ?''

"ಯಾರಿಗ್ರಿ ಗೊತ್ತು ಅಂಡಮಾನ್‌ನಲ್ಲಿ ಏನಿಲ್ಲ ಅಂತ.''

"ಇರಲಿ ನೋಡೋಣ ಬನ್ನಿ, ಅದೇನು ನಮ್ಮನ್ನ ತಿಂದುಬಿಡತ್ತ?''

"ಒಂದು ದೊಣ್ಣೆ ಇದ್ದಿದ್ರೆ ಅದಕ್ಕೆ ಬುದ್ಧಿ ಕಲಿಸ್ತಿದ್ದೆ'' ಎಂದು ಜೆಟ್ಟಿಮೇಲೆ ಅದಕ್ಕೆ ಬುದ್ಧಿ ಕಲಿಸಲು ಏನಾದರೂ ಇದೆಯೋ ಹುಡುಕ ತೊಡಗಿದರು.

ನಾನು ಹತ್ತಿರ ಹೋಗಿ ಬಗ್ಗಿ ನೋಡಿದೆ. ಕತ್ತಲಲ್ಲಿ ಏನೂ ಸರಿಯಾಗಿ ಕಾಣುತ್ತಿರಲಿಲ್ಲ. ಆದರೂ ಹಾವಿನ ರೀತಿ ಏನೋ ಹರಿಯುತ್ತಿರುವಂತೆ ಕಂಡಿತು. ಗಾಳಕ್ಕೆ ಸಿಕ್ಕಿಕೊಂಡಿದ್ದರಿಂದ ಅದಕ್ಕೆ ಓಡಿಹೋಗಲೂ ಸಾಧ್ಯವಿರಲಿಲ್ಲ. ನಾನು ಗಾಳದ ದಾರ ಎಲ್ಲಿದೆ ಎಂದು ನೋಡುತ್ತಿರಬೇಕಾದರೆ ಅದು ಮತ್ತೆ ದಡಬಡ ಮಾಡುತ್ತ ನೆಗೆಯಿತು. ನನ್ನ ಕಡೆಗೆ ನೆಗೆದಂತೆ ಕಂಡಿತು. ನಾನೂ ರಾಮದಾಸ್ ಮೇಲ್ಪಂಕ್ತಿಯನ್ನನುಸರಿಸಿ ಕಂಬಿಕಿತ್ತೆ.

"ನೋಡಿದಿರಾ! ನಾನು ಹೇಳಲಿಲ್ಲವ! ಹಾವು ಕಣ್ರಿ.''

"ಥೂ ಅದನ್ಯಾಕ್ರಿ ಎಳೆದಾಕಿದ್ರಿ?''

"ಅದೇ ಬಂದು ಗಾಳಕ್ಕೆ ತಗಲಾಕಿಕೊಂಡರೆ ನಾನೇನ್ರಿ ಮಾಡಲಿ?''

"ನನ್ನ ಗಾಳ ಬಿಡಿಸೋದು ಹೇಗೆ?''

"ಒಂದು ಟಾರ್ಚ್ ಸಹ ಇಲ್ವಲ್ಲಾ'' ಎಂದೆ ನಾನು.

ಅಷ್ಟರಲ್ಲಿ ಯಾರೋ ಟಾರ್ಚ್ ಮಿಣುಕಿಸುತ್ತಾ ನಮ್ಮ ಕಡೆ ಬರುತ್ತಿರುವುದು ಕಂಡಿತು. ಮಲ್ಲಿಕ್ ನಮ್ಮ ಹೆಸರು ಹಿಡಿದು ಕರೆದರು ನಾವು ಓಕೊಂಡೆವು. ಮಲ್ಲಿಕ್ ಏನೋ ಹೇಳಲು ನಮ್ಮನ್ನು ಹುಡುಕಿಕೊಂಡು ಬಂದಿದ್ದರು. ಅವರಿಂದ ಟಾರ್ಚ್ ತೆಗೆದುಕೊಂಡು ಗಲಾಟೆ ಮಾಡುತ್ತಿದ್ದ ಆ ವಿಚಿತ್ರ ಜೀವಿಯನ್ನು ನೋಡಿದೆವು. ಅದು ಹಾವೋ ಹಾವಿನ ತರದ ಮೀನೋ ಗೊತ್ತಾಗಲಿಲ್ಲ. ಇದ್ದಕ್ಕಿ

This PDF was created using the Sonic PDF Creator.
To remove this watermark, please license this product at www.investintech.com

ದ್ದಂತೆ ನಗೆದಾಡುತ್ತಿದ್ದ ಅದನ್ನು ಹೇಗೋ ಉಪಾಯ ಮಾಡಿ ಬಿಡಿಸಿ ಸಮುದ್ರಕ್ಕೆ ಸಾಗಹಾಕಿದೆವು.

ಮಲ್ಲಿಕ್ ಬಂದವರು ನಾಳೆ ಬೆಳಿಗ್ಗೆ ಇಲ್ಲಿಂದ ಮಾಯಾಬಂದರ್‌ಗೆ ಹೋಗೋಣವೇ ಎಂದರು. ಸುಮಾರು ಇನ್ನೂರು ಮೈಲಿ ದೂರದ ಮಾಯಾಬಂದರ್ ಕಡೆಗೆ ಹೋಗುವ ಹಡಗೊಂದು ನಾಳೆ ಪೋರ್ಟ್‌ಬ್ಲೇರ್ ಬಿಡುತ್ತದೆಂದೂ ಅದು ಬಾರಾಟಾಂಗ್, ಲಾಂಗ್ ಐಲೆಂಡ್ ಮುಖಾಂತರ ರಂಗತ್‌ವರೆಗೆ ಹೋಗುತ್ತದೆ ಅಲ್ಲಿಂದ ಮಾರನೆಯ ದಿನ ಬೆಳಿಗ್ಗೆ ಒಂದು ಬಸ್ ಮಾಯಾಬಂದರ್‌ಗೆ ಹೋಗುವು ದಿದೆ. ನಾವು ಮಾಯಾಬಂದರ್ ನೋಡಿ ಮುಗಿಸುವ ಹೊತ್ತಿಗೆ ದಿಗ್ಲಿಪುರದಿಂದ ಓಂಗೇ ಅನ್ನುವ ಹಡಗೊಂದು ಅಲ್ಲಿಗೆ ಬರುತ್ತದೆ. ಅದರಲ್ಲಿ ಪೋರ್ಟ್ ಬ್ಲೇರ್‌ಗೆ ಬರುವುದು ಎಂದು ವಿವರ ಕೊಟ್ಟರು. ಮಾಯಾಬಂದರ್ ಎನ್ನುವ ಹೆಸರಿಗೆ ನಾವೆಲ್ಲಾ ಮರುಳಾಗಿ ನಾವೆಲ್ಲಾ ಒಮ್ಮತದಿಂದ ಅವರ ತೀರ್ಮಾನಕ್ಕೆ ಜೈ ಎಂದೆವು.

ಅಂಡಮಾನಿನ ಸಾರಿಗೆ ವ್ಯವಸ್ಥೆಗಳ ಬಗ್ಗೆ, ಅಂಡಮಾನಿನ ಸಂಪರ್ಕ ವ್ಯವಸ್ಥೆಯ ಬಗ್ಗೆ, ಅಂಡಮಾನ್ ಊರುಗಳಲ್ಲಿನ ವಸತಿ ವ್ಯವಸ್ಥೆಯ ಬಗ್ಗೆ, ನಮಗೆ ಅಲ್ಲಿನ ಮಿತ್ರರು ಚೆನ್ನಾಗಿ ತಿಳಿಸಿ ಎಚ್ಚರಿಕೆ ಕೊಟ್ಟಿದ್ದರೂ ನಾವು ನಿರ್ಯೋಚನೆಯಿಂದ ದುಡುಕಿದೆವು. ಮದ್ರಾಸಿಗೆ ಹೋಗುವ ನಮ್ಮ ವಿಮಾನದಲ್ಲಿ ಸೀಟ್ ಬುಕ್ ಮಾಡಿಸಿಯಾಗಿತ್ತು. ನಾವೀಗ ಹೊರಟ ದಿಕ್ಕಿನಲ್ಲಿ ಒಂದೇ ಒಂದು ಕಡೆ ಸಾರಿಗೆ ಕುಣಿಕೆ ತಪ್ಪಿದರೂ ನಾವು ಸಮಯಕ್ಕೆ ಸರಿಯಾಗಿ ಪೋರ್ಟ್‌ಬ್ಲೇರ್ ತಲುಪಲು ಸಾಧ್ಯವಿರಲಿಲ್ಲ. ಹೊರಡುವಾಗ ಹಿಂದಿರುಗಿ ಬರಲು ನಾವು ಪಡ ಬೇಕಾದ ಪಾಡಿನ ಕಲ್ಪನೆಯೇ ನಮಗಿರಲಿಲ್ಲ.

ಅಂಡಮಾನ್ ಅಷ್ಟೊಂದು ಹಿಂದುಳಿದಿರುವ ಗೊಂಡಾರಣ್ಯವಾಗಿರು ವುದರಿಂದಲೇ ಅದು ನಮಗೆ ಆಕರ್ಷಕವಾಗಿರುವುದಲ್ಲವೆ? ಈಗನ್ನಿಸುತ್ತೆ ಆ ಗೋಳು ಆಧ್ವಾನ ತೊಂದರೆಗಳೆಲ್ಲ ಅಂಡಮಾನ್ ಅನುಭವದ ಅವಿಭಾಜ್ಯ ಅಂಶಗಳು ಎಂದು. ಮಲ್ಲಿಕ್ ಮಾತಿಗೆ ನಾವೆಲ್ಲ ಸಮ್ಮತಿ ಸೂಚಿಸಿ "ಮಾಯಾ ಬಂದರ್ ಚಲೋ" ಎಂದೆವು.

* * *

ಲಿಟಲ್ ಅಂಡಮಾನ್ ಒಂದು ಚಿಕ್ಕ ಹಡಗು. ಹಡಗಿಗೂ ದೋಣಿಗೂ ನಡುವಿನದೆಂದು ಹೇಳಬಹುದು. ಐವತ್ತು ಅಶ್ವಶಕ್ತಿಯ ಎರಡು ಡೀಜೆಲ್

This PDF was created using the Sonic PDF Creator.
To remove this watermark, please license this product at www.investintech.com

ಎಂಜಿನುಗಳನ್ನು ಉಳ್ಳದ್ದು. ಪೋರ್ಟ್‌ಬ್ಲೇರ್‌ನಿಂದ ಮಾಯಾಬಂದರಿಗೆ ಎರಡು ಹಾದಿಗಳಲ್ಲಿ ಹಡಗುಗಳು ಸಾಗುತ್ತವೆ ಆದರೆ ಲಿಟಲ್ ಅಂಡಮಾನ್‌ನಂಥ ಚಿಕ್ಕ ಹಡಗುಗಳು ನೂರಾರು ಪುಡಿ ದ್ವೀಪಗಳ ನಡುವಿನ ಸಮುದ್ರದ ಕ್ರೀಕ್ ಗಳಲ್ಲಿ ಸಂಚರಿಸುತ್ತವೆ. ದ್ವೀಪಗಳ ನಡುವೆ ಸಮುದ್ರ ದೊಡ್ಡ ನದಿಗಳಂತೆ ನಿಂತಿರುತ್ತದೆ. ಇವುಗಳನ್ನೇ ಕ್ರೀಕ್‌ಗಳೆಂದು ಕರೆಯುತ್ತಾರೆ.

ಈ ಕ್ರೀಕ್‌ಗಳ ನಡುವೆ ಪ್ರಯಾಣ ಮಾಡುತ್ತಿದ್ದರೆ ಸಮುದ್ರಯಾನಕ್ಕಿಂತ ನದಿಗಳಲ್ಲಿ ಯಾನ ಮಾಡಿದಂತೆ ಭಾಸವಾಗುತ್ತದೆ ಪ್ರತಿಯೊಂದು ದ್ವೀಪದ ಊರುಗಳಿಗೂ ಈ ಚಿಕ್ಕ ಹಡಗುಗಳು ಭೇಟಿಕೊಟ್ಟು ಟಪಾಲು, ಆಹಾರ ಸಾಮಗ್ರಿ, ಸೀಮೆಎಣ್ಣೆ ಬೆಂಕಿಪೊಟ್ಟಣ ಇತ್ಯಾದಿ ಅಗತ್ಯ ವಸ್ತುಗಳನ್ನೆಲ್ಲಾ ಸರಬರಾಜು ಮಾಡುತ್ತಾ ಹೋಗುತ್ತದೆ. ಈ ಹಡಗುಗಳು ಅಂಡಮಾನ್ ಜೀವನ ವಿಧಾನದ ಒಂದು ಪ್ರಮುಖ ಅಂಗವೆಂದು ಹೇಳಬಹುದು.

ನಾವು ಲಿಟಲ್ ಅಂಡಮಾನನ್ನು ಹತ್ತಿದಾಗ ಬೆಳಗಿನ ಝಾವ. ಎಳೆ ಬಿಸಿಲಿತ್ತು. ಡೆಕ್ಕಿನ ಮೇಲೆ ಕುಳಿತುಕೊಂಡು ಸುತ್ತಮುತ್ತಾ ನೋಡುತ್ತಾ ಹೋಗುವುದು ಚೆಂದವೆಂದು ಅಲ್ಲೇ ಕುಳಿತೆವು.

ಅಂಡಮಾನ್ ಸಮುದ್ರದಲ್ಲಿ ಒಂದು ಕಡೆ ಉಕ್ಕಿನ ವೇದಿಕೆಗಳನ್ನು ನಿರ್ಮಿಸಿರುವುದು ಕಂಡಿತು. ಮಲ್ಲಿಕ್ ಅದು ಭಾರತ್ ಪೆಟ್ರೋಲಿಯಂನವರು ಭೂಗರ್ಭ ತೈಲಕ್ಕಾಗಿ ಕೊರೆಯುತ್ತಿರುವ ಆಯಿಲ್ ರಿಗ್ ಎಂದು ಹೇಳಿದರು. ನಜೀರ್‌ಸಾಬರ ಬಾವಿ ಕೊರೆಯುವ ಯಂತ್ರಕ್ಕೂ ಇದಕ್ಕೂ ಯಾವುದೇ ಹೋಲಿಕೆಯೂ ಇರಲಿಲ್ಲ. ನಮ್ಮ ಹಡಗು ಅದನ್ನು ದಾಟುವ ಹೊತ್ತಿಗಾಗಲೇ ತಲೆಯ ಮೇಲೆ ಬಿಸಿಲು ಏರತೊಡಗಿತ್ತು. ಸೂರ್ಯ ಕೆಂಡದ ಉಂಡೆಯಂತೆ ಧಗ ಧಗಿಸತೊಡಗಿದ್ದ. ಬಿಸಿಲಿನ ಧಗೆಗೆ ಕಣ್ಣಿಟ್ಟು ನೋಡುವುದೇ ಪ್ರಯಾಸದ ಕೆಲಸ ವಾಗಿತ್ತು.

ಬೇರೆಲ್ಲಾದರೂ ತಲೆಯಮೇಲೆ ನೆರಳಿರುವ ಜಾಗಕ್ಕೆ ಹೋಗೋಣೆಂದರೆ ಹಡಗು ಜನಗಳಿಂದ ತುಂಬಿ ತುಳುಕುತ್ತಿತ್ತು. ಆದ್ದರಿಂದ ನಾವೇ ಒಂದು ತಾತ್ಕಾಲಿಕ ಸೂರನ್ನು ರಚಿಸಿಕೊಳ್ಳುವ ಹಂಚಿಕೆ ಮಾಡಿದೆವು. ಬೆಡ್‌ಶೀಟೊಂದನ್ನು ತೆಗೆದುಕೊಂಡು ಅದರ ನಾಲ್ಕೂ ಕಡೆಗೂ ಮೀನು ಹಿಡಿಯುವ ಫಿಷಿಂಗ್ ಲೈನನ್ನು ಕಟ್ಟಿ ಹಡಗಿನ ಡೆಕ್ಕಿನ ಮೇಲಿದ್ದ ಎಂತೆಂಥವೋ ಗೂಟಗಳಿಗೂ ಕೊಳವೆಗಳಿಗೂ

This PDF was created using the Sonic PDF Creator.
To remove this watermark, please license this product at www.investintech.com

ಕಟ್ಟಿದೆವು. ತಲೆಯ ಮೇಲೊಂದು ಅರೆಬರೆ ನೆರಳಾಯ್ತಷ್ಟೇ ಹೊರತು ಬಿಸಿಲಿನ ಧಗೆ ಕೊಂಚವೂ ಕಡಿಮೆಯಾಗಲಿಲ್ಲ.

ಪೋರ್ಟ್‌ಬ್ಲೇರ್‌ನಿಂದ ಬಾರಾಟಾಂಗ್‌ವರೆಗೂ ನಮ್ಮ ಎರಡೂ ಪಕ್ಕಗಳಲ್ಲಿ ಅಂಡಮಾನಿನ ಕಿಕ್ಕಿರಿದ ಅಡವಿಗಳಿಂದ ಆವೃತವಾದ ಪರ್ವತ ಪಂಕ್ತಿಗಳಿದ್ದವು. ನೂರಾರು ಮೈಲಿಯವರೆಗೆ ಕಣ್‌ನಟ್ಟು ಹುಡುಕಿದರೂ ಮರಗಳಿಲ್ಲದ ಒಂದು ಅಂಗೈಯ್ಯಗಲ ಭೂಮಿಯೂ ಕಾಣಲಿಲ್ಲ. ದೋಣಿ ಹೋದಲ್ಲಿಯವರೆಗೂ ಕಾಡು ನಿರಂತರವಾಗಿ ಮುಂದುವರಿಯುತ್ತಲೇ ಇತ್ತು. ಬಾರಾಟಾಂಗ್‌ನಿಂದ ಮುಂದಕ್ಕೆ ಮಾತ್ರ ಸಮುದ್ರತೀರದ ಲಕ್ಷಣ ಬದಲಾಗತೊಡಗಿತು. ಸಮುದ್ರ ಎಲ್ಲಿ ಕೊನೆಯಾಗುತ್ತದೆ ಭೂಮಿ ಎಲ್ಲಿ ಆರಂಭವಾಗುತ್ತದೆ ಎನ್ನುವುದೇ ಗೊತ್ತಾಗದಂತಾಗಿತ್ತು. ಇದಕ್ಕೆ ಕಾರಣ ಅಲ್ಲಿನ ಅಗಾಧ ಮ್ಯಾಂಗ್ರೂ ಮರದ ಕಾಡುಗಳು.

ಸಮುದ್ರದ ತಳ ಆಳವಿಲ್ಲದ ಕಡೆ ಉಪ್ಪುನೀರಿನಲ್ಲೇ ಬೆಳೆಯುವ ಅದ್ಭುತವಾದ ಮರ ಇದು. ಮ್ಯಾಂಗ್ರೂ ಮರಗಳು ನೀರಿಗಿಂತ ಎಷ್ಟೋ ಮೇಲೆ ಕಾಂಡ ಕವಲು ಕವಲಾಗಿ ಬೇರುಗಳಾಗಿ ರೂಪುಗೊಂಡಿರುತ್ತದೆ. ಇದಕ್ಕೆ ತಾಯಿ ಬೇರೇ ಇರುವುದಿಲ್ಲ. ಕೊಂಬೆಗಳಂತೆಯೇ ಬೇರುಗಳೂ ಅನಂತ ಕವಲುಗಳಾಗಿ ಒಡೆದು ನೆಲದತ್ತ ಹೋಗಿರುತ್ತವೆ. ಮ್ಯಾಂಗ್ರೂ ಮರದ ಕಾಡುಗಳನ್ನು ನೋಡಿದರೆ ಮೇಲೆ ಕೊಂಬೆಗಳಿರುವಂತೆಯೇ ಕೆಳಗೂ ಬೇರುಗಳ ಜಟಿಲ ಜಾಲದ ಬಲೆ ಕಾಣಿಸುತ್ತದೆ. ನಾನು ಪಶ್ಚಿಮ ಕರಾವಳಿಯ ತೀರದಲ್ಲಿ ಹೆಚ್ಚೆಂದರೆ ನೂರಾರು ಮರಗಳ ತೋಪುಗಳನ್ನು ನೋಡಿದ್ದೆ. ಆದರೆ ಇಲ್ಲಿನಂತೆ ಕೋಟ್ಯಾಂತರ ಮರಗಳ ಸಹಸ್ರಾರು ಎಕರೆ ವಿಸ್ತಾರದ ಅರಣ್ಯಗಳನ್ನು ನೋಡಿರಲಿಲ್ಲ.

ಪಶ್ಚಿಮ ಕರಾವಳಿಯಲ್ಲಿ ಕೆಲವೆಡೆ ಇವುಗಳನ್ನು ಕಡಿದು ಉರುವಲಾಗಿ ಉಪಯೋಗಿಸಿ ತೀರಗಳು ಸಮುದ್ರದ ಅಲೆಗಳಿಗೆ ತೆರೆದುಕೊಂಡಿದ್ದರಿಂದಲೇ ಸಮುದ್ರದ ಕೊರೆತಕ್ಕೆ ತುತ್ತಾಗಿವೆ. ಸಮುದ್ರದ ಅಲೆಗಳು ದಡಕ್ಕೆ ಬಂದು ಅಪ್ಪಳಿಸಿ ಕೊರೆಯುವುದನ್ನು ತಡೆಯುವುದರಲ್ಲಿ ಈ ಮ್ಯಾಂಗ್ರೂ ಮರಗಳು ಅತ್ಯಂತ ಉಪಯುಕ್ತವಾದವು. ಅನೇಕ ಕಡೆಗಳಲ್ಲಿ ಈ ಮ್ಯಾಂಗ್ರೂ ಮರದ ಬೇರುಗಳ ಜಾಲದಲ್ಲಿ ಸಮುದ್ರದ ಮಣ್ಣು ಬಂದು ನಿಂತು ಮತ್ತೆ ಭೂಮಿ ನಿರ್ಮಾಣವಾಗಿರುವ ಉದಾಹರಣೆಗಳೂ ಉಂಟು. ಈ ಸಸ್ಯ ಸಮೂಹ ಒಮ್ಮೆ ಸಾಲಾಗಿ ಸಮುದ್ರದ ಕಿನಾರೆಯಲ್ಲಿ ಅಡ್ಡಗಟ್ಟಿ ನಿಂತಿತೆಂದರೆ ಸಮುದ್ರದ ಯಾವ ಹೆದ್ದೆರೆಯೂ ಇದನ್ನು ಭೇದಿಸಿ ದಡದತ್ತ ನುಗ್ಗಲಾರದು. ಅಂಡಮಾನಿನಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಭೂಮಿ ಆರಂಭವಾಗುವುದಕ್ಕೆ ಅನೇಕ ಮೈಲುಗಳ ಮೊದಲೇ ಈ ಮ್ಯಾಂಗ್ರೋ ಮರಗಳ ಕಾಡುಗಳು ಆರಂಭವಾಗುವುದನ್ನು ನೋಡಬಹುದು.

ಇಷ್ಟು ವಿಸ್ತಾರವಾದ ಈ ಮ್ಯಾಂಗ್ರೋ ಮರಗಳ ಕಾಡಿನಲ್ಲಿ ಈ ಪರಿಸರಕ್ಕೇ ಒಗ್ಗಿಕೊಂಡು ವಿಕಾಸವಾಗುತ್ತಿರುವ ಯಾವುದಾದರೂ ಪ್ರಾಣಿ ವೆಯೋ? ಪಕ್ಷಿಗಳಿವೆಯೋ? ನಾವೆಲ್ಲಾ ಒದ್ದಂತೆ ಕಾಣಲಿಲ್ಲ. [illegible] ಪ್ರಶಾಂತನನ್ನು ಕೇಳಿದೆ. ಅವರೂ ತಮಗೆ ಗೊತ್ತಿಲ್ಲ ಎಂದು ಹೇಳಿದರು. [illegible] ಗಂತೂ ಆ ಮ್ಯಾಂಗ್ರೋ ಮರಗಳೆಡೆಯಲ್ಲಿ ಯಾವುದೂ ಕಾಣಲಿಲ್ಲ. ಅಲ್ಲೊಂದು ಕಡೆ ಸಮುದ್ರದ ಮೊಸಳೆಯೊಂದು ಮಾತ್ರ ಕಣ್ಣಿಗೆ ಬಿತ್ತು. ನಮ್ಮ ನದಿಗಳ ಮೊಸಳೆಗಿಂತ ಎರಡರಷ್ಟು ದೊಡ್ಡಕ್ಕೆ ಕಂಡಿತು ಮೈಯ್ಯೆಲ್ಲ ಕೆಸರು ಮೆತ್ತಿಕೊಂಡು ಕಪಟ ಸನ್ಯಾಸಿ ತರ ಕಣ್ಣುಮುಚ್ಚಿಕೊಂಡು ಧ್ಯಾನ ಸ್ಥಿತಿಯಲ್ಲಿತ್ತು. ಬಿಸಿಲಿನ ಝಳಕ್ಕೆ ಅರೆಗಣ್ಣು ಬಿಟ್ಟುಕೊಂಡು ಅದೇರೀತಿಯ ಧ್ಯಾನ ಸ್ಥಿತಿಯಲ್ಲಿದ್ದ ನಾನೂ ಎಚ್ಚೆತ್ತು ಇತರರಿಗೆ ಅದನ್ನು ತೋರಿಸುವುದರೊಳಗೆ ಹಡಗು ಮುಂದೆ ಹೋಗಿತ್ತು.

ಬಿಸಿಲಿನ ಝಳ ಮನಸ್ಸಿಗೆ ಒಂದು ಬಗೆಯ ಅಂತರ್ಮುಖತೆಯನ್ನು ತರುತ್ತದೆ. ಓಲಾಡುವ ಹಡಗು, ಮಿಂಚುವ ಅಲೆಗಳು, ಸರಿಯುವ ಕಾಡು, ದೂರದ ಪರ್ವತಗಳು ಎಲ್ಲ ತಮ್ಮ ಸ್ವಸ್ವರೂಪನ್ನು ಕಳಚಿಕೊಳ್ಳುತ್ತಾ ಯಾವುದೋ ಮನಃಸ್ಥಿತಿಯ ಪ್ರತಿಮೆಗಳಾಗತೊಡಗಿದವು.

ಮನುಷ್ಯನೇ ಇಲ್ಲದಿದ್ದಾಗಲೂ ಇವು ಹೀಗೇ ಇಲ್ಲಿಯೇ ನಿಜವಾಗಿಯೂ ಇದ್ದವೆ? ಇವನ್ನೆಲ್ಲಾ ಹೀಗೆ ನೋಡಿ ಪರಿಭಾವಿಸುತ್ತಿರುವ ನಾನು ನಿಜವೋ? ಈ ಅಂಡಮಾನ್ ನಿಜವೋ? ನಿಜ ಎಂದರೇನು?

ಅಂಡಮಾನಿನಲ್ಲಿ ಒಂದು ದ್ವೀಪದಲ್ಲಿ ಕೆಸರಿನ ಜ್ವಾಲಾಮುಖಿ ಇದೆಯಂತೆ. ಅದರಲ್ಲಿ ಬೆಂಕಿ, ಲಾವಾ ಬರುವುದರ ಬದಲು ಬರೀ ಬಿಸಿ ಕೆಸರು ಉಕ್ಕುತ್ತದಂತೆ. ಒಂದಲ್ಲ ಒಂದುದಿನ ಭಡಾರನೆ ಸಿಡಿದು ಈ ಅಂಡಮಾನ್ ಆಕಾಶದಲ್ಲರ್ಧ ಸಾಗರದಲ್ಲರ್ಧ ಮಾಯವಾಗುತ್ತದೆಯೆ? ಏನು ವಿಚಿತ್ರ ಮಾಯೆ ಇದು! ನನ್ನ ಕಣ್ಣೆದುರು ಕಾಣುತ್ತಿರುವ ಹದಿನೈದು ಗಜದ ಪುಟ್ಟ ದ್ವೀಪದ ಮೇಲು ಸಹ ಒಂದು ದಟ್ಟ ಕಾಡು ಹುಟ್ಟಿಕೊಂಡಿದೆಯಲ್ಲ! ಇಡೀ ಅಂಡಮಾನ್ ಒಂದು ಮಾಯಾಬಂದರ್!

This PDF was created using the Sonic PDF Creator.
To remove this watermark, please license this product at www.investintech.com

ದಡ ದಡ ದಡ ಸದ್ದಾಯ್ತು. ಯಾರೋ ಬಾಗಿಲು ಬಡಿಯುತ್ತಿದ್ದರು. ಡೆಕ್ಕಿನ ಮೇಲೆ ಮರದ ಒಂದು ಪುಟ್ಟ ರೂಮು ಇತ್ತು. ಅದರ ಒಂದು ಭಾಗದ ಗೋಡೆಗೆ ನಾವು ಒರಗಿ ಕುಳಿತುಕೊಂಡಿದ್ದೆವು. ನಾನು ಬೆಡ್‌ಶೀಟ್ ದಾರ ಕಟ್ಟುವ ಭರದಲ್ಲಿ ಅದರ ಚಿಲಕ ಹಾಕಿ ಅದಕ್ಕೆ ದಾರ ಕಟ್ಟಿದ್ದೆ. ಯಾರೋ ಹೊರಬರಲು ಆ ಪೆಟ್ಟಿಗೆ ರೂಮಿನ ಬಾಗಿಲನ್ನು ಒಳಗಿನಿಂದ ತಟ್ಟುತ್ತಿದ್ದರು. ನಾನು ಎಚ್ಚೆತ್ತು ಎದ್ದು ದಾರ ಬಿಚ್ಚಿ ಅದರ ಬಾಗಿಲು ತೆಗೆದೆ. ಅದರೊಳಗಿನಿಂದ ಒಬ್ಬ ವ್ಯಕ್ತಿ ಹೊರಬಂದು ಎತ್ತಲೋ ಹೋದ. ನಾನು ಮತ್ತೆ ಬಾಗಿಲು ಮುಚ್ಚಿ ದಾರ ಕಟ್ಟುವ ಮೊದಲು ಆ ಪೆಟ್ಟಿಗೆಗೂಡಿನ ಇಕ್ಕಟ್ಟಿನಲ್ಲಿ ಒಬ್ಬಳು ಹೆಂಗಸು ಕುಳಿತಿದ್ದಳು. ನನ್ನನ್ನು ನೋಡಿ ನನ್ನಕಡೆ ಪಿಳಿಪಿಳಿ ಕಣ್ಬಿಟ್ಟಳು. ವಿಚಿತ್ರವಾಗಿ ತಲೆ ಬಾಚಿಕೊಂಡು ಎಂತೆಂಥದೋ ಆಭರಣ ತೊಟ್ಟುಕೊಂಡಿದ್ದಳು. ವಿಲಕ್ಷಣವಾಗಿ ಹುಬ್ಬು ತಿದ್ದಿಕೊಂಡು ರೆಪ್ಪೆಗಳಿಗೆಲ್ಲಾ ಕಣ್ಕಪ್ಪು ಹಚ್ಚಿಕೊಂಡಿದ್ದಳು.

ಎಲಾ ಇವಳ! ಇವಳು ಯಾವಾಗ ಈ ರೂಮಿನೊಳಗೆ ಹೋದಳು? ನಾವು ಕುಳಿತಾಗಿನಿಂದಲೂ ಯಾರೂ ಒಳಗೆ ಹೋಗಿದ್ದು ನೋಡಿರಲಿಲ್ಲ! ಯಾರಾದರೂ ಅಪಹರಿಸಿ ತಂದಿರುವ ಅಂಡಮಾನಿನ ಸುಂದರಿಯೆ? ಕಿಟಕಿಗಳಿಲ್ಲದ ಈ ಗೂಡಿನ ಇಕ್ಕಟ್ಟಿನಲ್ಲಿ ಅಲ್ಲಾಡದೆ ಬೆಳಗಿನಿಂದಲೂ ಇವಳಿಲ್ಲಿ ಹೇಗೆ ಕುಳಿತಿದ್ದಾಳೆ? ಬಾಗಿಲಿನಿಂದ ಈಗ ಆಚೆ ಹೋದವನು ಯಾವನು? ಒಬ್ಬರಿಗೆ ಜಾಗ ಇಲ್ಲದ ಈ ಪೆಟ್ಟಿಗೆಯೊಳಗೆ ಹೇಗೆ ಇಬ್ಬರು ಇದ್ದರು? ಯಾರೀ ಮತ್ಸ್ಯಕನ್ಯೆ? ಮತ್ತೆ ಬಾಗಿಲು ಮುಚ್ಚಿ ದಾರ ಕಟ್ಟುವ ಮೊದಲು ಚಕಚಕಚಕ ನೂರು ಕಲ್ಪನೆಗಳು ಮನಸ್ಸಿನಲ್ಲಿ ಮೂಡಿ ಮುಳುಗಿದವು.

ಬಾಗಿಲು ಮುಚ್ಚಿದರೂ ಕಲ್ಪನೆಯ ಬಾಗಿಲು ತೆರೆದುಕೊಂಡೇ ಇತ್ತು.

ಹಾಸನದ ಶಿರಡಿ ಘಾಟಿನ ಬಳಿ ಎಲ್ಲೆಂದರಲ್ಲಿ ಬಿದ್ದಿರುವ ನಿರೋಧ್‌ಗಳ ಬಗ್ಗೆ ನಾನು ನಡೆಸಿದ ಪತ್ತೇದಾರಿ ಕೆಲಸ ಹಠಾತ್ತನೆ ಯಾಕೋ ಜ್ಞಾಪಕಕ್ಕೆ ಬರತೊಡಗಿತು. ದಾರಿ ಪಕ್ಕದ ಚಾದಂಗಡಿಯವನ ಬಳಿ ಅಲ್ಲಿ ಮಾತಾಡುತ್ತಾ "ಇದೇನಯ್ಯಾ ಇಲ್ಲಿ ಕಾಡಿನಲ್ಲಿ ಮರಗಿಡ ಹೂ ಬಿಡುವುದರ ಬದಲು ನಿರೋಧ್ ಬಿಡುತ್ತವಾ?'' ಎಂದೆ.

"ಓ ನಿಮಗೆ ಗೊತ್ತಿಲ್ಲವಾ ಈಗ ಹೊಸತರಾ ಹುಡುಗೀರು ಶುರ್‍ವಾಗಿದ್ದಾರೆ ಸಾರ್'' ಎಂದ.

"ಏನಪ್ಪಾ ಅದು'' ಎಂದು ಚಕಿತನಾಗಿ ಹುಬ್ಬೇರಿಸಿದೆ.

This PDF was created using the Sonic PDF Creator.
To remove this watermark, please license this product at www.investintech.com

"ಹೈವೇ ಗರ್ಲ್ಸ್ ಅಂತ"

"ಹೊಸತರಾ ಸಾರ್. ಹೊಸತರಾ! ಅವರಿಗೆ ಮನೆ ಇಲ್ಲಾ ಮಠಾ ಇಲ್ಲ. ಒಂದ್ ಲಾರೀಲಿ ಬಂದು ಇಲ್ಲಿಳೀತಾರೆ. ಒಂದ್ಲೋಟ ಚಾ ಕುಡಿದು ಇನ್ನೊಂದು ಲಾರಿ ಹತ್ಕೊಂಡು ಇನ್ನೆತ್ಲಾಗೊ ಹೋಗ್ತಾರೆ. ಇಲ್ಲಿ ಇದ್ದೋಳು ನಾಳೆ ಇದೇ ಹೊತ್ನಲ್ಲಿ ಪಂಜಾಬ್‌ನಲ್ಲೋ ಕಲ್ಕತ್ತಾದಲ್ಲೋ, ಅವರದ್ದೇನಿದ್ರೂ ಬರೇ ಹೈವೇ ಟ್ರಾಫಿಕ್ ನೋಡ್ಕೊಳ್ಳೋದು."

ಅಷ್ಟರಲ್ಲಿ ಆ ಚಾ ಅಂಗಡಿಯಲ್ಲಿ ಚಾ ಕುಡಿಯುತ್ತಿದ್ದ ಹಲವಾರು ಜನ ಬಾಯಿ ತೆರೆದರು. ಹೆಂಗಸರ ವಿಷಯ ಅಂದರೆ ತಲೆಗೊಬ್ಬೊಬ್ಬ ಒಂದೊಂದು ಬೊಗಳಲು ತಯ್ಯಾರಿರುತ್ತಾರೆ. ನಾನು ಆ ಹುಡುಗಿಯರ ಬಗ್ಗೆ ಯೋಚಿಸುತ್ತಿದ್ದೆ. ಮನೆ ಮಠ ಇಲ್ಲದವರೆಂದರೆ ಹೇಗೆ? ಅವರು ದುಡಿದ ಹಣವನ್ನು ಎಲ್ಲಿಡ್ತಾರೆ? ಅವರಿಗೆ ಕಾಯಿಲೆ ಕಸಾಲೆ ಬಂದರೆ ಯಾರು ನೋಡಿಕೊಳ್ಳುವವರು? ಏನೂ ಇಲ್ಲದ ಅವರು ಯಾಕಾದರೂ ದುಡಿಯುತ್ತಾರೆ?

"ಹಾಗೆಂದರೆ ದಿಕ್ಕಿಲ್ಲದವರೇನಯ್ಯಾ?" ಎಂದೆ.

"ದಿಕ್ಕಿಲ್ಲದೋರು ಅಂದರೆ ಭಿಕಾರಿಗಳಲ್ಲಾ! ಎಷ್ಟೋ ಹುಡ್ಗೀರು ದುಡಿದು ಅವರೇ ಲಾರಿ ಮಡಗಿದಾರಂತೆ! ಮನೆ ಮಠ ಇಲ್ಲದವರು ಅಂದ್ರೆ ಈಗ ಡ್ರೈವರ್ನ ತಗೊಳ್ಳಿ. ಅವರಿಗೆ ಯಾವುದು ಮನೆ ಮಠ ಜಾತಿ ಮತ? ಕನ್ಯಾಕುಮಾರಿಯಿಂದ ಜಲಂದರ್, ಅಲ್ಲಿಂದ ಕಲ್ಕತ್ತಾ, ಅಲ್ಲಿಂದ ಭುವನೇಶ್ವರ, ಗಾಡಿ ಓಡಿಸ್ತಾ ಓಡಿಸ್ತಾ ಹೈವೇ ಮೇಲೆ ಹಣ್ಣಾಗ್ತಾರೆ. ಒಂದಲ್ಲ ಒಂದು ದಿನ ಹೈವೇ ಮೇಲೇ ನಮಶ್ಶಿವಾಯ ಅಂತಾರೆ. ಒಬ್ಬಿಬ್ರಿಗೆ ನಾಮ್‌ಕಾವಸ್ಥೆ ಹೆಣ್ತೀರು ಎಲ್ಲೋ ಇರ್ತಾರೆ ಅಷ್ಟೇ"–

ಹೇಗೆ ಒಂದೊಂದು ನಾಗರೀಕತೆಯ ವಸ್ತು ಸಹ ಮನುಷ್ಯನ ಬದುಕಿನ ಮೇಲೆ ಅವನ ಜೀವನ ಧರ್ಮದ ಮೇಲೆ ಪ್ರಭಾವ ಬೀರುತ್ತೆ! ಒಬ್ಬ ನನ್ನ ಫ್ರೆಂಡು, ಸಮಾಜ ವಿಜ್ಞಾನಿ ಅಡಿಗೆಗೆ ಪ್ರೆಷರ್ ಕುಕ್ಕರ್ ಒದಗಿಸಿ ಮಧ್ಯಮ ವರ್ಗದ ಮಹಿಳೆಯರಿಗೆ ಹೆಚ್ಚು ಪುರುಸೊತ್ತು ಒದಗಿರೋದರಿಂದ ಅವರಲ್ಲಿ ಅನೈತಿಕತೆ ಹೆಚ್ಚುತ್ತಾ ಇದೆಯೆಂತ ವಾದ ಮಾಡಿದ್ದ. ಇದು ನಿಜವೋ ಸುಳ್ಳೊ ಗೊತ್ತಿಲ್ಲ. ಆದರೆ ಇವು ಒಂದೊಂದೂ ನಮ್ಮ ಜೀವನ ಶೈಲಿಯ ಮೇಲೆ ನಾವು ಊಹಿಸೋದಕ್ಕಿಂತ ಆಳವಾದ ಪರಿಣಾಮ ಬೀರ್ತಿವೆ ಅನ್ನೋದನ್ನಂತೂ ಒಪ್ಪಲೇಬೇಕಾಗುತ್ತೆ.

This PDF was created using the Sonic PDF Creator.
To remove this watermark, please license this product at www.investintech.com

ಹೆದ್ದಾರಿಗಳನ್ನು ನಿರ್ಮಿಸುತ್ತಿದ್ದಂತೆಯೇ ಹೆದ್ದಾರಿಯ ಡ್ರೈವರ್‌ಗಳು, ಅವರಿಗೇ ದಾರಿಬದಿಯ ವಸತಿಗೃಹಗಳು, ಹೆದ್ದಾರಿ ಹುಡುಗಿಯರು!

"ಅಲ್ಲಾ ಸಾರ್ ಈಗ ನೋಡಿ, ಬೊಂಬಾಯಿ ಕಲ್ಕತ್ತಾ ಸೂಳೆ ಕೇರಿಗಳಲ್ಲಿ ಸೇರ್ಕೊಂಡು ತಲೆ ಹಿಡಿಯೋರು ಗೂಂಡಾಗಳು ಪೋಲೀಸ್ನೋರು ಇವ್ರಿಗೆಲ್ಲಾ ಸಂಬಳಾ ಕೊಟ್ಕೊಂಡು ದಂಧೆ ನಡೆಸೋದಕ್ಕಿಂತ ಇದು ಉತ್ತಮ ಅಲ್ಲವೆ? ಅಷ್ಟು ದುಡ್ಡೂ ಇವ್ರಿಗೇ ಉಳೀತೋ! ಜೊತೇಗೆ ದೇಶ ಎಲ್ಲ ತಿರಗಾಟ ಮಾಡಬಹುದೋ! ನಾವೂ ನೀವೂ ಎಷ್ಟು ಊರು ನೋಡಿದ್ದೇವೆ?"–

ಹೆದ್ದಾರಿಯ ಹೊಸ ಸಂಸ್ಕೃತಿಯೊಂದು ತಯಾರಾಗುತ್ತಿದೆಯೆ! ಯಾವು ದಕ್ಕೂ ಸಂಬಂಧಿಸದ ಎಲ್ಲಿಯವರೂ ಅಲ್ಲದ ಜನಾಂಗ! ಹೇಗಾದರೂ ಮಾಡಿ ವೀಸಾ ಗಿಟ್ಟಿಸಿ ಫಾರಿನ್ನಿಗೆ ಹಾರಿಬಿಡಬೇಕೆಂದೇ ಓದುತ್ತಿರುವ ಲಕ್ಷಾಂತರ ಮಂದಿ ಯುವಕರು ನಮ್ಮಲ್ಲಿಲ್ಲವೆ?

ಭಾರತ ಅಸಹನೀಯವಾಗುತ್ತಿದೆ! ವಾಸ್ತವದ ಕ್ರೂರ ವರ್ತಮಾನದಿಂದ ತಪ್ಪಿಸಿಕೊಳ್ಳಲು ಒಬ್ಬೊಬ್ಬರು ಒಂದೊಂದು ಮಾರ್ಗ ಹಿಡೀತಾ ಇದ್ದಾರೆ. ಮತಾಂತರ ಹೊಂದಿದರೆ ಪಾರಾಗಬಹುದೆಂದು ಒಂದಷ್ಟು ಜನ, ದೇಶಾಂತರ ಪಕ್ಷಾಂತರಗಳಿಂದ ಪಾರಾಗಬಹುದೆಂದು ಒಂದಷ್ಟು ಜನ! ಪಂಜಾಬಿನ ಉಗ್ರಗಾಮಿಗಳು ಕೋವಿಯ ನಳಿಗೆಯಿಂದ!

"ಇವರನ್ನೆಲ್ಲಾ ಯಾವ ಊರಿನವರೂ ಅಂತ ಹೇಳ್ತೀರಾ ಸಾರ್. ಎಲ್ಲಾ ಭಾಷೆ ಮಾತಾಡುತ್ತಾರೆ. ಇಲ್ಲಿ ಇಳಿದು ನಮ್ಮ ಜೊತೆ ಕನ್ನಡ ಮಾತಾಡ್ತಾರೆ. ಮತ್ತೆ ಸರ್ದಾರ್ಜಿ ಟ್ರಕ್ಕು ಬರತ್ಲೂ ಕೈ ಅಡ್ಡಾಕಿ ಪಂಜಾಬಿಲಿ ಮಾತಾಡ್ತಾರೆ. ಅವಳಾದ್ರು ತಾನು ಯಾವ ಊರಿನೋಳೂಂತ ಹೇಳ್ಕೋತಾಳೆ ಹೇಳಿ? ಅದಕ್ಕೇ ಹೇಳಿದ್ದು ಹೆದ್ದಾರಿ ಹುಡುಗಿರು ದಿಕ್ಕಿಲ್ಲದವರು ಅಂತ. ಹಾಗಂದ್ರೆ ಇನ್ನೇನೂ ಅಲ್ಲ ಅವರಿಗೊಂದು ವಿಳಾಸವೇ ಇಲ್ಲ"–

ಟೀ ಅಂಗಡಿ ಗಿರಾಕಿಗಳ ಮಾತುಗಳು ತುಣುಕು ತುಣಕಾಗಿ ಕಿವಿ ಮೇಲೆ ಬೀಳುತ್ತಲೇ ಇದ್ದವು.

ನಾನು ದೂರದಲ್ಲಿನಿಲ್ಲಿಸಿದ್ದ "ಹೆದ್ದಾರಿ ನಂ. 14" ಬೋರ್ಡನ್ನು ನಿಟ್ಟಿಸುತ್ತಾ ಯೋಚಿಸುತ್ತಲೇ ಇದ್ದೆ.

ಸ್ಟೀರಿಂಗ್ ಹಿಡಿದು ಆಕ್ಸಿಲರೇಟರ್ ಮೇಲೆ ಡ್ರೈವರ್ ಕಾಲಿಟ್ಟಾ ಅಂದರೆ ಮುಗಿಯಿತು.

This PDF was created using the Sonic PDF Creator.
To remove this watermark, please license this product at www.investintech.com

ಇಡೀ ಭಾರತ ಒಂದು ಜಂಗಮ ವಿಶ್ವವಾಗಿ ಬಿಡುತ್ತದೆ. ದೇಶ ಊರು ಮನೆ ಮರ ಜಾತಿ ಎಲ್ಲ ಟಿವಿ ಪರದೆಯ ಮೇಲೆ ಮೂಡುವ ಚಿತ್ರಗಳಂತೆ ಎದುರಿನ ವಿಂಡ್ ಸ್ಕ್ರೀನ್ ಮೇಲೆ ಮೂಡಿ ಮುಳುಗುತ್ತೆ.

ನೂರಾರು ಅಶ್ವಶಕ್ತಿಯ ಡೀಸೆಲ್ ಇಂಜಿನು ಟನ್‌ಗಟ್ಟಲೆ ತೂಕ ಹೊತ್ತು ನೆಲ ನಡುಗುವಂತೆ ಗರ್ಜಿಸುತ್ತಾ ನುಗ್ಗುತ್ತದೆ.

ಟ್ರಕ್ ಸಾಗುವ ರಭಸಕ್ಕೆ ಅಪ್ಪಳಿಸುವ ಗಾಳಿಯಲ್ಲಿ ಸುತ್ತಲಿನ ಗಿಡಮರಗಳೂ ಸೇತುವೆಗಳೂ ಅದುರುತ್ತವೆ.

ಟ್ರಕ್ ಮೇಲಿನ ಅಟ್ಟದಲ್ಲೆಲ್ಲೋ ಸ್ಟಿಯರಿಂಗಿನ ಲಗಾಮು ಹಿಡಿದು ಕುಳಿತ ಡ್ರೈವರಿಗೆ ಅವನ ಪಕ್ಕ ಪಟ್ಟದ ರಾಣಿಯಂತೆ ಕುಳಿತಿರುವ ಹೈವೇ ಹುಡುಗಿಗೆ ಕೆಳಗೆ ಓಡಾಡುವ ಮನುಷ್ಯರು ಹರಿದಾಡುವ ಹುಳುಗಳಂತೆ ಕ್ಷುದ್ರ ಜೀವಿಗಳಾಗಿ ಕಾಣುತ್ತಾರೆ. ಮತ್ತೆ ಅವಳು ನೆಲ ಮುಟ್ಟುವುದು ಭೂಪಾಲ್‌ನಲ್ಲೋ ಸಿಮ್ಲಾ ದಲ್ಲೋ ಲೂದಿಯಾನದಲ್ಲೋ!

ಪೆಟ್ಟಿಗೆ ರೂಮಿನ ಕದ ತೆರೆದು ನನ್ನ ತಲೆ ಆಲೋಚನೆಗಳ ನಿರಂತರ ಧಾರೆಗೆ ಸಿಕ್ಕಿಕೊಂಡಿತ್ತು. ಹೈವೇ ಹುಡುಗಿ ತರ ಇವಳೊಬ್ಬಳು ವಾಟರ್‌ವೇ ಹುಡುಗಿಯೇ?

"ಶಾಂತ, ಆ ರೂಮೊಳಗೊಬ್ಬಳು ಮತ್ಸ್ಯಕನ್ಯೆ ಕುಳಿತಿದ್ದಾಳೆ ನೋಡಿ ದಿರಾ?" ಶಾಂತ ಅವರಿಗೆ ಕೇಳಿದೆ.

"ನೋಡಿದೆ"

"ನೀವು ನೋಡಿದಾಗ ಒಬ್ಳೇ ಇದ್ಲೋ ಇಬ್ಬರಿದ್ದರೋ?"

"ಒಬ್ಬಳೇ"

"ಹಾಗಾದರೆ ಈಗ ಒಬ್ಬ ಗಂಡಸು ಅದರೊಳಗಿಂದ ಹೊರಬಂದನಲ್ಲಾ ಅವನು ಯಾವಾಗ ಒಳಗೆ ಹೋದ?"

"ನಾವು ಯಾರೂ ಒಳಗೆ ಹೋಗಿದ್ದನ್ನ ನೋಡಲಿಲ್ಲಪ್ಪ. ಬಹುಶಃ ಹಡಗಿನ ಇಂಜಿನ್ ರೂಮಿನಿಂದ ಮೇಲೆ ಹತ್ತಿ ಬರೋದಕ್ಕೆ ಒಳಗೆ ಏಣಿ ಇರಬಹುದು ಕಣ್ರಿ"

"ಹೌದ? ಅವಳ್ಯಾಕೆ ಅಲ್ಲಿ ಇಕ್ಕಟ್ಟಿನಲ್ಲಿ ಕುಳಿತಿದ್ದಾಳೆ."

"ಹೊರಗಡೆ ಬಿಸಿಲಿಲ್ಲವೆ. ಆಗಲೇ ಒಂದು ಸಾರಿ ಬಾಗಿಲು ತೆಗೆದಾಗ ನನ್ನನ್ನೂ ಒಳಗಡೆ ಬಾಮ್ಮ ಅಂತ ಹಿಂದೀಲಿ ಕರದ್ಲು"

This PDF was created using the Sonic PDF Creator.
To remove this watermark, please license this product at www.investintech.com

"ಒಳಗೆ ಹೋಗೋದು ಡೇಂಜರ್ ಕಾಣ್ಸುತ್ತೆ."

"ಹೋಗ್ರಿ ಹೋಗ್ರಿ. ಯಾವಳೋ ಬಡಪಾಯಿ ಹೆಂಗ್ಸು ಬಿಸಿಲು ತಾಳಲಾರದೆ ಅಲ್ಲಿ ಕುಳಿತಿದ್ದಾಳೆ. ನೀವು ನೂರೆಂಟು ಆಲೋಚನೆ ಮಾಡಿಕೊಂಡು ಡೇಂಜರ್ ಅಂತ ಹೇಳ್ತೀರಾ?"

ಪಟ್ಟದ ರಾಣಿಯಂತೆ ಡ್ರೈವರ್ ಪಕ್ಕ ಕುಳಿತಿರುತ್ತಾಳೆಂದು ಕಲ್ಪಿಸಿ ಕೊಂಡ ಹೈವೇ ಹುಡುಗಿಗೂ ಇಲ್ಲಿ ಪೆಟ್ಟಿಗೆಯೊಳಗೆ ಸಿಕ್ಕಿಕೊಂಡಂತೆ ಕುಳಿತಿದ್ದ ವಾಟರ್ ವೇ ಹುಡುಗಿಗೂ ಯಾವ ತರದ ಸಾದೃಶ್ಯವೂ ಕಾಣಲಿಲ್ಲ.

ಪ್ರಯಾಣಕ್ಕೂ ಆಲೋಚನಾ ಲಹರಿಗೂ ಏನು ಸಂಬಂಧ ಹೇಳಿ. ನಾನು ಪ್ರಯಾಣ ಮಾಡುವಾಗೆಲ್ಲ ನೋಡಿದ್ದೇನೆ. ನನ್ನ ಆಲೋಚನಾ ಲಹರಿ ಲಂಗು ಲಗಾಮಿಲ್ಲದ ಕುದುರೆ ತರ ಓಡುತ್ತೆ. ಬಹುಶಃ ಮನಸ್ಸೂ ಸಹ ದೇಹದಂತೆ ನೆನಪುಗಳ ಅನುಭವಗಳ ಭೂತಕಾಲದಲ್ಲಿ ಪ್ರಯಾಣ ಮಾಡತೊಡಗುತ್ತದೆ ಎಂದು ಕಾಣುತ್ತೆ.

ಸಂಜೆಯಾಗತೊಡಗಿದ್ದು ಬಿಸಿಲಿನ ಝಳದಲ್ಲಿ ಗೊತ್ತಾಗಲಿಲ್ಲ. ದೂರದಲ್ಲಿ ಒಂದು ದ್ವೀಪದಿಂದ ಹೊಗೆ ಏಳುತ್ತಿತ್ತು. ಯಾರೋ ಅದೇ ಲಾಂಗ್ ಐಲೆಂಡ್ ಎಂದರು. ದೂರದರ್ಶಕದಲ್ಲಿ ನೋಡಿದಾಗ ಕೆಲವು ಕಾರ್ಖಾನೆಗಳೂ ಮನೆಗಳೂ ಅಲ್ಲಿ ಕಂಡವು.

This PDF was created using the Sonic PDF Creator.
To remove this watermark, please license this product at www.investintech.com



# 12. ಓಂಗೇ

ಲಾಂಗ್ ಐಲೆಂಡ್ ಕಾಣತೊಡಗಿದಾಗ ನಾನು ನ್ಯಾವಿಗೇಟರ್ ರೂಮಿನ ಹತ್ತಿರ ನಿಂತಿದ್ದೆ. ಆ ರೂಮಿನೊಳಗೊಬ್ಬ ಅಸ್ತವ್ಯಸ್ತವಾಗಿ ಕುಳಿತುಕೊಂಡು ನಾಲ್ಕಾರು ಜನರ ಜೊತೆ ಹರಟುತ್ತಾ ಇದ್ದ. ಲಾಂಗ್ ಐಲೆಂಡ್ ಬಂತೆಂಬ ಮಾತು ಕೇಳಿದೊಡನೆ ಚಕ್ಕನೆ ಎದ್ದುನಿಂತು ಇಣುಕಿ ನೋಡಿದ. ಲಾಂಗ್ ಐಲೆಂಡ್ ಹತ್ತಿರ ಹತ್ತಿರ ಆದಂತೆ ನಿಧಾನವಾಗಿ ಅವನ ವ್ಯಕ್ತಿತ್ವ ಪರಿವರ್ತನೆಯಾಗತೊಡಗಿತು. ಬಟ್ಟೆಗಳನ್ನೆಲ್ಲಾ ನೀವಿಕೊಂಡು ಕ್ರಾಪು ತಿದ್ದಿಕೊಳ್ಳತೊಡಗಿದ. ಸಂಜೆಯಾಗ ತೊಡಗಿತ್ತು. ಆಗತ್ಯವಿಲ್ಲದಿದ್ದರೂ ಕಪ್ಪು ಕನ್ನಡಕ ಹಾಕಿಕೊಂಡ. ನಾನು ಆ ಮನುಷ್ಯನಲ್ಲಾಗುತ್ತಿದ್ದ ಬದಲಾವಣೆಗಳನ್ನು ಕುತೂಹಲದಿಂದ ಗಮನಿಸುತ್ತಲೇ ಇದ್ದೆ. ಪಕ್ಕದವರೊಡನೆ ಸ್ವಾಭಾವಿಕವಾಗಿ ಹರಟುತ್ತಿದ್ದವ ಇದ್ದಕ್ಕಿದ್ದಂತೆ ಕೊಂಚ ಗತ್ತಿನಿಂದ ಮಾತಾಡ ತೊಡಗಿದ. ನ್ಯಾವಿಗೇಟರಿಗೆ ಬಂದರಿನ ಇಂಥ ಕಡೆಯಲ್ಲೇ ಹಡಗು ನಿಲ್ಲಿಸೆಂದು ಆರ್ಡರ್ ಕೊಡುವ ಧಾಟಿಯಲ್ಲಿ ಹೇಳಿದ.

This PDF was created using the Sonic PDF Creator.
To remove this watermark, please license this product at www.investintech.com

ಲಾಂಗ್ ಐಲೆಂಡ್ ಬಂದರಿನಲ್ಲಿ ಹಡಗು ನಿಲ್ಲುವ ಹೊತ್ತಿಗೆ ಆಲ್ಲೊಂದು ಅಂಬಾಸಿಡರ್ ಕಾರೂ, ಹಲವಾರು ಜನರೂ, ಹಾರ ತುರಾಯಿಗಳೊಂದಿಗೆ ಗುಂಪುಕಟ್ಟಿ ನಿಂತಿದ್ದು ಕಾಣಿಸಿತು. ಈತ ಆ ಮಂದಿಯನ್ನು ಕಂಡು ತೃಪ್ತಿಯ ನಿಟ್ಟುಸಿರು ಬಿಟ್ಟು ರಾಜಠೀವಿಯಲ್ಲಿ ಮುಂದೆ ಬಂದು ಡೆಕ್ಕಿನ ಮೇಲೆ ನಿಂತುಕೊಂಡನು. ಹೊರಗೆ ಬಂದರು ಕಟ್ಟೆಯಲ್ಲಿ ಕಾದಿದ್ದವರು ಈತನನ್ನು ಕಂಡೊಡನೆ ಭಕ್ತಿ ಗೌರವಗಳಿಂದ ಅಕ್ಕಪಕ್ಕದವರಿಗೆ ಅಲ್ಲಿ ನಿಂತಿದ್ದಾರೆಂದು ತೋರಿಸಿಕೊಳ್ಳುತ್ತಿದ್ದರು.

ಲಾಂಗ್ ಐಲೆಂಡ್ ಬಂದರುಕಟ್ಟೆ ಹಡಗಿನ ಡೆಕ್ಕಿನ ಮಟ್ಟಕ್ಕೇ ಇತ್ತು. ಹಡಗಿಗೂ ಕಟ್ಟೆಗೂ ನಡುವೆ ಕೇವಲ ಎರಡು ಅಡಿ ಜಾಗ ಬಿಟ್ಟಿರಬಹುದು. ಇಳಿಯುವವರೆಲ್ಲರೂ ಡೆಕ್ಕಿನಿಂದ ಬಂದರು ಕಟ್ಟೆಗೆ ದಾಟಿಕೊಂಡರು. ಆದರೆ ಈತ ಮಾತ್ರ ನಿಂತೇ ಇದ್ದ. ಅಲ್ಲಿ ಕಾದಿದ್ದವರು ಹಲಗೆ ತಂದು ಡೆಕ್ಕಿಗೂ ಕಟ್ಟೆಗೂ ಹಾಕಿದನಂತರ ಈತ ರಾಜಗಾಂಭೀರ್ಯದಿಂದ ಆಚೆಗೆ ದಾಟಿಕೊಂಡು ಅವರ ಹಾರ ಹೂಗುಚ್ಛಗಳನ್ನು ಸ್ವೀಕರಿಸಿದ. ಈತ ಯಾರೋ ಸ್ಥಳೀಯ ರಾಜಕಾರಣಿಯೋ ಅಥವಾ ಉನ್ನತಾಧಿಕಾರಿಯೋ ಇರಬೇಕು. ಪೋರ್ಟ್‌ಬ್ಲೇರ್‌ನಿಂದ ಕೇವಲ ಒಬ್ಬ ಪ್ರಯಾಣಿಕನಂತೆ ಬಂದ ಈತ ಲಾಂಗ್ ಐಲೆಂಡ್ ಹತ್ತಿರಾಗುತ್ತಿದ್ದಂತೆ ಪರಿವರ್ತನೆಯಾಗುತ್ತ ಬಂದದ್ದು ಮಾತ್ರ ವಿಚಿತ್ರವಾಗಿ ನನಗೆ ಕಂಡಿತು.

ಅವರೆಲ್ಲಾ ಗೌರವಾದರಪೂರ್ವಕವಾಗಿ ಈತನನ್ನು ಕರೆದೊಯ್ದ ನಂತರ ಲಿಟಲ್ ಅಂಡಮಾನ್ ಹಡಗಿನ ಉಗ್ರಾಣದಿಂದ ಟಿನ್ನುಗಳೂ ಮೂಟೆಗಳೂ ಡ್ರಂಗಳೂ ಬರತೊಡಗಿದವು. ನಮಗೆ ಇದರ ಮುಂದಿನ ನಿಲ್ದಾಣವೇ ರಂಗತ್ ಎಂದು ಯಾರೋ ಹೇಳಿದರು. ಈ ಹಡಗು ಅಲ್ಲಿಂದ ವಾಪಸ್ ಹಿಂದಿರುಗುತ್ತದೆಂದೂ, ಬಂದರಿನಿಂದ ಊರಿಗೆ ಏಳೆಂಟು ಕಿಲೋಮೀಟರು ದೂರವಾಗುತ್ತದೆಂದೂ, ಒಂದು ಸಾರಿಗೆ ಬಸ್ಸನ್ನು ಬಿಟ್ಟರೆ ರಂಗತ್ ಊರಿಗೆ ಬಂದರಿನಿಂದ ಯಾವುದೇ ಪ್ರಯಾಣ ಸೌಲಭ್ಯ ಇಲ್ಲವೆಂದೂ ಹೇಳಿದರು. ಆಗಲೇ ಕತ್ತಲು ಸಮೀಪಿಸತೊಡಗಿತ್ತು. ತೀರ ಕತ್ತಲಾದರೆ ರಂಗತ್‌ನಲ್ಲಿ ವಸತಿ ಸೌಲಭ್ಯಕ್ಕೆ ಏನು ಮಾಡುವುದೆಂದು ನಾವು ಚಿಂತಿಸಿದೆವು.

ಅಂಡಮಾನಿನಲ್ಲಿ ಈಗ ವಿಚಿತ್ರ ಸಾಮಾಜಿಕ ಪರಿಸರ ಇದೆ. ಅಂಡಮಾನಿನಲ್ಲಿ ನೆಲೆಸಿರುವವರಿಗೆ ಜಾತಿ ಕೋಮುಗಳಾವುವೂ ಇಲ್ಲ. ಭಾಷಾ ಭೇದಗಳಿರುವುವಾದರೂ ಈಗ ಹೆಚ್ಚು ಕಡಿಮೆ ಎಲ್ಲರೂ ಮಾತನಾಡುವುದು ಹಿಂದೀ

This PDF was created using the Sonic PDF Creator.
To remove this watermark, please license this product at www.investintech.com

ಭಾಷೆಯನ್ನು. ಹಾಗಾಗಿ ಭಾಷಾ ಭೇದವೂ ಅಳಿಸಿಹೋಗತೊಡಗಿದೆ. ನೀವು ಯಾವ ಕೋಮಿನವರೆಂದು ನಾವೇ ಒತ್ತಿ ಪ್ರಶ್ನಿಸಿದರೆ ತಮ್ಮ ಪೂರ್ವಿಕರು ಭಾರತದ ಎಲ್ಲಿಂದ ಬಂದವರೆಂದು ಹೇಳಬಲ್ಲರಷ್ಟೇ. ಆದರೆ ಅವರಿಗೆ ತಮ್ಮ ಮೂಲದ ಕುಲಗೋತ್ರಗಳೊಂದೂ ಗೊತ್ತಿರುವುದಿಲ್ಲ. ಮಸೀದಿ, ಚರ್ಚು, ದೇವಸ್ಥಾನಗಳು ಎಲ್ಲೋ ಮೂಲೆಗಳಲ್ಲಿರಬಹುದೇನೋ. ಆದರೆ ತಮ್ಮ ಮತೀಯ ಏಕತೆಯನ್ನು ಭಾರತದಲ್ಲಿ ಉಳಿಸಿಕೊಂಡಿರುವಂತೆ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು ಎಲ್ಲ ಕಲಬೆರಕೆಯಾಗಿ ಹೋಗಿದ್ದಾರೆ.

ಜಾತಕ ನೋಡಿಯೇ ಮದುವೆಯಾಗಬೇಕೆಂಬ ಹೆಣ್ಣಿಗೆ ಗಂಡೂ, ಗಂಡಿಗೆ ಹೆಣ್ಣೂ ಸಿಕ್ಕುವುದು ದುರ್ಲಭ. ಅಂಥವರು ಭಾರತಕ್ಕೇ ಬಂದು ಆಗಬೇಕು. ಆದರೆ ಸುಮಾರು ಎರಡು ಸಹಸ್ರ ಮೈಲು ದೂರದ ಅಂಡಮಾನಿನ ಸ್ವಜಾತಿ ಬಾಂಧವನ ಜಾತಕ ನೋಡಿ ಹೆಣ್ಣುಕೊಡಲು ಇಲ್ಲಿ ಯಾರು ತಯ್ಯಾರಿದ್ದಾರೆ? ಇಲ್ಲಿಂದ ಈಚೆಗೆ ಹೋಗಿರುವವರನ್ನು ಬಿಟ್ಟರೆ ಮಿಕ್ಕವರನ್ನು ಅವರ ನಡವಳಿಕೆ ವರ್ತನೆಗಳಿಂದ ಇಂಥ ಜಾತಿಯವರೆಂದು ಗುರುತಿಸಲು ಯಾರಿಗೂ ಸಾಧ್ಯವಿಲ್ಲ. ನಮ್ಮ ಸಾರಾ ಅವರು ಅಲ್ಲಿಗೆ ಹೋದರೆ ಅವರು ಕಾಣಬಹುದಾದ ಸಮಾಧಾನದ ದೃಶ್ಯ ಇದು. ಮುಸ್ಲಿಂ ಗಂಡನೂ ಹಿಂದೂ ಹೆಂಡತಿಯೂ ಯಾವ ವಿಧವಾದ ಮತಾಂತರದ ಹಂಗಿಲ್ಲದೆ ಒಟ್ಟಿಗೆ ಬದುಕುತ್ತಿರುವುದು. ಯಾವ ಮತಕ್ಕೂ ಸೇರದ ಅಥವಾ ತಮಗಿಷ್ಟಬಂದ ಮತಕ್ಕೆ ಸೇರಬಹುದಾದ ಮಕ್ಕಳನ್ನು ಸೃಷ್ಟಿಸುತ್ತಿರುವುದು. ಪೋರ್ಟ್‌ಬ್ಲೇರ್ ದಾರಿಗಳಲ್ಲಿ ಒಂದೇ ಒಂದುದಿನವೂ ಬುರ್ಖಾ ಹೆಂಗಸರನ್ನು ನಾನು ನೋಡಲಿಲ್ಲ.

ಈ ಸಾಮಾಜಿಕ ಪರಿಸ್ಥಿತಿಗೆ ಮುಖ್ಯ ಕಾರಣ ಅಲ್ಲಿನ ಜನಸಂಖ್ಯೆಯ ಬಹುಪಾಲು ನಿರಾಶ್ರಿತರಾಗಿ ಅಲ್ಲಿಗೆ ವಲಸೆ ಬಂದಿರುವುದು. ಎಲ್ಲರೂ ಸಮಾನ ದುಃಖಿಗಳಾಗಿ ಮನೆಮಠಗಳೊಡನೆ ಜಾತಿಮತಗಳನ್ನೂ ಕಳೆದುಕೊಂಡು ಬಂದವರು. ಮಿಕ್ಕವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಖೈದಿಗಳಾಗಿ ಅಲ್ಲಿಗೆ ಹೋಗಿದ್ದವರು. ಅಂಡಮಾನಿನ ಜನಸಂಖ್ಯೆ ಕೆಲವು ಲಕ್ಷಗಳನ್ನು ಮೀರಿಲ್ಲದ ಕಾರಣ ಜಾತಿ ಕುಲ ಗೋತ್ರಗಳನ್ನು ಹುಡುಕಿ ಸಂಬಂಧ ಬೆಳೆಸುವುದು ಅವರಿಗೆ ಕಷ್ಟಸಾಧ್ಯವಾಗಿದೆ.

ಇದರೊಡನೆ ಅಲ್ಲಿನ ರಾಜಕೀಯ ಪರಿಸ್ಥಿತಿಯೂ ಇದಕ್ಕೆ ಪೂರಕವಾಗಿದೆ. ಅದು ಕೇಂದ್ರಾಡಳಿತ ಪ್ರದೇಶವಾಗಿ ದೆಹಲಿಯ ಲೆಫ್ಟಿನೆಂಟ್ ಗೌರ್ನರ್

This PDF was created using the Sonic PDF Creator.
To remove this watermark, please license this product at www.investintech.com

ಆಳ್ವಿಕೆಗೆ ಒಳಪಟ್ಟಿರುವುದರಿಂದ ಜಾತಿ ಭೂತಗಳನ್ನು ಎಬ್ಬಿಸಿ ಓಟು ತೆಗೆದು ಕೊಂಡು ಅಧಿಕಾರಕ್ಕೆ ಬರುವ ಅಗತ್ಯ ಇನ್ನೂ ರಾಜಕಾರಣಿಗಳಿಗೆ ಬಿದ್ದಿಲ್ಲದಿರು ವುದು. ರಾಜಕೀಯ ಮತ್ತು ದುಡ್ಡಿನ ಬಲವಿಲ್ಲದಿದ್ದರೆ ಹೇಗೆ ಜಾತಿ ಮತ್ತು ಜನಾಂಗ ದ್ವೇಷಗಳು ಬೆಳೆಯಲಾರವು ಎನ್ನುವುದಕ್ಕೆ ಅಂಡಮಾನ್ ಸಮಾಜ ಒಂದು ಉತ್ತಮ ಉದಾಹರಣೆ. ನಮ್ಮ ಸಮಾಜ ವಿಜ್ಞಾನಿಗಳಿಗೆ ಅಭ್ಯಾಸ ಮಾಡಲು ಅಂಡಮಾನಿನಲ್ಲಿ ಒಂದು ತೀರಾ ವಿಶಿಷ್ಟ ಸನ್ನಿವೇಶ ಇದೆ.

ಇಷ್ಟೆಲ್ಲಾ ಇದ್ದರೂ ಅಂಡಮಾನ್ ಹೀಗೇ ಇರುತ್ತದೆಂದು ಹೇಳಬರುವುದಿಲ್ಲ. ಜಾತಿ ಮತ್ತು ಕೋಮುವಾದ ತಲೆಯೆತ್ತದಂತೆ ಅಂಡಮಾನೀ ಯರು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದರೆ ಮಾತ್ರ ಅಂಡಮಾನ್ ನಿಜವಾಗಿಯೂ ಭಾರತದ ಒಂದು ಜಾತ್ಯಾತೀತ ಭಾಗವಾಗಿ ಉಳಿಯಬಲ್ಲದು. ಇಲ್ಲದಿದ್ದರೆ ಜಾತಿ ಕೋಮುಗಳ ದಳ್ಳುರಿಯಲ್ಲಿ ಉರಿಯುತ್ತಿರುವ ಇಲ್ಲಿನ ಬೆಂಕಿ ನಿಧಾನವಾಗಿಯಾ ದರೂ ಅಲ್ಲಿಗೆ ರವಾನಿಸಲ್ಪಡುತ್ತದೆ. ಜನ ಹೇಗಾದರೂ ಮಾಡಿ ಹೊಸ ಜಾತಿ ಗಳನ್ನಾದರೂ ಹುಟ್ಟುಹಾಕಿ ಮಠ ಮಸೀದಿಗಳನ್ನು ಸೃಷ್ಟಿಸಿಕೊಂಡು ಹೊಡೆದಾಡ ತೊಡಗುತ್ತಾರೆ.

ಅಂಡಮಾನಿನಲ್ಲಿ ಏನಿಲ್ಲವೆಂದರೂ ವಿದ್ಯಾಭ್ಯಾಸಕ್ಕೆ ಅತ್ಯುತ್ತಮ ಸೌಲಭ್ಯ ಒದಗಿಸಲಾಗಿದೆ. ಫರ್ಲಾಂಗಿಗೆ ಒಂದೊಂದು ಉತ್ತಮ ಶಾಲೆಗಳಿದ್ದಾವೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ ರೀತಿಯ ತೊಂದರೆಯೂ ಆಗದಂತೆ ಎಲ್ಲ ಊರುಗಳಲ್ಲಿಯೂ ನೋಡಿಕೊಳ್ಳಲಾಗಿದೆ. ದಿನ ಬೆಳಗಾದರೆ ಬೂಡ್ಸು ಕಾಲ್ಚೀಲ ಗಳನ್ನು ಧರಿಸಿ ಮಕ್ಕಳು ಗುಂಪು ಗುಂಪಾಗಿ ಶಾಲೆಗೆ ಹೋಗುವುದನ್ನು ಬೀದಿ ಗಳಲ್ಲಿ ನೋಡಬಹುದು. ಒಂದಲ್ಲ ಒಂದುದಿನ ಅಂಡಮಾನ್ ನಮ್ಮ ದೇಶದ ಮಾದರಿ ರಾಜ್ಯವಾದೀತೆಂದು ಅನ್ನಿಸುತ್ತದೆ.

ಲಾಂಗ್ ಐಲೆಂಡಿನಲ್ಲಿ ನಿಂತಿದ್ದ ನಮ್ಮ ಹಡಗು ಹೊಂಡುವ ಸೂಚನೆ ಯಾಗಿ ಒಮ್ಮೆ ಸೈರನ್ ಕೂಗಿಸಿತು. ಅಷ್ಟರಲ್ಲಿ ಹಡಗಿನ ನ್ಯಾವಿಗೇಟರ್ ಕ್ಯಾಬಿನ್ನಿನಲ್ಲಿ ಎಂಥದೋ ಗಡಿಬಿಡಿ ಆರಂಭವಾಯ್ತು. ಅಲ್ಲಿ ಕುಳಿತಿದ್ದ ರಂಗಶ್‌ನ ಮುಖ್ಯ ಎಂಜಿನಿಯರು ಮತ್ತು ಇನ್ನೊಬ್ಬರು ತಮ್ಮ ಸೂಟ್‌ಕೇಸುಗಳು ನಾಪತ್ತೆಯಾಗಿವೆ ಎಂದು ಹುಯ್ಲಿಟ್ಟರು. ಎಲ್ಲರೂ ಗಡಿಬಿಡಿಯಲ್ಲಿ ಅವನ್ನು ಹುಡುಕುತ್ತಿರಬೇಕಾದರೆ ಯಾರೋ ಹೇಳಿದರು – ಲಾಂಗ್ ಐಲೆಂಡಿನಲ್ಲಿ ಇಳಿದ ಮಹನೀಯನ ಜೊತೆಯವರು ಅವನ್ನು ಒಯ್ದು ಅಂಬಾಸಿಡರ್ ಕಾರಿನ ಡಿಕ್ಕಿಗೆ

This PDF was created using the Sonic PDF Creator.
To remove this watermark, please license this product at www.investintech.com

ತುಂಬುತ್ತಿರುವುದನ್ನು ನೋಡಿದೆವೆಂದು. ಆತನನ್ನು ಸೂಟ್‌ಕೇಸ್‌ಗಳ ಯಜಮಾನರು ಬಯ್ಯತೊಡಗಿದರು.

ಕೊನೆಗೆ ಹಡಗಿನೊಳಗಿದ್ದ ಯಾರೋ ಒಬ್ಬನನ್ನು ದ್ವೀಪಕ್ಕೆ ಕಳಿಸಿದರು. ಆತನನ್ನು ಹುಡುಕಿ ನಮ್ಮ ಸೂಟ್‌ಕೇಸ್‌ಗಳನ್ನು ತೆಗೆದುಕೊಂಡು ಬಾ ಎಂದು. ಹಡಗಿನ ನ್ಯಾವಿಗೇಟರಿಗೆ ಇನ್ನು ಕೊಂಚಹೊತ್ತು ತಡೆಯಪ್ಪಾ ಎಂದು ಅಂಗಲಾಚಿದರು. ಹೊರಟ ಹಡಗು ಈ ಅನಿರೀಕ್ಷಿತ ಬೆಳವಣಿಗೆಯಿಂದಾಗಿ ಮತ್ತೆ ನಿಂತು ಕಾಯತೊಡಗಿತು. ನಮಗೋ ರಂಗತ್‌ಗೆ ಅಪರಾತ್ರಿಯಲ್ಲಿ ಹೋದರೆ ಉಳಿಯಲು ಎಲ್ಲಿ ಸ್ಥಳ ಹುಡುಕುವುದಪ್ಪಾ ಎಂದೇ ಚಿಂತೆ.

ಸೂಟ್‌ಕೇಸ್ ಹುಡುಕಿತರಲು ಕಳಿಸಿದವನು ಎಷ್ಟು ಹೊತ್ತಾದರೂ ಹಿಂದಿರುಗಲಿಲ್ಲ. ಕಾದು ಕಾದು ಹಡಗಿನ ಸಿಬ್ಬಂದಿಗೂ ಬೇಸರ ಶುರುವಾಯ್ತು. ರಂಗತ್ ಬಂದರಿನಿಂದ ಊರಿಗೆ ಹೋಗುವ ಬಸ್ಸು ಹೋಗಿರುತ್ತದೆ. ನಮಗೆ ತೊಂದರೆಯಾಗುತ್ತೆ ಎಂದು ಒಂದಷ್ಟು ಜನ ಹಡಗಿನ ಕ್ಯಾಪ್ಟನ್ ಬಳಿ ಗೊಣಗಾಟ ಆರಂಭಿಸಿದರು. ಹಡಗಿನ ನ್ಯಾವಿಗೇಟರು ಅಸಹನೆಯಿಂದ ನಾಲ್ಕಾರು ಬಾರಿ ಸೈರನ್ ಕೂಗಿಸಿದ. ಕತ್ತೆಯ ಕೂಗಿನಂತಿದ್ದ ಇದರ ದನಿ ಕೇಳಿ ದಡದಿಂದ ಒಂದಷ್ಟು ಜನ ತಡೆಯಿರಿ ಇನ್ನೂ ಯಾರೂ ಬಂದಿಲ್ಲವೆನ್ನುವಂತೆ ಕೈಮಾಡಿದರು.

ಇನ್ನೂ ಕೊಂಚಹೊತ್ತು ಕಳೆಯಿತು. ಯಾರೂ ಬರಲೇ ಇಲ್ಲ. ಕೊನೆಗೆ ಕಾದು ಕಾದು ಬೇಸರಗೊಂಡ ಸೂಟ್‌ಕೇಸಿನ ಯಜಮಾನರೇ "ಹಡಗು ಬಿಡಿ ಅವರು ಇನ್ಯಾವುದಾದರೂ ದೋಣಿಯಲ್ಲಿ ನಮಗೆ ಸೂಟ್‌ಕೇಸ್ ತಲುಪಿಸುತ್ತಾರೆ" ಎಂದು ಹೇಳಿದರು. ಎಲ್ಲರ ಸಮಾಧಾನದ ನಿಟ್ಟುಸಿರಿನೊಂದಿಗೆ ಹಡಗು ಮುಂದುವರಿಯಿತು.

* * *

ಮಾರನೆಯ ದಿನ ಬಸ್ ಹತ್ತಿದಾಗ ರಂಗತ್‌ನಲ್ಲಿ ಇನ್ನೂ ಬೆಳಗಿನ ಝಾವ ಆರುಗಂಟೆ. ಸುಮಾರು ಹನ್ನೆರಡು ಗಂಟೆ ಹೊತ್ತಿಗೆ ಬಸ್ಸು ಮಾಯಾ ಬಂದರಿನ ಬಂದರುಕಟ್ಟೆಯಲ್ಲಿ ನಮ್ಮನ್ನು ಇಳಿಸಿತು.

ರಂಗತ್ ನಮ್ಮ ಮೂಡಿಗೆರೆಗಿಂತಲೂ ಚಿಕ್ಕದಾದ ಊರಿನಂತೆ ಕಂಡಿತು. ಅದರ ಹಿನ್ನಲೆಗೆ ಅಂಡಮಾನಿನ ಅತ್ಯುನ್ನತ ಪರ್ವತ ಇದೆ. ಸಮುದ್ರಮಟ್ಟದಿಂದ ಹೆಚ್ಚೆಂದರೆ ಎರಡುಸಾವಿರ ಅಡಿಗಳಿರಬಹುದಷ್ಟೆ. ರಂಗತ್‌ನಲ್ಲಿ ನಾವು ರಾತ್ರಿ ಇಳಿದಾಗ ಅಲ್ಲಿನ ಎಲ್ಲ ಅಂಗಡಿಗಳೂ ಮುಚ್ಚಲಿದ್ದವು. ಎಲ್ಲೂ ಉಳಿದು

This PDF was created using the Sonic PDF Creator.
To remove this watermark, please license this product at www.investintech.com

ಕೊಳ್ಳಲು ವಸತಿ ಇರಲಿಲ್ಲ. ಮುಂದೇನು ಮಾಡುವುದೆಂದು ಚಿಂತಾಕ್ರಾಂತರಾಗಿರಬೇಕಾದರೆ ಅಲ್ಲೊಬ್ಬ ಮಂಟೂ ಬಿಶ್ವಾಸ್ ಎಂಬ ಮಲ್ಲಿಕ್‌ರವರ ವಿದ್ಯಾರ್ಥಿ ಇದ್ದಾನೆಂದು ತಿಳಿಯಿತು. ಆತ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರಬೇಕಾದರೆ ಚಂದ್ರು, ಚಕ್ರವರ್ತಿ, ಮಲ್ಲಿಕ್, ಎಲ್ಲ ಅವರಿಗೆ ಉಪಾಧ್ಯಾಯರಾಗಿದ್ದರಂತೆ. ಅವರಿಗಾಗಿ ಎಲ್ಲರೂ ಹುಡುಕಾಡಿದರು. ಆತ ಅಲ್ಲಿನ ಕೃಷಿ ಇಲಾಖೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದಾನೆಂದು ಯಾರೋ ಹೇಳಿದ್ದರು. ಆತನಿಗೆ ದೂರದ ಬೆಂಗಳೂರಿನಿಂದ ಬಂದಿದ್ದ ತಮ್ಮ ಗುರುಗಳ ಪರಿವಾರವನ್ನೆಲ್ಲಾ ನೋಡಿ ತುಂಬಾ ಸಂತೋಷವಾಯ್ತು. ಆತನೇ ಲಗುಬಗೆಯಿಂದ ಓಡಾಡಿ ಸರ್ಕಾರಿ ಪ್ರವಾಸಿ ಗೃಹದಲ್ಲಿ ನಮಗೆಲ್ಲಾ ಉಳಿಯಲು ಹೇಗೋ ಜಾಗ ದೊರಕಿಸಿಕೊಟ್ಟ.

ಅಂಡಮಾನಿನ ಎಲ್ಲ ಸರ್ಕಾರಿ ಗೃಹಗಳೂ ಸದಾ ಯಾರಾದರೂ ಅಧಿಕಾರಿಗಳಿಗೊ ಅಥವಾ ರಾಜಕಾರಿಣಿಗಳಿಗೋ ಬುಕ್ಕಾಗಿರುವುದು ನಾವು ಕಂಡ ಸಾಮಾನ್ಯ ಸಂಗಂತಿ. ಪ್ರವಾಸಿಗಳಿಗೆ ಇದರಿಂದೊದಗುವ ತೊಂದರೆ ಹೇಳತೀರದು. ನಮ್ಮಲ್ಲೂ ಪ್ರವಾಸಿ ಗೃಹಗಳ ಹಣೆಬರಹ ಇದೇ ಅಲ್ಲವೆ? ಟೂರಿಸ್ಟ್ ಡೆವಲಪ್‌ಮೆಂಟ್ ಎಂದು ಸರ್ಕಾರದ ಹಣದಿಂದ ದೊಡ್ಡ ಪ್ರವಾಸಿ ಗೃಹಗಳನ್ನು ಕಟ್ಟಿ ಕೊನೆಗೆ ಅಧಿಕಾರಿಗಳೂ ರಾಜಕಾರಣಿಗಳೂ ಅಲ್ಲಿ ಮನೆ ಮಾಡಿಕೊಂಡು ಬಿಡುತ್ತಾರೆ. ಪ್ರವಾಸಿಗಳು ಬಸ್ ಶೆಲ್ಟರುಗಳಲ್ಲಿ ಪರದೇಶಿಗಳಾಗಿ ಬಿದ್ದುಕೊಂಡಿರುತ್ತಾರೆ. ನಮಗೆ ಮಂಟೂ ಬಿಶ್ವಾಸ್ ಸಿಕ್ಕದಿದ್ದರೆ ನಮಗೂ ಇದೇ ಗತಿ ಕಾದಿತ್ತು.

ಮಾಯಾಬಂದರ್ ಕಡಲು ತೀರದಲ್ಲಿ ರಸ್ತೆಯುದ್ದಕ್ಕೂ ಇರುವ ಒಂದು ಚೊಕ್ಕಪಟ್ಟಣ. ಹೊಸದಾಗಿ ರೂಪುಗೊಂಡ ಊರಿನಂತೆ ಕಾಣುತ್ತಿದ್ದ ಅದು ನೀಟಾಗಿ ಚೊಕ್ಕವಾಗಿದ್ದಂತೆ ತೋರಿತು. ಅದು ಬಿಟ್ಟರೆ ನಮಗೆ ಆ ಹೆಸರಿನ ಹಿಂದೆ ಕಲ್ಪಿಸಿಕೊಂಡಿದ್ದ ಯಾವ ವಿಶೇಷವೂ ಅಲ್ಲಿ ಕಾಣಲಿಲ್ಲ. ಅಲ್ಲಿ ಏನು ಮಾಯೆ ಇದೆಯೋ, ಯಾಕೆ ಮಾಯಾಬಂದರ್ ಎಂದು ಕರೆದರೋ? ಗೊತ್ತಾಗಲಿಲ್ಲ.

ಅಂಡಮಾನಿನಲ್ಲಿ ಯಾವ ಊರಿನಲ್ಲಿ ಇಳಿದು ಯಾರನ್ನಾದರೂ ಇಲ್ಲಿ ನೋಡುವಂಥದು ಏನಿದೆ ಎಂದು ಕೇಳಿದರೂ ಅವರಿಗೆ ತುಂಬಾ ಮುಜುಗರ ಉಂಟಾಗುತ್ತಿತ್ತು. ಪ್ರವಾಸಿಗಳಿಗೆ ತೋರಿಸುವಂಥದು ಇಲ್ಲೇನೂ ಇಲ್ಲವಲ್ಲಾ ಎಂದು ವ್ಯಸನಪಟ್ಟುಕೊಳ್ಳುತ್ತಿದ್ದರು. ಏಕೆಂದರೆ ಅಂಡಮಾನಿನಲ್ಲಿ ಯಾವುದೇ ಪುರಾತನ ದೇಗುಲಗಳಾಗಲೀ ತೀರ್ಥಕ್ಷೇತ್ರಗಳಾಗಲೀ ಅತ್ಯಾಧುನಿಕ ಫ್ಯಾಕ್ಟರಿಗಳಾಗಲೀ

This PDF was created using the Sonic PDF Creator.
To remove this watermark, please license this product at www.investintech.com

ಇಲ್ಲವಲ್ಲ! ಹಾಗಾಗಿ ಸ್ಥಳೀಯರಿಗೆ ಬೆಟ್ಟುಮಾಡಿ ತೋರಿಸಲು ಏನೂ ಇರುತ್ತಿರಲಿಲ್ಲ. ಅವರು ಕೊಂಚ ಯೋಚಿಸಿ ಕೊನೆಗೆ "ಇಲ್ಲಿ ಏನೂ ಪ್ರಯೋಜನವಿಲ್ಲ. ಅದೇ ನೀವು ಮುಂದಿನ ಊರಿಗೆ ಹೋದರೆ ಅಲ್ಲಿ ಪರ್ವಾಇಲ್ಲ" ಎಂದು ಆ ಊರಿಗೆ ಹೋಗುವ ಮಾರ್ಗ, ಬಸ್ ಹಿಡಿಯಬೇಕಾದ ಜಾಗ ಇವುಗಳನ್ನು ನಿರ್ದೇಶಿಸುತ್ತಿದ್ದರು.

ಮಂಟೂಬಿಶ್ವಾಸರನ್ನು ಕೇಳಿದಾಗಲೂ "ಇಲ್ಲೇನಿದೆ ರಂಗತ್‌ನಲ್ಲಿ! ಅದೇ ಮಾಯಾಬಂದರ್ ಎಷ್ಟೋ ವಾಸಿ" ಎಂದು ಹೇಳಿದರು. ಮಾಯಾಬಂದರ್‌ನಲ್ಲಿ ಕೇಳಿದರೆ "ನೀವು ಪೋರ್ಟ್‌ಬ್ಲೇರ್‌ನಂಥ ಮಹಾನಗರದಿಂದ ಬಂದಿದ್ದೀರಿ. ಅಲ್ಲಿ ಇಲ್ಲದ್ದು ಇಲ್ಲೇನಿದೆ ಬಿಡಿ. ನೀವು ದಿಗ್ಲಿಪುರಕ್ಕಾದರೂ ಹೋದರೆ ಚೆನ್ನ" ಎಂದು ಹೇಳಿದರು.

ಮಾಯಾಬಂದರಿನಲ್ಲಿ ಇಳಿದಕೂಡಲೆ ಮಲ್ಲಿಕ್ ಎಲ್ಲೋ ಮಾಯವಾದರು. ಎಲ್ಲಿ ಹೋದರೆಂದು ವಿಚಾರಿಸಿದಾಗ ಉಷಾ, ಇಲ್ಲಿ ವಸತಿ ಸೌಕರ್ಯ ಇದೆಯೆ ವಿಚಾರಿಸಿ ಬರಲು ಹೋಗಿದ್ದಾರೆ, ಅವರು ಬರುವವರೆಗೂ ಇಲ್ಲೇ ಕಾಯಬೇಕಂತೆ ಎಂದರು. ಬಂದರು ಕಟ್ಟೆಯ ಹೋಟೆಲಿನಲ್ಲಿ ಸಾಮಾನುಗಳನ್ನು ರಾಶಿ ಹಾಕಿಕೊಂಡು ಮಲ್ಲಿಕ್ ಮಹಾಶಯರ ಆಗಮನ ನಿರೀಕ್ಷಿಸುತ್ತಾ ಕುಳಿತೆವು. ಮಾಯಾಬಂದರಿನ ಬಂದರು ಕಟ್ಟೆಯಲ್ಲಿ ಹಲವು ದೋಣಿಗಳೂ, ಒಂದು ಹಡಗೂ ನಿಂತಿತ್ತು.

ಸುಮಾರು ಮೂರು ಮೈಲಿ ಉದ್ದದ ದಾರಿ ನೇರವಾಗಿ ಬಂದರಿನಿಂದ ಊರೊಳಗೆ ಹೋಗಿತ್ತು. ಆ ದಾರಿಯ ಅಕ್ಕಪಕ್ಕ ಉದ್ದಕ್ಕೆ ಮಾಯಾಬಂದರ್ ಪಟ್ಟಣ ಇತ್ತು. ಮಾಯಾಬಂದರಿಗೆ ಬರುವ ದಾರಿಯಲ್ಲೇನೋ ಆಚೀಚೆ ಒಂದಷ್ಟು ಗದ್ದೆ, ಅಡಕೆ ತೋಟಗಳು. ಅದು ಬಿಟ್ಟರೆ ಮರ ಕಡಿದು ಸಾಗಿಸುವುದೇ ಇಲ್ಲಿನ ಜನರೆಲ್ಲರ ಉದ್ಯೋಗವೇನೋ. ನಾವು ದಾರಿಯಲ್ಲಿ ಬಂದ ಎಲ್ಲ ಊರುಗಳ ಬಂದರುಗಳಲ್ಲೂ ಸಾಗಾಣಿಕೆಗೆ ಸಿದ್ಧವಾದ ಮರದ ದಿಮ್ಮಿಗಳು ಸಮುದ್ರದಲ್ಲಿ ಲಾಟು ಬಿದ್ದಿರುತ್ತಿದ್ದವು. ಬಹುಶಃ ಇದೊಂದು ಉದ್ಯೋಗ ಅಂಡಮಾನಿನಲ್ಲಿ ಎಲ್ಲ ಕಡೆ ಅವ್ಯಾಹತವಾಗಿ ಸಾಗತೊಡಗಿದೆ ಎಂದು ಕಾಣುತ್ತದೆ.

ಅಂಡಮಾನಿನಲ್ಲಿ ಪೆಡಾಕ್ ಎನ್ನುವ ಮರ ಒಂದಿದೆ. ಮಾಯಾಬಂದರಿನ ಪ್ರವಾಸಿ ಗೃಹದ ಅಲಂಕಾರಗಳನ್ನೂ ಕಿಟಕಿ ಬಾಗಿಲುಗಳನ್ನೂ

This PDF was created using the Sonic PDF Creator.
To remove this watermark, please license this product at www.investintech.com

ಅದರಲ್ಲೇ ಮಾಡಿದ್ದರು. ಗಾಜಿನಷ್ಟು ಹೊಳಪಿನ ಪಾಲಿಷ್ ಇತ್ತು. ಮಂಟೂ ಬಿಶ್ವಾಸ್ ಹೇಳಿದರು ಭಾರತದಲ್ಲಿ ತೇಗ, ಹೊನ್ನೆ, ಬೀಟೆಗಳೆಲ್ಲಕ್ಕಿಂತ ಇದಕ್ಕೆ ಹೆಚ್ಚಿಗೆ ಬೆಲೆಯಾಗುತ್ತೆ ಎಂದು. ಈ ಮರ ಸದ್ಯಕ್ಕೆ ಅಂಡಮಾನಿನ ಕಾಡುಗಳಲ್ಲಿ ಮಾತ್ರ ಬೆಳೆಯುತ್ತಿದೆ. ಅಂಡಮಾನಿನಲ್ಲಿ ನಮ್ಮ ಸಾಗುವಾನಿ ಮರಗಳನ್ನು ಬೆಳೆಯಲು ಪ್ರಯತ್ನ ಮಾಡಲಾಯ್ತಂತೆ. ಆದರೆ ಸಾಗುವಾನಿ ಮರಗಳು ಅಂಡಮಾನಿನಲ್ಲಿ ಬೆಳೆಯುತ್ತಾ ಒಳಗೇ ಟೊಳ್ಳು ಬೀಳತೊಡಗಿದ್ದರಿಂದ ಸಾಗುವಾನಿ ನೆಡುತೋಪುಗಳ ಕಾರ್ಯಕ್ರಮವನ್ನು ಅರಣ್ಯ ಇಲಾಖೆಯವರು ರದ್ದು ಮಾಡಿದ್ದಾರೆ.

ಮಾಯಾಬಂದರಿನ ಬಂದರು ಕಟ್ಟೆಯಲ್ಲಿ ನಾವು ಅಡ್ಡಾಡುತ್ತಿರಬೇಕಾದರೆ ಇಬ್ಬರು ಚಿಕ್ಕ ಹುಡುಗರು ಬಂದರು. ಕೈಯಲ್ಲಿ ಗಾಳವನ್ನೂ ದಾರವನ್ನೂ ಹಿಡಿದುಕೊಂಡಿದ್ದರು. ನಮ್ಮ ಬಳಿ ಮೀನು ಹಿಡಿಯಲು ಇದ್ದ ರೀಲು ರಾಡುಗಳಾವುವೂ ಅವರ ಬಳಿ ಇರಲಿಲ್ಲ. ಬಂದವರೇ ಪೊಟ್ಟಣ ಬಿಚ್ಚಿ ಅದರೊಳಗೆ ತಂದಿದ್ದ ಚಿಕ್ಕಚಿಕ್ಕ ಪುಡಿ ಸೀಗಡಿಗಳನ್ನು ಸಮುದ್ರಕ್ಕೆ ಎರಚಿದರು. ತಕ್ಷಣ ಸಮುದ್ರದೊಳಗೆ ಮೀನುಗಳ ಓಡಾಟ ಶುರುವಾಯ್ತು. ಒಬ್ಬ ಗಾಳಕ್ಕೆ ಒಂದು ಪುಡಿ ಸೀಗಡಿಯನ್ನು ಚುಚ್ಚಿ ಸಮುದ್ರಕ್ಕೆ ಎಸೆದ. ಕ್ಷಣಾರ್ಧದಲ್ಲಿ ಒಂದು ಮೀನು ಅವನ ದಾರದೊಂದಿಗೆ ಹಾರಿ ಹೊರಬಿತ್ತು. ನಾವು ಆಶ್ಚರ್ಯದಿಂದ ನೋಡುತ್ತಲೇ ಇದ್ದೆವು. ಇನ್ನೊಬ್ಬ ಇನ್ನೊಂದು ಎಳೆದ . ಮತ್ತೊಂದು! ಮಗದೊಂದು! ಇನ್ನೂ ಒಂದು! ಇಬ್ಬರು ಹುಡುಗರೂ ಕೇವಲ ಒಂದು ದಾರ ಗಾಳ ಹಿಡಿದು ಒಂದಾದ ಮೇಲೊಂದರಂತೆ ಮೀನುಗಳನ್ನು ಎತ್ತಿ ಎತ್ತಿ ದಡದ ಮೇಲೆಸೆಯತೊಡಗಿದರು.

"ನೋಡ್ರೀ ಚಿಕ್ಕ ಹುಡುಗರು ಹೇಗೆ ಮೀನು ಎಳೆದೆಳೆದು ಹಾಕ್ತಿದಾರೆ" ಎಂದರು ನಿರ್ಮಲಾ.

ಮತ್ತೊಂದು ಮೀನು ಹುಡುಗ ಎಳೆದ

"ನೋಡ್ರೀ ನೀವೂ ಇದೀರ! ಬಿಸ್ಲಲ್ಲಿ ಕೂತ್ಕೊಂಡು ಒಂದು ಹಿಡಿಯೋದಕ್ಕೆ ಲಾಟ್ರಿ ಹೊಡಿತೀರಾ!"

ಇನ್ನೊಂದು ಮೀನು ಹುಡುಗ ಎಳೆದ.

This PDF was created using the Sonic PDF Creator.
To remove this watermark, please license this product at www.investintech.com

"ನೂರಾರು ರೂಪಾಯಿ ರಾಡು ರೀಲುಗಳನ್ನೆಲ್ಲಾ ತರಿಸಿ ಇಟ್ಕೊಂಡಿದೀರ!"

ಒಂದಾದ ಮೇಲೊಂದರಂತೆ ಹುಡುಗರು ಮೀನುಗಳನ್ನು ಎಳೆದಂತೆಲ್ಲಾ ನಮ್ಮ ಟೀಮಿನ ಸ್ತ್ರೀ ಸಮುದಾಯ ನಮ್ಮನ್ನು ಹಂಗಿಸತೊಡಗಿತು. ನಾನು ಚಂದ್ರು ರಾಮದಾಸ್ ಮೂರು ಜನವೂ ಇವರ ಲೇವಡಿಗೆ ತುಶ್ಚಾಗಿ ಮಂಕರ ತರ ಕುಳಿತುಕೊಂಡು ಆ ಹುಡುಗರು ಮೀನು ಹಿಡಿಯುತ್ತಿದ್ದುದನ್ನು ನೋಡಿದೆವು. ಮೀನಿಗೆ ಗಾಳ ಹಾಕುವವರನ್ನು ಕಂಡರೆ ಹೆಂಗಸರಿಗೆ ಒಳಗೊಳಗೇ ಕೋಪವೆಂದು ಕಾಣುತ್ತದೆ. ಯಾರಾದರೂ ಮನಃಶ್ಯಾಸ್ತ್ರಜ್ಞರು ಈ ಬಗ್ಗೆ ಕೊಂಚ ಸಂಶೋಧನೆ ಮಾಡುವುದು ಒಳ್ಳೆಯದು. ಇವರೂ ಒಂದು ರೀತಿಯಲ್ಲಿ ಗಾಳಹಾಕುವವರೇ ಆದುದರಿಂದ ಮೀನು ಹಿಡಿಯುವವರ ಬಗ್ಗೆ ಹೆಂಗಸರಿಗೆ ಮಾತ್ಸರ್ಯವಿದ್ದರೂ ಇರಬಹುದು!

ಸ್ತ್ರೀ ಸಮುದಾಯದ ಗಮನ ಬೇರೆಲ್ಲೋ ತಿರುಗಿದಾಗ ನಾನು ಚಂದ್ರು ಇಬ್ಬರೂ ಮೆಲ್ಲಗೆ ಆ ಹುಡುಗರ ಹತ್ತಿರ ಹೋದೆವು. ಅವರು ಹಿಡಿಯುತ್ತಿದ್ದ ಮೀನುಗಳು ಮ್ಯಾಕೆರೆಲ್ ಅಥವಾ ಬಂಗಡೆ ಮೀನುಗಳಂತೆ ಕಂಡವು. ಆ ಹುಡುಗರು ಈ ಮೀನುಗಳನ್ನು ತಿನ್ನಲು ತುಂಬಾ ರುಚಿ ಎಂದು ಹೊಗಳಿದರು. ಅವರು ಈ ಮೀನುಗಳನ್ನು ಹಿಡಿಯುತ್ತಿರಬೇಕಾದರೆ ಸಮುದ್ರದ ಆಳದಲ್ಲಿ ಇನ್ನೂ ದೊಡ್ಡ ದೊಡ್ಡ ಮೀನುಗಳು ಓಡಾಡುತ್ತಿರುವುದು ಕಂಡಿತು. ನಾವು ಹುಡುಗರನ್ನು "ಅವುಗಳನ್ನು ಹಿಡಿಯಲಾಗುವುದಿಲ್ಲವೆ?" ಎಂದು ಕೇಳಿದೆವು. ಅದಕ್ಕವರು ತಮ್ಮ ಬಳಿ ಉದ್ದ ದಾರವಿಲ್ಲವೆಂದು ಹೇಳಿದರು. ಹಾಗಾದರೆ ನಾವೇಕೆ ಪ್ರಯತ್ನಿಸಬಾರದು ಎಂದನ್ನಿಸಿ ನಮ್ಮ ಬಳಿ ಉದ್ದ ದಾರಗಳಿವೆಯೆಂದೂ ನಮ್ಮ ಗಾಳಗಳಿಗೆ ಚುಚ್ಚಲು ನಿಮ್ಮ ಬಳಿ ಇರುವ ಸೀಗಡಿ ಕೊಡುತ್ತೀರಾ ಎಂದು ಕೇಳಿದೆವು. ಅದಕ್ಕವರು ಸಂತೋಷದಿಂದ ಸಮ್ಮತಿಸಿ ತಮ್ಮ ಬಳಿ ಇದ್ದ ಸೀಗಡಿ ಪೊಟ್ಟಣವನ್ನೇ ನಮ್ಮತ್ತ ಹಿಡಿದರು.

ಮಲ್ಲಿಕ್ ವಸತಿ ಸೌಕರ್ಯ ಹುಡುಕ ಹೋದವರು ಇನ್ನೂ ಬಂದಿರಲಿಲ್ಲ. ಸುಮ್ಮನೆ ಕುಳಿತು ಕಾಯುವುದರ ಬದಲು ಈ ಹುಡುಗರ ಜೊತೆ ಮೀನನ್ನಾದರೂ ಹಿಡಿಯೋಣವೆಂದು ತೀರ್ಮಾನಿಸಿದೆವು. ನಮ್ಮ ರೀಲುಗಳಿಗೆ ತುಂಬಾ ದಪ್ಪ ದಾರಗಳನ್ನು ಹಾಕಿದ್ದೆವು. ಅದನ್ನು ಬಿಚ್ಚಿ ತೆಳು ದಾರಗಳನ್ನು ಹಾಕಿದೆವು. ನಮ್ಮ ರಾಡು ರೀಲುಗಳನ್ನು ನೋಡಿ ಬಂದರು ಕಟ್ಟೆಯಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಓಡಾಡುತ್ತಿದ್ದ ಇನ್ನೊಂದಷ್ಟು ಜನ ಪ್ರೇಕ್ಷಕರಾಗಿ ನಮಗೆ ಮುತ್ತಿಕೊಂಡರು. ಈ ನಡುವೆ ಹುಡುಗರು ಅವ್ಯಾಹತವಾಗಿ ಮೀನುಗಳನ್ನು ಎಳೆದು ಹಾಕುತ್ತಲೇ ಇದ್ದರು.

ಸುತ್ತ ಜನ ಮುತ್ತಿಕೊಂಡಿದ್ದರು. ಕಾಯುತ್ತಿದ್ದ ನಮ್ಮ ಟೀಮಿನವರು ಎತ್ತ ಹೋದರೋ ಗೊತ್ತಾಗಲಿಲ್ಲ. ಮಲ್ಲಿಕ್ ಬಂದರೋ ಎನ್ನುವುದೂ ನಮಗೆ ಗೊತ್ತಾಗುತ್ತಿರಲಿಲ್ಲ. ನಾವು ನಮ್ಮ ದಾರಗಳಿಗೆ ಗಾಳಗಳನ್ನು ಕಟ್ಟಿ ಸೀಗಡಿಗಳನ್ನು ಸಿಕ್ಕಿಸುತ್ತಾ ಇರಬೇಕಾದರೆ ಇದ್ದಕ್ಕಿದಂತೆ ಬಂದರಕಟ್ಟೆಯಲ್ಲಿ ನಿಂತಿದ್ದ ಹಡಗಿನ ಸೈರನ್ ಕರ್ಕಶವಾಗಿ ಕೂಗಿತು. "ಚಂದ್ರೂ! ತೇಜಸ್ವಿ! ಬನ್ನೀ ಬನ್ನೀ" ಎಂದು ಯಾರೋ ಕೂಗಿದ್ದು ಕೇಳಿಸಿತು. ಜನರ ಗುಂಪಿನಿಂದ ಹೊರಬಂದು ಯಾರು ಕೂಗುತ್ತಿದ್ದಾರೆಂದು ನೋಡಿದೆ.

ನೋಡುತ್ತೇನೆ! ನಮ್ಮವರೆಲ್ಲಾ ಹಡಗಿನ ಡೆಕ್ ಮೇಲೆ ನಿಂತುಕೊಂಡು "ಹಡಗು ಹೊರಡುತ್ತದೆ, ಬನ್ನೀ ಬನ್ನೀ" ಎಂದು ಕೈಬೀಸುತ್ತಾ ಕೂಗುತ್ತಿದ್ದಾರೆ! ಹಡಗಿಗೆ ಹತ್ತಲು ಹಾಕಿರುವ ಗಾಲಿ ಏಣಿಯನ್ನು ಹಿಂದೆಳೆದುಕೊಳ್ಳಲು ಜನ ಅದನ್ನು ಬಿಚ್ಚುತ್ತಿದ್ದಾರೆ! ಹಡಗಿನ ಹೆಸರು ಕಾಣಿಸಿತು, "ಓಂಗೇ" ಎಂದು. ನಾವು ಪೋರ್ಟ್‌ಬ್ಲೇರಿಗೆ ಹಿಂದಿರುಗಬೇಕಾದ್ದು ಇದೇ ಹಡಗಲ್ಲವೆ? ಮಾಯಾ ಬಂದರ್ ಗುಡ್ ಬೈ!

ದಡದಡ ಓಡಿ ದೂರ ಸರಿಯುತ್ತಿದ್ದ ಏಣಿಯಿಂದ ಹಡಗಿನ ಡೆಕ್ಕಿಗೆ ನೆಗೆದೆವು. ಕೈಯಲ್ಲಿ ರಾಡು, ರೀಲು, ಗಾಳಕ್ಕೆ ಸಿಕ್ಕಿಸಿದ ಸೀಗಡಿಗಳು ಹಾಗೇ ಇದ್ದವು. ದೂರದಲ್ಲಿ ಮೀನು ಹಿಡಿಯುತ್ತಿದ್ದ ಹುಡುಗರು ನಮ್ಮ ಗಡಿಬಿಡಿ ನೋಡಿ ನಗುತ್ತ ಕೈಬೀಸುತ್ತಿದ್ದರು. ಅವರು ಎಳೆದೆಳೆದು ಹಾಕಿದ ಮೀನುಗಳು ದಡದಲ್ಲಿ ಥಕ ಥೈ ಎಂದು ಕುಣಿಯುತ್ತಿದ್ದವು.

ಹಡಗು ನಿಧಾನವಾಗಿ ಹೊರಟಿತು. ನಾವು ಊಹಿಸಿದಂತೆ ಪೋರ್ಟ್ ಬ್ಲೇರ್‌ಗಲ್ಲ. ದಿಗ್ಲಿಪುರದ ಕಡೆಗೆ.

ಮಲ್ಲಿಕ್ ನಮ್ಮ ಬಳಿ ಬಂದು "ಮಾಯಾಬಂದರದಲ್ಲಿ ಉಳಿದುಕೊಳ್ಳಲು ಎಲ್ಲೂ ರೂಮು ಸಿಕ್ಕಲಿಲ್ಲ. ಪ್ರವಾಸಿ ಮಂದಿರ ಸರ್ಕಾರಿ ಅಧಿಕಾರಿಗಳಿಗೆ ಮೊದಲೇ ಬುಕ್ಕಾಗಿ ಹೋಗಿದೆಯಂತೆ. ಯಾರೋ ಹೇಳಿದರು ಈ ಹಡಗು ದಿಗ್ಲಿಪುರಕ್ಕೆ ಹೋಗುತ್ತೆ ಅಲ್ಲಿ ನಿಮಗೆ ಸೌಕರ್ಯ ಸಿಗಬಹುದು ಎಂದು. ಇಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಬಂದರೆ ಹಡಗು ಇನ್ನೇನು ಹೊರಡಲಿತ್ತು. ಎಲ್ಲ ಹತ್ತಿಕೊಂಡು ನಿಮ್ಮನ್ನೂ ಕೂಗಿದೆವು'' ಎಂದರು.

ನಮ್ಮ ಮಿತ್ರರು ಅಂಡಮಾನಿನ ಪ್ರವಾಸ ಸೌಕರ್ಯಗಳ ಬಗ್ಗೆ ಕೊಟ್ಟ ಎಚ್ಚರಿಕೆ ನಿಜವಾಗಿತ್ತು. ಪೋರ್ಟ್‌ಬ್ಲೇರಿಗೆ ನಮ್ಮನ್ನು ಕೊಂಡೊಯ್ಯುತ್ತದೆಂದು ತಿಳಿದಿದ್ದ ಹಡಗು ಈಗ ದಿಗ್ಲಿಪುರಕ್ಕೆ ಹೊರಟಿತ್ತು.

''ಈ ಹಡಗಿನಲ್ಲಿ ಹೋಗಿ ದಿಗ್ಲಿಪುರದಲ್ಲಿ ಉಳಿದು, ಮತ್ತೆ ನಾಳೆ ಬೆಳಿಗ್ಗೆ ಇದು ಮಾಯಾಬಂದರಿಗೆ ಬರುತ್ತಂತೆ ನಾವೂ ಬಂದುಬಿಡೋಣ'' ಎಂದು ಮಲ್ಲಿಕ್ ಹೇಳಿದರು.

This PDF was created using the Sonic PDF Creator.
To remove this watermark, please license this product at www.investintech.com



# 13. ಕತ್ತಲಲ್ಲಿ ಕರಾಳ ಛಾಯೆಗಳು

ಹಡಗಿನಿಂದ ದೂರದಲ್ಲಿ ದಿಗ್ಲಿಪುರ ಕಾಣುತ್ತಲೇ ನಮಗೆ ಅಲ್ಲಿ ಯಾವ ವಸತಿ ಸೌಕರ್ಯವೂ ಸಿಗಲಾರದೆಂದು ಅನ್ನಿಸತೊಡಗಿತು. ಅಂಡಮಾನಿನ ಉತ್ತರದ ತುತ್ತ ತುದಿಯ ದ್ವೀಪವಾದ ದಿಗ್ಲಿಪುರ ವಾಸ್ತವವಾಗಿ ಒಂದು ಅತಿ ಚಿಕ್ಕ ಕುಗ್ರಾಮವೇ ಸರಿ. ಆದರೂ ಬಂದರುಕಟ್ಟೆಯಲ್ಲಿ ಬಸ್ಸು, ಒಂದು ಕಾರು ಪುಟ್ಟ ಆಟದ ಸಾಮಾನುಗಳಂತೆ ದೂರದಿಂದ ಕಂಡಾಗ ಇಲ್ಲಿ ಇಷ್ಟಾದರೂ ಇದೆಯಲ್ಲ ಎಂದು ಸಮಾಧಾನವಾಯ್ತು.

ಮಲ್ಲಿಕ್‌ರವರಿಗೆ ಹಡಗಿನಲ್ಲಿ ಓರ್ವ ಅಧಿಕಾರಿ ಪರಿಚಯವಾಗಿದ್ದ. ಯಾವಾಗ ಆತನೊಂದಿಗೆ ಮಾತಾಡಿ ಗೆಳೆತನ ಬೆಳೆಸಿದರೋ ನಾನು ನೋಡಲಿಲ್ಲ. ಆತ ಮಲ್ಲಿಕ್‌ಗೆ ನಾನು ಹೇಗಾದರೂ ಮಾಡಿ ನಿಮಗೆ ವಸತಿಸೌಕರ್ಯ ಕೊಡಿಸುತ್ತೇನೆಂದು ಹೇಳಿದನಂತೆ. ಆದರೆ ಹಡಗು ನಿಂತಾಗ ಆತನನ್ನು ಸ್ವಾಗತಿಸಲು ದೊಡ್ಡ ಜನಜಂಗುಳಿಯೇ ನಿಂತಿತ್ತು. ಸ್ವಾಗತ ಸಂಭ್ರಮದ ಆ ಗುಂಪಿನಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಆತನ ತಲೆ ಕಾಣದಾಯ್ತು. ಆತ ಮಲ್ಲಿಕ್‌ಗೆ ಕೊಟ್ಟ ಆಶ್ವಾಸನೆಯನ್ನು ಮರೆತೇ ಬಿಟ್ಟನೇನೋ ಎಂದು ಅನುಮಾನ ಆರಂಭವಾಯ್ತು.

"ಏನಾದರಾಗಲಿ, ವಾಪಾಸ್ ಹೋಗಲು ಮೊದಲು ಟಿಕೆಟ್ ತಗೊಂಡು ಬನ್ನಿ, ನಾವು ಬೀದಿಯಲ್ಲೇ ರಾತ್ರಿ ಕಳೆಯುವುದಾದರೂ ಪರ್ವಾ ಇಲ್ಲ" ಎಂದು ನನ್ನನ್ನೂ ಚಂದ್ರೂವನ್ನೂ ಬಸ್‌ಹತ್ತಿಸಿ ಕಳಿಸಿದರು. ದಿಗ್ಲಿಪುರ ಊರು ಬಂದರುಕಟ್ಟೆಯಿಂದ ಏಳೆಂಟು ಮೈಲು ದೂರದಲ್ಲಿತ್ತು. ಅಂಡಮಾನಿನಲ್ಲಿ ಹಡಗುಗಳಿಗೆ ಟಿಕೆಟ್ ಕೊಡುವುದು ಆಯಾ ಊರಿನ ಡೆಪ್ಯುಟಿ ಕಮಿಷನರು ಅಥವಾ ತಹಶೀಲ್ದಾರರು. ಅದೇಕೆ ಈ ರೆವಿನ್ಯೂ ಅಧಿಕಾರಿಗಳಿಗೆ ಬಸ್ ಕಂಡಕ್ಟರುಗಳ ಕೆಲಸ ವಹಿಸಿದ್ದಾರೋ?

ದಿಗ್ಲಿಪುರದ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರಿಗೆ ಕಾದು ಕಾದು ಸಾಕಾಯ್ತು. ಕೊನೆಗೊಬ್ಬ ಗುಮಾಸ್ತ ತಾನೇ ಟಿಕೆಟ್ ಕೊಡಲು ಮುಂದಾದ. ಕ್ಯಾಬಿನ್ನಿನ ಸೀಟುಗಳೆಲ್ಲಾ ಬುಕ್ಕಾಗಿದ್ದವು, ಸರ್ಕಾರಿ ಅಧಿಕಾರಿ ಗಳಿಗೆ. ಕೇವಲ ಡೆಕ್ ಸೀಟುಗಳು ಮಾತ್ರ ಉಳಿದಿದ್ದವು. ಟಿಕೆಟ್ ತಗೊಳ್ಳ ಬೇಕಾದರೆ ಚಂದ್ರು ಪೋರ್ಟ್‌ಬ್ಲೇರಿಗೆ ತಗೊಳ್ಳುವುದರ ಬದಲು ಮಾಯಾ ಬಂದರ್‌ಗೆ ತಗೊಂಡರು. ಮಾಯಾಬಂದರ್‌ನಿಂದಾದರೂ ಕ್ಯಾಬಿನ್ನಿನಲ್ಲಿ ಸೀಟು ಸಿಗಬಹುದೆಂದು ಅವರು ತಪ್ಪು ಲೆಕ್ಕಾಚಾರ ಹಾಕಿದರು.

ಬರುತ್ತಾ ನಾವು ದಿಗ್ಲಿಪುರದ ಮೀನು ಮಾರ್ಕೆಟ್ಟಿಗೆ ಹೋದೆವು. ಪೋರ್ಟ್‌ಬ್ಲೇರ್ ನಗರದ ಮೀನು ಮಾರ್ಕೆಟ್ಟಿನ ಎರಡರಷ್ಟು ದೊಡ್ಡದಾಗಿತ್ತು. ಅಷ್ಟೆಲ್ಲದೆ ಪೋರ್ಟ್‌ಬ್ಲೇರಿನಲ್ಲಿ ನಾವು ಕಾಣದಿದ್ದ ಅನೇಕಾನೇಕ ವಿಚಿತ್ರ ಮೀನುಗಳು ಅಲ್ಲಿ ರಾಶಿ ಬಿದ್ದಿದ್ದವು. ಅಲ್ಲಿನ ಸಮೃದ್ಧಿಯನ್ನು ನೋಡಿ ನಮಗೆ ಆಶ್ಚರ್ಯವಾಯ್ತು. ಬಾಳೇಕಾಯಿಗಿಂತ ದಪ್ಪಗಿದ್ದ ಸೀಗಡಿಗಳು ಕೇಜಿಗೆ ಹತ್ತು ರೂಪಾಯಿಯಂತೆ ಬುಟ್ಟಿಗಟ್ಟಲೆ ಬಿದ್ದಿದ್ದವು. ನಾವು ಬಂದರಿಗೆ ಹಿಂದಿರುಗಿ ಹೋದ ಮೇಲೆ ನಮಗೆ ಅಲ್ಲೇನು ಕೆಲಸ? ಅಕಸ್ಮಾತ್ ಇವರಾರಿಗೂ ವಸತಿ ಸೌಕರ್ಯ ಸಿಗದಿದ್ದರೆ ಗಾಳಹಾಕಿಕೊಂಡು ಸಮುದ್ರದ ದಂಡೆಯ ಮೇಲೆ ರಾತ್ರಿ ಕಳೆದುಬಿಡೋಣ ಎಂದು ನಿರ್ಧರಿಸಿ ಚಂದ್ರು ಸೀಗಡಿಯವನಿಗೆ ಒಂದು ರೂಪಾಯಿಗೆ ಸೀಗಡಿ ಕೊಡಲು ಕೇಳಿದರು.

ಆತ ಇವನ್ನು ಝಿಂಗಾ ಎಂದು ಕರೆಯಬೇಕೆಂದು ಹೇಳಿದ. ಒಂದು ಪ್ಲಾಸ್ಟಿಕ್ ಪೊಟ್ಟಣ ತೆಗೆದುಕೊಂಡು ಝಿಂಗಾಗಳನ್ನು ತೂಕ ಸಹ ಮಾಡದೆ

This PDF was created using the Sonic PDF Creator.
To remove this watermark, please license this product at www.investintech.com

ಅದಕ್ಕೆ ತುರುಕತೊಡಗಿದ. ಒಂದು ಸಮಾರಾಧನೆಗಾಗುವಷ್ಟು ಝಿಂಗಾಗಳನ್ನು ಚೀಲ ಬಿರಿಯುವಂತೆ ತುಂಬಿದ್ದನ್ನು ನೋಡಿ ಗಾಬರಿಯಾದ ಚಂದ್ರು ಒಂದು ರೂಪಾಯಿ ನೀನೇ ಇಟ್ಟುಕೋ, ಆದರೆ ನಮಗೆ ಇಷ್ಟೊಂದು ಝಿಂಗಾಗಳು ಬೇಡ ಎಂದು ಅರ್ಧಕ್ಕರ್ಧ ಝಿಂಗಾ ಅವನ ಬುಟ್ಟಿಗೇ ಹಾಕಿದರು. ಈ ಸಮೃದ್ಧಿ ಮತ್ತು ಅಗ್ಗದ ದರಗಳನ್ನು ನೋಡಿ ನಮಗೆ ದಿಗ್ಲಿಪುರದ ಮೇಲೆ ತುಂಬಾ ಮಮತೆ ಹುಟ್ಟಿತು. ದಿಗ್ಲಿಪುರದಲ್ಲಿ ದೊರೆಯುವ ಶ್ರೇಷ್ಠ ಮೀನುಗಳನ್ನೂ ಝಿಂಗಾ ಗಳನ್ನೂ ರುಚಿ ನೋಡಲಾದರೂ ದಿಗ್ಲಿಪುರದಲ್ಲಿ ಕೆಲವು ದಿನ ಉಳಿಯ ಬೇಕೆನ್ನಿಸಿತು. ಆದರೇನು ಮಾಡುವುದು ನಮಗಿದ್ದ ಕಾಲಮಿತಿಯೇ ನಮಗೊಂದು ಶಾಪವಾಗಿತ್ತು.

ನಾವು ದಿಗ್ಲಿಪುರದ ಬಂದರುಕಟ್ಟೆಗೆ ಹಿಂದಿರುಗಿದಾಗ ಅಲ್ಲೊಂದು ಗುಡ್ಡದ ಮೇಲಿನ ಪುರಾತನಕಾಲದ ಪ್ರವಾಸಿಗೃಹದಲ್ಲಿ ನಮಗೆ ವಸತಿ ಸಿಕ್ಕಿತ್ತು. ನಾವು ದಿಗ್ಲಿಪುರಕ್ಕೆ ಹೋದಾಗ ಏನೇನು ನಡೆಯಿತೋ ಗೊತ್ತಿಲ್ಲ. ಆ ಬಂಗಲೆಯ ಮೇಟಿ ಬೀಗ ತಗೊಂಡು ಎತ್ತಲೋ ಹೋಗಿದ್ದನಂತೆ. ಮಲ್ಲಿಕರ ಸ್ನೇಹಿತರಾದ ಅಧಿಕಾರಿ ಆ ಬೀಗ ಒಡೆಸಿ ಅದರಲ್ಲಿರಲು ನಮಗೆ ಸ್ಥಳಾವಕಾಶ ಮಾಡಿಕೊಟ್ಟರಂತೆ. ಆ ಪ್ರವಾಸಿಗೃಹ ಅಲ್ಲಿನ ಅತ್ಯಂತ ಎತ್ತರದ ಜಾಗದಲ್ಲಿ ಇತ್ತು. ಬೆಟ್ಟ ಹತ್ತಲು ಪಾವಟಿಗೆಗಳ ಸಾಲಿದ್ದವು. ಅಲ್ಲಿಂದ ಇಡೀ ದಿಗ್ಲಿಪುರದ ದೃಶ್ಯಗಳೆಲ್ಲಾ ಕಾಣುತ್ತಿತ್ತು.

ನಾವು ದಿಗ್ಲಿಪುರಕ್ಕೆ ಹೋಗಿದ್ದಾಗ ಅಲ್ಲಿಗೆ ಒಬ್ಬ ದೊಡ್ಡ ದೊಡ್ಡ ಝಿಂಗಾಗಳನ್ನು ಹೊತ್ತುತಂದನಂತೆ. ರಾಜೇಶ್ವರಿ ರಾಮದಾಸ್ ಇಬ್ಬರೂ ಅದನ್ನು ಕೊಳ್ಳಲು ಹೋದರಂತೆ. ಆದರೆ ಅಷ್ಟರಲ್ಲಿ ಓಂಗೇ ಹಡಗಿನ ಅಡಿಗೆಯವ ಬಂದು ಇವರಿಗೇ ಕೊಂಚವೂ ಸಿಕ್ಕದಂತೆ ಇಡೀ ಬುಟ್ಟಿಯನ್ನೇ ಕೊಂಡು ಬಿಟ್ಟನಂತೆ! ಇಬ್ಬರೂ ಹಡಗಿನ ಅಡಿಗೆಯವನಿಗೆ ಶಾಪಹಾಕುತ್ತ ಇದನ್ನು ಹೇಳಿದರು. ನಮ್ಮ ಬಳಿ ಎಣ್ಣೆ, ಹೆಂಚು ಎಲ್ಲಾ ಇತ್ತು. ಅದನ್ನು ಕೊಂಡಿದ್ದರೆ ನಾವೇ ಹುರಿದು ಅದನ್ನು ತಯ್ಯಾರು ಮಾಡಬಹುದಿತ್ತೆಂದು ಹೇಳಿಕೊಂಡು ಇಬ್ಬರೂ ಕೊರಗುತ್ತಾ ಇದ್ದರು. ಅವರಿಗೆ ನಾವು ದಿಗ್ಲಿಪುರದಲ್ಲಿ ನೋಡಿದ ಝಿಂಗಾಗಳ ಬಗ್ಗೆ ತಿಳಿಸಿದೆವು. ಅವರು ನಮಗೆ ಮಾತು ಹೇಳಿದ್ದರೆ ಒಂದಲ್ಲ ಹತ್ತು ಬುಟ್ಟಿ ಝಿಂಗಾಗಳನ್ನು ನಾವು ತರಬಹುದಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ಅಲ್ಲೊಬ್ಬ ಬಂಗಾಳಿ ಒಂದು ಗುಡಿಸಲು ಕಟ್ಟಿಕೊಂಡು ಟೀ ಷಾಪು ನಡೆಸುತ್ತಿದ್ದ. ಅವನು ರಾತ್ರಿ ಊಟ ಹಾಕಲು ಒಪ್ಪಿಕೊಂಡಿದ್ದ. ನಮಗೆ ಝಿಂಗಾ ಪಲ್ಯ ಮಾಡಿಕೊಡುತ್ತೇನೆಂದು ಆಶ್ವಾಸನೆ ಕೊಟ್ಟ. ಝಿಂಗಾ ಅಡಿಗೆ ಮಾಡುವುದು ಬಹಳ ಸುಲಭ. ಅದರ ತಲೆ ತೆಗೆದಸೆದು ಕೊಂಚ ಉಪ್ಪು ಖಾರ ಹಾಕಿ ಎಣ್ಣೆಯಲ್ಲಿ ಹುರಿದರೆ ಸಾಕು, ಗೇರುಬೀಜದಂತೆ ಬಾಯಲ್ಲಿ . ಕರಗ ತೊಡಗುತ್ತದೆ. ತಟ್ಟೆ ಖಾಲಿಯಾಗುವವರೆಗೆ ಎದ್ದೇಳಲು ಮನಸ್ಸೇ ಬರುವುದಿಲ್ಲ. ದಿಗ್ಲಿಪುರದಲ್ಲಿ ಮನಃತೃಪ್ತಿಯಾಗುವವರೆಗೆ ಝಿಂಗಾ ತಿನ್ನದೆ ಬಂದದ್ದು ನಮ್ಮ ಗೆಳೆಯರಿಗೆಲ್ಲಾ ಇವತ್ತಿಗೂ ದೊಡ್ಡ ಕೊರಗಾಗಿ ಉಳಿದಿದೆ. ಈ ತರ ಆಸೆ ಇಟ್ಟುಕೊಂಡು ಸತ್ತು ಅಂತರಪಿಶಾಚಿ ಆಗುವುದರ ಬದಲು ದಿಗ್ಲಿಪುರಕ್ಕೆ ಇನ್ನೊಮ್ಮೆ ಹೋಗಿ ನಮ್ಮ ನಾಲಗೆ ತೆವಲು ತೀರಿಸಿಕೊಂಡು ಬರುವುದು ಒಳ್ಳೆಯ ದಲ್ಲವೆ? ಝಿಂಗಾಗೋಸ್ಕರ ತಾತ್ಕಾಲಿಕವಾಗಿಯಾದರೂ ನಮಗೆ ದೆವ್ವ ಪಿಶಾಚಿ ಗಳಲ್ಲಿ ನಂಬಿಕೆ ಬರತೊಡಗಿರುವುದು ಸೋಜಿಗದ ಸಂಗತಿ!

ನಾವು ತಂದಿದ್ದ ಝಿಂಗಾ ತಗೊಂಡು ರಾತ್ರಿ ಸಮುದ್ರದ ತೀರದ ಬಂದರಿಗೆ ಹೋದೆವು. ಕೈಯ್ಯಲ್ಲೊಂದು ರೀಲು ರಾಡು ಇದ್ದರೆ ಕಾಲ ಸರಿಯುವುದು ಗೊತ್ತಾಗುವುದೇ ಇಲ್ಲ.

ಝಿಂಗಾ ಹಾಕಿ ನಾನೊಂದು ಮೀನು ಹಿಡಿದಾಗ ನನ್ನ ಹಿಂದೆ ರಾಜೇಶ್ವರಿ ನಿಂತಿದ್ದಳು. ಅದು ಯಾವ ಮೀನೆಂದು ಕೇಳಿದಳು. ನನಗೆ ಗೊತ್ತಿರ ಲಿಲ್ಲ. ದಾರಿಹೋಕನೊಬ್ಬನನ್ನು ಮೀನು ತೋರಿಸಿ "ಉಸ್ಕ ನಾಮ್ ಕ್ಯಾ" ಎಂದೆ. "ಕಟ್ಲಾ" ಎಂದ. ನನಗೆ ಆಶ್ಚರ್ಯವಾಯ್ತು. ಕಟ್ಲಾ ಮೀನು ನಾನು ತಿಳಿದಂತೆ ಸಿಹಿನೀರಿನ ಮೀನು; ಬಹುಶಃ ಇವರು ಕಂಡದ್ದನ್ನೆಲ್ಲಾ "ಕಟ್ಲಾ ರೂಹು, ಮೃಗಾಲ್" ಎಂದು ಕರೆಯುತ್ತಾರೇನೋ. ಇವರೆಲ್ಲಾ ಮೀನುಗಳಲ್ಲಿ ತಿನ್ನಬಹುದಾದುದು, ತಿನ್ನಬಾರದಾದುದು, ಈ ಎರಡು ಅಂಶಗಳನ್ನು ಮಾತ್ರ ಪ್ರಮುಖವಾಗಿ ಗಮನಿಸುತ್ತಾರೆಂದು ಕಾಣುತ್ತದೆ. ನಾವು ಹಿಡಿದ ಸಮುದ್ರಜೀವಿ ಗಳನ್ನೂ, ನೋಡಿದ ಪಶುಪಕ್ಷಿಗಳನ್ನೂ, ಕಂಡ ಮರಗಿಡಗಳನ್ನೂ ಅಭ್ಯಾಸ ಮಾಡಲು ತಕ್ಕ ಸಾಹಿತ್ಯವನ್ನು ಒಯ್ಯದಿದ್ದುದು ದೊಡ್ಡ ತಪ್ಪಾಯ್ತು.

ದೂರದಲ್ಲೊಂದು ಟ್ಯೂಬ್ ಲೈಟ್ ಇತ್ತು. ಅದರ ಬೆಳಕು ಕ್ಷೀಣವಾಗಿ ಬೆಳದಿಂಗಳಿನಂತೆ ಸಮುದ್ರದ ಮೇಲೆ ಬೀಳುತ್ತಿತ್ತು. ನಾನು ಅದರ ಬೆಳಕಿನಲ್ಲಿ ಸಮುದ್ರದೊಳಗೆ ಎಂಥವೋ ನೆರಳುಗಳು ಹರಿದಾಡುತ್ತಿದ್ದುದನ್ನು

This PDF was created using the Sonic PDF Creator.
To remove this watermark, please license this product at www.investintech.com

ನೋಡಿದೆ. ಮೊದಲು ಈ ಛಾಯೆಗಳು ಸಮುದ್ರದ ಅಲೆಗಳಿಂದ ಉಂಟಾಗುತ್ತಿರುವ ಭ್ರಾಂತಿ ಎಂದೇ ತಿಳಿದೆ. ಆದರೆ ಅವು ಪದೇಪದೇ ಕಾಣತೊಡಗಿದಾಗ ಕೊಂಚ ಗಮನವಿಟ್ಟು ನೋಡಬೇಕಾಯ್ತು. ಅವಕ್ಕೊಂದು ನಿಶ್ಚಿತ ಚಲನೆ ಇದ್ದಂತೆ ಕಂಡಿತು; ಒಮ್ಮೆ ಎರಡು ಮೂರು ನೆರಳುಗಳು ಒಟ್ಟೊಟ್ಟಿಗೆ ಓಡಾಡುವಂತೆ ತೋರಿತು. ದೀಪದ ಬೆಳಕಿಗೆ ಶಾರ್ಕುಗಳು ಸಮುದ್ರದಲ್ಲಿ ಆಕರ್ಷಿತವಾಗುತ್ತವೆ ಎಂದು ನಮಗೆ ನಾನ್‌ಕೋರಿ ಹಡಗಿನ ನ್ಯಾವಿಗೇಟರು ಹೇಳಿದ್ದು ಜ್ಞಾಪಕಕ್ಕೆ ಬಂತು.

ಆದರೆ ಆ ನೆರಳುಗಳು ಶಾರ್ಕುಗಳಂತೆ ಕಾಣಲಿಲ್ಲ. ಇದೇನು? ಎಷ್ಟು ದಿಟ್ಟಿಸಿ ನೋಡಿದರೂ ಛಾಯಾ ಮಾತ್ರವಾದ ಈ ನೆರಳುಗಳ ರೂಪರೇಷೆಗಳನ್ನು ಊಹಿಸಲೂ ಸಾಧ್ಯವಾಗಲಿಲ್ಲ. ಅವು ಅಕ್ಷರಶಃ ನೆರಳುಗಳಂತೆಯೇ ಇದ್ದವು. ಇದ್ದಕ್ಕಿದ್ದಂತೆ ಬಾಣದಂತೆ ವೇಗವಾಗಿ ಅಂತರ್ಧಾನವಾಗುತ್ತಿದ್ದವು. ಮತ್ತೆ ನಿದಾನವಾಗಿ ಸಮುದ್ರದ ಕತ್ತಲ ತಳದಿಂದ ಉದ್ಭವಿಸುತ್ತಿದ್ದವು. ತುಂಬಾ ಹೊತ್ತು ನಿಂತು ಅದೇನೆಂದು ನೋಡುತ್ತಲೇ ಇದ್ದೆ. ರಾಜೇಶ್ವರಿ ನಿದ್ದೆ ಬರುತ್ತದೆ ಎಂದು ಹೇಳಿ ಪ್ರವಾಸಿಗೃಹದ ಕಡೆಗೆ ಹೋದಳು.

ಇವು ಏನು? ಮೀನುಗಳೆ? ಶಾರ್ಕುಗಳೆ? ಹಾಗಾದರೆ ಗಾಳದ ತಿಂಡಿಗೆ ಸಿಕ್ಕುತ್ತವೆಯೆ? ಯೋಚಿಸಿದೆ. ನನ್ನ ಗಾಳಕ್ಕೆ ಒಂದು ಝಿಂಗಾ ಚುಚ್ಚಿ ಸಮುದ್ರ ದತ್ತ ಬೀಸಿದೆ. ಝಿಂಗಾ ಬೆಳ್ಳಗಿದ್ದುದರಿಂದ ಸಮುದ್ರದ ಕರಿಯ ಹಿನ್ನೆಲೆಯಲ್ಲಿ ಚೆನ್ನಾಗಿ ಕಾಣುತ್ತಿತ್ತು. ಅಲೆಗಳ ಮೇಲೆ ಅದನ್ನೇ ಗಮನಿಸುತ್ತಿದ್ದ ನನಗೆ ಎರಡು ನೆರಳುಗಳು ನಿಧಾನವಾಗಿ ಸಾಗರದ ಕರಿಯ ತಳದಿಂದ ಮೂಡಿ ಅದಕ್ಕೆ ಹತ್ತಿರಾದುದು ಕಂಡಿತು. ನಾನು ಉದ್ವೇಗದಿಂದ ಗಾಳಕ್ಕೆ ಚುಚ್ಚಿದ ಝಿಂಗಾ ನೋಡುತ್ತಲೇ ಇದ್ದೆ. ಒಂದು ನೆರಳು ತೀರಾ ಹತ್ತಿರಾಯ್ತು. ನಾನು ಗಾಳಕ್ಕೆ ಚುಚ್ಚಿದ್ದ ಬಿಳಿಯ ಝಿಂಗಾ ನೆರಳಿನೊಳಗೆ ಐಕ್ಯವಾಗಿ ಕಾಣದಾಯ್ತು. ಗಾಳದ ದಾರ ಸರ್ರನೆ ಮುಂದುವರಿದು ಬಿಗಿಯಾಯ್ತು. ಚಕ್ಕನೆ ದಾರ ಎಳೆದೆ. ಗಾಳಕ್ಕೆ ಏನೂ ಸಿಕ್ಕಲಿಲ್ಲ. ಖಾಲಿ ಗಾಳ ದಾರದೊಡನೆ ಹೊರಬಂತು. ಝಿಂಗಾ ನಾಪತ್ತೆ!

ಎಲಾ! ಇದ್ಯಾವ ರೀತಿಯ ಮೀನಪ್ಪಾ! ಮತ್ತೊಂದು ಝಿಂಗಾ ಚುಚ್ಚಿ ಗಾಳ ಬೀಸಿದೆ. ಸಮುದ್ರದಲ್ಲಿ ಇದ್ದಕ್ಕಿದ್ದಂತೆ ಮತ್ತೆ ನೆರಳುಗಳು ಮೂಡಿದವು. ಮತ್ತೆ ಒಂದು ನೆರಳಿನಲ್ಲಿ ನನ್ನ ಝಿಂಗಾ ಕಾಣದಾಯ್ತು. ಮತ್ತೆ ಎಳೆದೆ. ಖಾಲಿದಾರ ಗಾಳ ಬಂತು. ಝಿಂಗಾ ನಾಪತ್ತೆ!

This PDF was created using the Sonic PDF Creator.
To remove this watermark, please license this product at www.investintech.com

ಮತ್ತೆ ಮತ್ತೆ ಅನೇಕಾನೇಕ ಸಾರಿ ಎಸೆದೆ. ಪ್ರತಿಸಾರಿಯೂ ಸಾಗರದ ಛಾಯಾ ಪಿಶಾಚಿಗಳು ಬಂದು ಝಿಂಗಾ ಮಾಯ ಮಾಡುತ್ತಿದ್ದವು. ಆಗಲೇ ನಡುರಾತ್ರಿಯಾಗಿತ್ತು. ಹಡಗಿನಿಂದ ಸಾಮಾನಿಳಿಸುತ್ತಿದ್ದ ಹಲವರನ್ನು ಬಿಟ್ಟರೆ ಇಡೀ ಬಂದರು ಖಾಲಿಯಾಗಿತ್ತು.

ಈ ಛಾಯಾ ಜೀವಿಗಳು ಯಾವುವು? ಗಾಳಕ್ಕೆ ಯಾಕೆ ಸಿಕ್ಕುತ್ತಿಲ್ಲ? ಬಗೆಹರಿಯಲಿಲ್ಲ. ನನಗೂ ನಿದ್ದೆ ಬರುತ್ತಿತ್ತು. ಆದರೆ ಈ ಪ್ರಶ್ನೆಯನ್ನು ಹೀಗೆ ಉಳಿಸಿ ಹಿಮ್ಮೆಟ್ಟಲು ಮನಸ್ಸಾಗಲಿಲ್ಲ. ಇನ್ನೂ ದಿಗ್ಲಿಪುರದಿಂದ ತಂದ ಝಿಂಗಾ ಬೇಕಾದಷ್ಟಿದ್ದವು. ಅವೆಲ್ಲಾ ಮುಗಿಯುವವರೆಗೂ ಪ್ರಯತ್ನಿಸುವುದೆಂದು ದೃಢ ನಿಶ್ಚಯ ಮಾಡಿದೆ. ಆದರೆ ಮತ್ತೆ ಮತ್ತೆ ಝಿಂಗಾ ಚುಚ್ಚಿ ಎಸೆದಾಗಲೂ ಇದೇ ಪುನರಾವರ್ತನೆ. ಖಾಲಿ ಗಾಳ! ಝಿಂಗಾ ನಾಪತ್ತೆ! ನನಗೆ ನಿಜಕ್ಕೂ ನೆರಳಿಗೆ ಗಾಳ ಹಾಕುತ್ತಿದ್ದೇನೆಯೆ? ಎನ್ನುವ ಅನುಮಾನ ಬಂತು. ಆದರೆ ಅವು ಎಂಥವೋ ಪ್ರಾಣಿಗಳು ಎನ್ನುವುದರಲ್ಲಿ ಅನುಮಾನವೇ ಇರಲಿಲ್ಲ. ಏಕೆಂದರೆ ನಾನು ಎಸೆದ ಝಿಂಗಾ ನೆರಳಿನಲ್ಲಿ ಕಣ್ಮರೆಯಾದ ಕೂಡಲೇ ದಾರ ಬಿಗಿಯಾಗುತ್ತಿತ್ತು.

ಒಮ್ಮೆ ಒಂದು ಉಪಾಯ ಮಾಡಿದೆ. ಆ ನೆರಳು ನನ್ನ ಝಿಂಗಾ ಹಿಡಿದು ದಾರ ಎಳೆದುಕೊಂಡು ಹೊರಡುತ್ತಲೂ ನಾನು ದಾರ ಎಳೆಯದೆ ಸಡಿಲ ಮಾಡಿ ದಾರ ಬಿಡುತ್ತಾ ಬಂದೆ. ತುಂಬಾ ದೂರ ದಾರ ಎಳೆದುಕೊಂಡು ಆ ಛಾಯಾ ಪಿಶಾಚಿ ಸಮುದ್ರದಲ್ಲಿ ಕಣ್ಮರೆಯಾಯ್ತು. ಆಗೊಮ್ಮೆ ದಾರ ಕೊಡುವುದನ್ನು ನಿಲ್ಲಿಸಿ ದಾರ ಬಿಗಿಯಾಗುತ್ತಲೂ ಬಲವಾಗಿ ದಾರ ಜಗ್ಗಿಸಿ ಎಳೆದೆ. ಗಾಳಕ್ಕೆ ಆ ಪ್ರಾಣಿ ಸಿಕ್ಕಿಕೊಂಡಿರಬೇಕು. ಆ ಪ್ರಾಣಿಯ ಇಡೀ ಭಾರ ನನ್ನ ರಾಡಿನ ಮೇಲೆ ಬೀಳತೊಡಗಿತು. ತಗೊಳ್ಳಿ ಎಳೆದಾಟ ಶುರುವಾಯ್ತು! ಅದರ ಎಳೆದಾಟಕ್ಕೆ ನನ್ನ ರಾಡು ಬಳುಕುತ್ತಾ ನೃತ್ಯ ಮಾಡತೊಡಗಿತು. ಕೊಂಚ ಹೊತ್ತಿನೊಳಗೇ ದಡದತ್ತ ಅದನ್ನೆಳೆದು ಟ್ಯೂಬ್‌ಲೈಟಿನ ಅಡಿ ಹಾಕಿದೆ. ನನಗೆ ಆಶ್ಚರ್ಯ ಕಾದಿತ್ತು. ಆ ಛಾಯಾ ಪಿಶಾಚಿ ಮೀನೂ ಅಲ್ಲ! ಏಡಿಯೂ ಅಲ್ಲ ಆಮೆಯೂ ಅಲ್ಲ. ಅದೊಂದು ಸ್ಕ್ವಿಡ್.

ನನಗೆ ಆನಂದ ಆಶ್ಚರ್ಯ ಖುಷಿ ಎಲ್ಲ ಏಕಕಾಲದಲ್ಲಿ! ಸ್ಕ್ವಿಡ್‌ಗಳ ಬಗ್ಗೆ ತುಂಬ ಓದಿದ್ದೆ. ಸಾಗರದ ಈ ಭಯಜನಕವಾದ ವಿಚಿತ್ರ ಜೀವಿಗಳನ್ನು ಎಂದಾದರೊಮ್ಮೆ ಜೀವಂತವಾಗಿ ನೋಡಬೇಕೆಂದು ಆಶಿಸಿದ್ದೆ. ಆದರೆ ನಾನೇ ಅದನ್ನು ಹಿಡಿದು ಈಗ ದಡಕ್ಕೆ ಎಳೆದು ಹಾಕಿದ್ದೆ! ಅಂಡಮಾನಿನಲ್ಲಿ ದಡಕ್ಕೆ

This PDF was created using the Sonic PDF Creator.
To remove this watermark, please license this product at www.investintech.com

ಇಷ್ಟೊಂದು ಸಮೀಪದಲ್ಲೇ ಸ್ಕ್ವಿಡ್‌ಗಳು ಛಾಯಾನರ್ತನ ಮಾಡುತ್ತಿರುವುದು ನನಗೆ ಅಚ್ಚರಿಯ ಸಂಗತಿ. ಸ್ಕ್ವಿಡ್‌ಗಳ ಅನೇಕ ಭಯಂಕರ ಕತೆಗಳೆಲ್ಲ ಲೈಟು ಬೆಳಕಿನಲ್ಲಿ ಬಿದ್ದಿದ್ದ ಅದನ್ನು ನೋಡಿ ಜ್ಞಾಪಕಕ್ಕೆ ಬರತೊಡಗಿತು.

ಇವು ದೋಣಿಗಳಲ್ಲಿ ಹೋಗುತ್ತಿರುವವರನ್ನು ಎಳೆದು ತಿಂದಿವೆ! ಸಮುದ್ರದಲ್ಲಿ ಮುಳುಗುವ ಈಜುಗಾರರನೇಕರನ್ನು ಮತ್ತೆ ದಡ ಹತ್ತದಂತೆ ಮಾಡಿವೆ! ಗಾಳಕ್ಕೆ ಸಿಕ್ಕ ದೊಡ್ಡ ದೊಡ್ಡ ಮೀನುಗಳನ್ನು ದಡಕ್ಕೆಳೆದುಕೊಳ್ಳುವ ಮೊದಲೆ ಅಸ್ಥಿಪಂಜರ ಮಾಡಿವೆ. ಇವುಗಳ ಗುಂಪನ್ನು ಕಂಡರೆ ತಿಮಿಂಗಿಲಗಳೂ ಕೂಡ ಬೇಗ ಜಾಗ ಖಾಲಿ ಮಾಡುತ್ತವೆ. ದೀಪದ ಬೆಳಕಿನಲ್ಲಿ ಗಾಳಕ್ಕೆ ಸಿಕ್ಕಿಕೊಂಡಿದ್ದ ಸ್ಕ್ವಿಡ್ಡನ್ನು ಭಯ ಗೌರವಗಳಿಂದ ನೋಡಿದೆ. ಆಕ್ಟೋಪಸ್ಸಿಗಿರುವಂತೆಯೇ ಸ್ಕ್ವಿಡ್‌ಗೂ ಮುಂದುಗಡೆ ಎಂಟು ನೀಳ ಬಾಹುಗಳಿರುತ್ತವೆ. ಆ ಬಾಹುಗಳೊಂದಕ್ಕೆ ನನ್ನ ಗಾಳ ಚುಚ್ಚಿಕೊಂಡಿತ್ತು. ಸ್ಕ್ವಿಡ್‌ನ ಬಾಹುಗಳು ದಾರಕ್ಕೆ ನುಲಿನುಲಿದು ತಿರುಗುತ್ತಿದ್ದವು. ಸ್ಕ್ವಿಡ್‌ಗಳಿಗೆ ಮೀನುಗಳಿಗೆ ಇರುವಂತೆ ಬಾಯಿ ಇರುವುದಿಲ್ಲ. ಅದರ ಬದಲು ಗಿಳಿಗಳಿರುವಂಥ ಉಕ್ಕಿನಷ್ಟು ಗಟ್ಟಿಯಾದ ಕೊಕ್ಕಿರುತ್ತದೆ. ಅದಕ್ಕೇ ನನ್ನ ಗಾಳ ಕೊಕ್ಕಿಗೆ ಚುಚ್ಚಿಕೊಳ್ಳದೆ ಖಾಲಿ ಹಿಂದಿರುಗಿ ಬರುತ್ತಿದ್ದುದು.

ಸ್ಕ್ವಿಡ್ ದೇಹ ಆಕ್ಟೋಪಸ್ಸಿನಂತೆ ಜೋಳಿಗೆಯಂತೆ ಗುಂಡಗಿರುವುದಿಲ್ಲ. ಉದ್ದವಾಗಿ ಈಟಿಯಂತಿದ್ದು ಅದರ ಎರಡು ತುದಿಗಳಲ್ಲೂ ಎರಡು ಪಾರದರ್ಶಕ ರೆಕ್ಕೆಗಳಿರುತ್ತವೆ. ಆಕ್ಟೋಪಸ್ ಸ್ಕ್ವಿಡ್‌ನಂತೆ ಆಕ್ರಮಣಕಾರಿಯಲ್ಲ. ಮನುಷ್ಯ ಸಾಮೀಪ್ಯ ಕಂಡೊಡನೆ ಯಾವುದಾದರೂ ಬಿರುಕಿನಲ್ಲಿ ಅಡಗಿಬಿಡುತ್ತದೆ. ಆದರೆ ಸ್ಕ್ವಿಡ್‌ಗಳಾದರೋ ಭಯಂಕರ ಆಕ್ರಮಣಶೀಲವಾದವು. ಸುಮಾರು ಅರವತ್ತು ಅಡಿಗಳಷ್ಟು ದೊಡ್ಡದಾಗಿ ಬೆಳೆಯುವ ಈ ಸ್ಕ್ವಿಡ್‌ಗಳು ಸಮುದ್ರದಡಿ ಚಲಿಸಿದ್ದನ್ನೆಲ್ಲಾ ಹಿಡಿದುಬಿಡುತ್ತವೆ.

ಪೋರ್ಚುಗಲ್ಲಿನ ಬಳಿ ಇಬ್ಬರು ಬೆಸ್ತರೂ ಒಬ್ಬ ಹುಡುಗನೂ ದೋಣಿಯೊಂದರಲ್ಲಿ ಮೀನು ಹಿಡಿಯುತ್ತಿರಬೇಕಾದರೆ ಒಂದು ದೊಡ್ಡ ಸ್ಕ್ವಿಡ್‌ನ ಆಕ್ರಮಣಕ್ಕೆ ಗುರಿಯಾದರು. ಆ ಸ್ಕ್ವಿಡ್ ಅವರ ದೋಣಿಯ ಮುಂಭಾಗವನ್ನು ತನ್ನ ಕಬಂಧ ಬಾಹುಗಳ ವಜ್ರಮುಷ್ಟಿಯಲ್ಲಿ ಹಿಡಿದು ನಿಧಾನವಾಗಿ ಅದನ್ನು ನೀರೊಳಗೆ ಎಳೆಯತೊಡಗಿತು. ದೋಣಿ ಓಲುತ್ತಾ ಓಲುತ್ತಾ ಸಮುದ್ರದ ನೀರು ಒಳನುಗ್ಗತೊಡಗಿತು. ಮೂವರು ಬೆಸ್ತರೂ ದೋಣಿಯ ಇನ್ನೊಂದು ಮೂಲೆಗೆ

This PDF was created using the Sonic PDF Creator.
To remove this watermark, please license this product at www.investintech.com

ಹಿಮ್ಮೆಟ್ಟಿ ಅಸಹಾಯಕರಾಗಿ ನೋಡುತ್ತಿದ್ದರು. ಇನ್ನೇನು ದೋಣಿ ಮುಳುಗೇ ಬಿಡುತ್ತದೆನ್ನಬೇಕಾದರೆ ಹುಡುಗನಿಗೆ ದೋಣಿಯ ತಳದಲ್ಲಿದ್ದ ಚಾಕು ಕಾಣಿಸಿತು. ಹುಡುಗ ಮಿಂಚಿನ ವೇಗದಲ್ಲಿ ಅದನ್ನೆತ್ತಿಕೊಂಡು ಆ ಸ್ಕ್ವಿಡ್ಡಿನ ಒಂದೊಂದೇ ಬಾಹುಗಳನ್ನು ಕತ್ತರಿಸತೊಡಗಿದ. ಹುಡುಗ ಅದರ ಕೊನೆಯ ಬಾಹುವನ್ನು ಕತ್ತರಿಸುವವರೆಗೂ ಆ ಸ್ಕ್ವಿಡ್ ದೋಣಿಯನ್ನು ಸಮುದ್ರದ ತಳಕ್ಕೆ ಎಳೆಯುತ್ತಲೇ ಇತ್ತು. ಅರ್ಧಕ್ಕರ್ಧ ನೀರಿನಲ್ಲಿ ಆಗಲೇ ಮುಳುಗಿದ್ದ ದೋಣಿಯಿಂದ ನೀರ ನ್ನೆಲ್ಲಾ ಹೊರಗೆತ್ತಿ ಹಾಕಿ ಮೂವರೂ ದಡಕ್ಕೆ ದೌಡಾಯಿಸಿದರು. ಈ ಮೀನು ಗಾರರ ಕತೆಯನ್ನು ಮೊದಲು ಯಾರೂ ನಂಬಲೇ ಇಲ್ಲ. ಆದರೆ ಇನ್ನೂ ದೋಣಿಗೆ ಸುತ್ತಿಕೊಂಡೇ ಇದ್ದ ಆ ಸ್ಕ್ವಿಡ್‌ನ ಭಯಂಕರ ಬಾಹುಗಳನ್ನು ನೋಡಿದ ಮೇಲೆ ಅವರಿಗೆ ನಂಬದೇ ವಿಧಿಯೇ ಇರಲಿಲ್ಲ.

ಇದೇರೀತಿ 1941ರಲ್ಲಿ ಇಂಗ್ಲೆಂಡಿನ ಹಡಗು ಬ್ರಿಟಾನಿಯ ಸಾಗರದ ನಡುವೆ ಅಪಘಾತದಲ್ಲಿ ಮುಳುಗಿದಾಗ ಜೀವರಕ್ಷಕ ದೋಣಿಗಳಲ್ಲಿ ನಾವಿಕರು ಸಮುದ್ರದಲ್ಲಿ ಹೊರಟರು. ಈ ನಾವಿಕರ ದೋಣಿಗಳನ್ನು ಬೆನ್ನಟ್ಟಿದ ಸ್ಕ್ವಿಡ್ ಗಳು ಸಮುದ್ರದಿಂದ ತಮ್ಮ ಬಾಹುಗಳನ್ನು ಚಾಚಿ ಚಾಚಿ ನಾವಿಕರನ್ನು ಒಬ್ಬೊಬ್ಬರನ್ನೇ ಸಮುದ್ರದೊಳಕ್ಕೆ ಎಳೆದುಕೊಂಡದ್ದು ಅಳಿದುಳಿದವರು ಬಂದು ಹೇಳಿದ ಭಯಾನಕ ಕತೆ.

ಸ್ಕ್ವಿಡ್‌ಗಳ ಶರೀರ ಒಂದು ರೀತಿಯ ಪಾರದರ್ಶಕ ಪ್ಲಾಸ್ಟಿಕ್ಕಿನಂತೆ ಇರುತ್ತದೆ. ಆದಕ್ಕೇ ಇವು ಸಮುದ್ರದ ನಸುಗತ್ತಲಲ್ಲಿ ನನಗೆ ಓಡಾಡುವ ನೆರಳುಗಳಂತೆ ಕಂಡಿದ್ದು. ಇವು ಮೀನಿನಂತೆ ರೆಕ್ಕೆ ಬಡಿದುಕೊಂಡು ಈಜುವುದಿಲ್ಲ. ಸ್ಪಂಜಿನಂಥ ತಮ್ಮ ದೇಹದಿಂದ ಸಮುದ್ರದ ನೀರನ್ನು ಒಳಗೆಳೆದುಕೊಂಡು ತಮ್ಮ ಕೊಕ್ಕಿನ ಬಳಿ ಇರುವ ರಂಧ್ರದಿಂದ ಪಿಚಕಾರಿಯಂತೆ ವೇಗವಾಗಿ ಚಿಮ್ಮಿಸುತ್ತವೆ. ಎಷ್ಟು ರಭಸದಿಂದ ವೇಗವಾಗಿ ಈ ಕ್ರಿಯೆ ನಡೆಯುತ್ತದೆಂದರೆ ಇವು ಜೆಟ್ ವಿಮಾನದಷ್ಟು ವೇಗವಾಗಿ ನೀರಿನಲ್ಲಿ ಚಲಿಸುತ್ತವೆ. ಒಮ್ಮೆ ನಾನು ದಾರ ಎಳೆದಾಗ ಗಾಬರಿಯಾದ ಒಂದು ಸ್ಕ್ವಿಡ್ ಎಷ್ಟು ಬಲವಾಗಿ ನೀರನ್ನು ಪಂಪ್ ಮಾಡಿತೆಂದರೆ ಅದು ಸಮುದ್ರ ಬಿಟ್ಟು ಮೂರು ಅಡಿಗಳಷ್ಟು ಮೇಲೆ ಗಾಳಿಯಲ್ಲೇ ಹಾರಿತು.

ಇಂಥ ಸ್ಕ್ವಿಡ್‌ಗಳನ್ನೂ ಹಿಡಿದು ತಿನ್ನುವ ಅನೇಕ ಜೀವಿಗಳಿರುವುದು ಒಂದು ವಿಚಿತ್ರ. ಕಿಲ್ಲರ್‌ವೇಲ್‌ಗಳೂ ಶಾರ್ಕುಗಳೂ ಸ್ಕ್ವಿಡ್‌ಗಳ ಚಿಕ್ಕ ಗುಂಪುಗಳ

This PDF was created using the Sonic PDF Creator.
To remove this watermark, please license this product at www.investintech.com

ಮೇಲೆ ದಾಳಿಮಾಡಿ ತಿನ್ನುತ್ತವೆ. ಸ್ಕ್ವಿಡ್‌ಗಳು ಅಪಾಯ ಒದಗಿದಾಗ ಟಾರಿನಷ್ಟು ಕಪ್ಪಗಿರುವ ಒಂದು ಬಗೆಯ ದ್ರವವನ್ನು ಹೊರಕ್ಕೆ ಕಾರುತ್ತವೆ. ಇದು ಸಮುದ್ರದ ನೀರಿನಲ್ಲಿ ವ್ಯಾಪಿಸಿ ಕತ್ತಲು ಕವಿದಂತಾಗುತ್ತದೆ. ಇವನ್ನು ಹಿಡಿಯಲುಬಂದ ಜೀವಿಗೆ ಕತ್ತಲು ಕವಿದಂತಾಗಿ ಕಣ್ಣೇಕಾಣುವುದಿಲ್ಲ. ಸ್ಕ್ವಿಡ್ ಆಗಲೇ ಅಲ್ಲಿಂದ ಮಿಂಚಿ ಮಾಯಾವಾಗಿರುತ್ತದೆಂಬುದನ್ನು ಅದು ತಿಳಿಯುವುದೇ ಇಲ್ಲ.

ನಾನು ಆ ಸ್ಕ್ವಿಡ್ಡಿನ ಬಾಹುಗಳಿಂದ ಗಾಳ ತೆಗೆಯಲು ಪ್ರಯತ್ನಿಸುತ್ತಿರಬೇಕಾದರೆ ಅದು ಕರಿಯ ದ್ರವ ಕಾರತೊಡಗಿತು. ನನ್ನ ಮೈಕೈ ಎಲ್ಲ ಇಂಕಿನಲ್ಲಿ ಅದ್ದಿದಷ್ಟು ಕಪ್ಪಾಯ್ತು. ಅಲ್ಲಿ ಚೀಲ ಹೊರುತ್ತಿದ್ದವನೊಬ್ಬ ನನ್ನ ಬಳಿ ಬಂದು ಅದನ್ನು ಮತ್ತೆ ಸಮುದ್ರಕ್ಕೆ ಎಸೆಯುವುದಾದರೆ ನನಗೇ ಕೊಟ್ಟುಬಿಡಿ. ಇದು ಸಮುದ್ರದಲ್ಲಿ ದೊರೆಯುವ ವಸ್ತುಗಳಲ್ಲೆಲ್ಲಾ ಅತ್ಯಂತ ರುಚಿಕರ ಖಾದ್ಯ ಪದಾರ್ಥ ಎಂದು ಹೊಗಳಿದ. ನಾನು ನನ್ನ ಗಾಳ ಬಿಡಿಸಿಕೊಟ್ಟರೆ ಅದನ್ನು ನಿನಗೇ ಕೊಡುತ್ತೇನೆಂದು ಹೇಳಿದೆ. ಅವನಿಗೆಷ್ಟು ಸಂತೋಷವಾಯಿತೆಂದರೆ ನನ್ನ ಗಾಳ ಬಿಡಿಸಿ ಆದಮೇಲೆ ಮೂಟೆ ಹೊರುವ ಕೆಲಸಕ್ಕೆ ವಿದಾಯ ಹೇಳಿ ಅದನ್ನು ಹೊತ್ತುಕೊಂಡು ಮನೆಗೇ ಹೋದ.

ಈ ಸ್ಕ್ವಿಡ್‌ಗಳು ದೊಡ್ಡ ದೊಡ್ಡ ವಿಸ್ತಾರವಾದ ಗುಂಪುಗಳಲ್ಲಿ ಸಮುದ್ರದಲ್ಲಿ ಚಲಿಸುತ್ತವೆ. ಎಷ್ಟು ದೊಡ್ಡ ಗುಂಪುಗಳಲ್ಲಿ ಎಂದರೆ ಒಂದರ ಪಕ್ಕ ಒಂದರಂತೆ ಹತ್ತಾರು ಚದರ ಮೈಲುಗಳಷ್ಟು ವಿಸ್ತಾರವಾಗಿರುತ್ತವೆ. ಒಮ್ಮೆ ಈ ರೀತಿ ತೇಲುತ್ತಿರುವ ಸ್ಕ್ವಿಡ್‌ಗಳ ಗುಂಪಿನ ನಡುವೆ ಒಂದು ಹಡಗು ಸುಮಾರು ಎರಡು ಗಂಟೆಗಳವರೆಗೆ ಪ್ರಯಾಣ ಮಾಡಿತೆಂದರೆ ಕೊನೆಯಪಕ್ಷ ಈ ಗುಂಪು ನಲ್ವತ್ತು ಚದರ ಮೈಲಿಗಳಷ್ಟಾದರೂ ವಿಸ್ತಾರವಾಗಿರಬೇಕು.

ನಡುರಾತ್ರಿ ಮೀರಿರಬೇಕು. ಇನ್ನೂ ಈ ಛಾಯಾಜೀವಿಗಳು ಸಮುದ್ರದ ನಸುಗತ್ತಲಲ್ಲಿ ದೆವ್ವಗಳಂತೆ ಓಡಾಡುತ್ತಲೇ ಇದ್ದುವು. ಈ ಸ್ಕ್ವಿಡ್‌ಗಳ ಚರಿತ್ರೆ ಹೇಳಲು ಸುತ್ತಲೂ ಯಾರೂ ಕಾಣಲಿಲ್ಲ. ಟ್ಯೂಬ್‌ಲೈಟ್ ಬೆಳಕಿನಲ್ಲಿ ಆ ನಿರ್ಜನ ಬಂದರಿನಲ್ಲಿ ನಿಂತುಕೊಂಡಾಗ ನಾನೂ ಒಂದು ಸ್ಕ್ವಿಡ್ ಹಿಡಿದು ಎಳೆದು ಹಾಕಿದೆನೆಂದು ಹೆಮ್ಮೆಯಾಯ್ತು.

This PDF was created using the Sonic PDF Creator.
To remove this watermark, please license this product at www.investintech.com



# 14. ಟಿಕೆಟ್ಟಿಲ್ಲದ ಪಯಣಿಗರು

ಓಂಗೇ ಹಡಗು ಮಾಯಾಬಂದರಿನಲ್ಲಿ ರಾತ್ರಿನಿಂತು ಮಾರನೆಯ ದಿನ ಅಲ್ಲಿಂದ ಪೋರ್ಟ್‌ಬ್ಲೇರಿಗೆ ಹೊರಡುತ್ತಿತ್ತು. ನಾವು ದಿಗ್ಲಿಪುರದಿಂದ ಮಾಯಾ ಬಂದರಿನವರೆಗೆ ಮಾತ್ರ ಟಿಕೆಟ್ ತಗೊಂಡಿದ್ದೆವು. ಪೋರ್ಟ್‌ಬ್ಲೇರಿಗೆ ಮಾಯಾ ಬಂದರಿನಿಂದ ಕ್ಯಾಬಿನ್ ಟಿಕೆಟ್‌ಗಳನ್ನು ತಗೊಂಡು ಆರಾಮವಾಗಿ ಹೋಗಬಹು ದೆಂದು ಆಲೋಚಿಸಿದ್ದೆವು. ಆದರೆ ನಮ್ಮ ಆಲೋಚನೆ ಲೆಕ್ಕಾಚಾರಗಳೆಲ್ಲಾ ಸಂಪೂರ್ಣ ತಲೆಕೆಳಗಾಗಿ ಹೋಯ್ತು. ಕ್ಯಾಬಿನ್ ಟಿಕೆಟ್ಟುಗಳಿರಲಿ, ಯಾವ ಟಿಕೆಟ್ಟುಗಳೂ ಇಲ್ಲ. ನೀವು ಈ ಹಡಗಿನಲ್ಲಿ ಹೋಗುವ ಹಾಗಿಲ್ಲವೆಂದು ಮಾಯಾಬಂದರಿನ ಅಧಿಕಾರಿಗಳು ತಿಳಿಸಿದರು.

ನಮಗೋ ಇದೊಂದು ದೊಡ್ಡ ಆಘಾತ! ಇನ್ನೊಂದು ಹಡಗು ಯಾವಾಗ ಬಂದೀತು ಯಾವಾಗ ಹೊರಡುತ್ತೆ ಯಾರಿಗೂ ಗೊತ್ತಿಲ್ಲ. ವಿಮಾನ ದಲ್ಲಿ ನಮ್ಮ ಟಿಕೆಟ್‌ಗಳೆಲ್ಲಾ ಬುಕ್ಕಾಗಿ ಹೊರಡುವ ದಿನಾಂಕ ಬೇರೆ ನಮಗೆ

This PDF was created using the Sonic PDF Creator.
To remove this watermark, please license this product at www.investintech.com

ನಿಶ್ಚಯವಾಗಿದೆ. ಮಾಯಾಬಂದರಿನ ತಾಶೀಲ್ದಾರನಾದರೋ ನಮ್ಮ ಮನವಿಗೆ ಬಿಲ್‌ಕುಲ್ ಬಗ್ಗುತ್ತಿಲ್ಲ. ಸಾಧ್ಯವೇ ಇಲ್ಲವೆಂದು ಖಡಾಖಂಡಿತವಾಗಿ ಹೇ ಬಾಗಿಲು ಮುಚ್ಚಿಕೊಂಡು ಆಫೀಸ್ ಬಿಟ್ಟು ಹೊರಟೇಹೋದ!

ಅಂಡಮಾನ್ ನಿಜಕ್ಕೂ ನನಗೆ ಅದ್ಭುತ ಸುಂದರವಾಗಿತ್ತು. ನ ಪಾಡಿಗೆ ನನ್ನನ್ನು ಬಿಟ್ಟರೆ ತಿಂಗಳುಗಟ್ಟಲೆ ವರ್ಷಗಟ್ಟಲೆ ಅಥವಾ ಜೀವಮಾ ಪರ್ಯಂತ ಬೇಕಾದರೂ ಇದ್ದೇನು. ಆದರೆ ನೀನು ಇಲ್ಲೇ ಇರಬೇಕು. ಎಲ್ಲಿಗ ಹೋಗುವಂತೆಯೇ ಇಲ್ಲ ಎಂದು ಯಾರಾದರೂ ಅಂದರೆ ಅಲ್ಲಿಗೆ ಮುಗಿಯಿ ನನ್ನ ಕಥೆ. ಆನಂತರ ಅಲ್ಲಿ ಕಳೆಯುವ ಪ್ರತಿಯೊಂದು ಕ್ಷಣವೂ ನನ ಭೀಕರವಾಗತೊಡಗುತ್ತದೆ. ಬದುಕಿರುವವನಿಗೆ ಸಾವಿನಂತೆ, ಯಾವುದಕ್ಕೂ ನನ ಸದಾ ಹೊರದಾರಿಯೊಂದು ತೆರೆದಿರಲೇಬೇಕು. ಆಗಲೇ ನನಗೆ ಜೀವನ ಸುಂದ ಕುತೂಹಲಕರ. ಅದು ಮುಚ್ಚಿಕೊಂಡಿತೋ ತಕ್ಷಣ ಅದು ಸಾಕ್ಷಾತ್ ಸ್ವಗ ವಾದರೂ ನರಕವಾಗತೊಡಗುತ್ತದೆ. ಆ ತಾಶೀಲ್ದಾರನ ಮಾತುಗಳಿಂದ ನಮ ಯಾವುದೋ ದ್ವೀಪದಲ್ಲಿ ಬಂದು ಸಿಕ್ಕಿಕೊಂಡ ಭಾವನೆ ಬರತೊಡಗಿತು ಅಂಡಮಾನಿಗೂ ಭಾರತಕ್ಕೂ ನಡುವೆ ಸಾವಿರಾರು ಮೈಲುಗಳವರೆಗೆ ಹಬ್ಬಿರು ಸಮುದ್ರ, ಸುತ್ತಲ್ಲ ಕವಿದಿರುವ ಕಾಡು, ಟಿಕೆಟ್ ಕೊಡದೆ ನಮ್ಮನ್ನು ಇಲ್ಲೇ ಕೊಳೆಹಾಕಲು ಯತ್ನಿಸುತ್ತಿರುವ ಜನಗಳು, ಎಲ್ಲ ಭಯಂಕರವಾಗಿ ಕಾ ತೊಡಗಿತು.

ಅಲ್ಲಿನ ಅರಣ್ಯಾಧಿಕಾರಿಯೊಬ್ಬನನ್ನು ಪರಿಚಯ ಮಾಡಿಕೊಂಡಿದ್ದವು ಆವರನ್ನು ಕರೆದೊಯ್ದು ಅವರ ಪ್ರಭಾವದಿಂದಲಾದರೂ ಟಿಕೆಟ್ ದೊರಕಿಸಿ ಕೊಳ್ಳಲು ಯತ್ನಿಸಿದೆವು. "ಊಹ್ಞೂ, ಏನು ಮಾಡಿದರೂ ಸಾಧ್ಯವಿಲ್ಲ" ಎಂಬ ದೊಂದೇ ಆವನ ಉತ್ತರ. ನಮಗೆ ಇದ್ದಕ್ಕಿದ್ದಂತೆ ಅಂಡಮಾನ್ ಒಂದ ಚಕ್ರವ್ಯೂಹವಾಗಿ, ಬಂದೀಖಾನೆಯಾಗಿ, ನಿರ್ದಯಕ್ರೂರ ಪ್ರದೇಶವಾಯ್ತು.

ಚಂದ್ರುಗೆ ನನಗೆ ದಿಗ್ಲಿಪುರದಲ್ಲಿ ಪೋರ್ಟ್‌ಬ್ಲೇರಿಗೆ ಟಿಕೆಟ್ ತಗೊಳ್ಳ ದಿದ್ದುದಕ್ಕೆ ಎಲ್ಲರೂ ಬಯ್ಯತೊಡಗಿದರು. ಏನು ಫಲ! ಇಲ್ಲಿಂದ ಹೇಗೆ ತಪ್ಪಿಸಿ ಕೊಳ್ಳುವುದು?

ಬಸವರಾಜು ಹಡಗಿನ ಕ್ಯಾಪ್ಟನ್ ಕೇಳಿನೋಡೋಣ ಎಂದರು. ದಿಗ್ಲಿಪುರಕ್ಕೆ ಹೋಗುತ್ತಾ ಬಸವರಾಜು ಕ್ಯಾಪ್ಟನ್ ಜೊತೆ ಕುಳಿತುಕೊಂಡು ಕ್ರಿಕೆಟ್ ಕಾಮೆಂಟರಿ ಕೇಳಿದ್ದರು. ಆತ ಕೊಚ್ಚಿಯವನಂತೆ! ಆತನೂ ನಮ್ಮೆಲರ

This PDF was created using the Sonic PDF Creator.
To remove this watermark, please license this product at www.investintech.com

ಇತ್ಯೋಪರಿಗಳನ್ನು ಕೇಳಿದನಂತೆ! ಹಾಗಾಗಿ ಬಸವರಾಜು ಆ ಪರಿಚಯವನ್ನು ಉಪಯೋಗಿಸಲು ನಿರ್ಧರಿಸಿದರು. ಆದರೆ ಹಡಗಿನ ಕ್ಯಾಪ್ಟನ್ನಿಗೆ ಅದರಲ್ಲಿ ಪ್ರಯಾಣ ಮಾಡುವವರ ಮೇಲಾಗಲೀ ಟಿಕೆಟ್ ಕೊಡುವವರ ಮೇಲಾಗಲೀ ಯಾವುದೇ ರೀತಿಯ ಹತೋಟಿ ಇರಲಿಲ್ಲ. ಆತನಿಗೆ ಟಿಕೆಟ್ ಕೊಡಲು ಸಾಧ್ಯವಿಲ್ಲೆಂದು ನಮಗೆ ಚೆನ್ನಾಗಿ ಗೊತ್ತಿತ್ತು. ಸುಮ್ಮನೆ ಗೋಳೋ ಎಂದು ಕುಳಿತುಕೊಳ್ಳುವುದರ ಬದಲು ಆತನ ಬಳಿಯಾದರೂ ಗೋಳು ತೋಡಿಕೊಳ್ಳೋಣವೆಂದಷ್ಟೆ ನಮ್ಮ ಯೋಚನೆಯಾಗಿತ್ತು.

ನಾನು ಚಂದ್ರು ಕಡಲದಂಡೆಯಿಂದ ಹಿಂದಿರುಗಿ ಬರುತ್ತಿದ್ದಾಗ ಬಸವರಾಜು ನೇತೃತ್ವದಲ್ಲಿ ಒಂದು ಚಿಕ್ಕ ನಿಯೋಗ ಹಡಗಿನ ಕಡೆಗೆ ಹೋಗುತ್ತಾ ಇತ್ತು. ಕಳವಳ ತುಂಬಿದ್ದ ಅವರ ಮುಖ ಕಸಾಯಿಖಾನೆಯಲ್ಲಿನ ಕುರಿಗಳ ಮುಖದಂತೆ ಕಾಣುತ್ತಿತ್ತು. ಇದ್ದಕ್ಕಿದ್ದಂತೆ ಪ್ರವಾಸದ ಪ್ರಯಾಸವೆಲ್ಲಾ ಅನುಭವಕ್ಕೆ ಬರತೊಡಗಿ ಅಂಡಮಾನಿನ ಸ್ವಾರಸ್ಯವೇ ಇಂಗಿಹೋಗಿತ್ತು.

ನಾವು ಮಾಯಾಬಂದರಿನ ಸುಂದರ ಪ್ರವಾಸಿಗೃಹದಲ್ಲಿ ಕಿತ್ತಲೆ ಹಣ್ಣುಗಳನ್ನು ಸುಲಿಯುತ್ತಿರಬೇಕಾದರೆ ಬಸವರಾಜು ನಿಯೋಗ ಮತ್ತೆ ಬಂದರಿನ ಕಡೆಯಿಂದ ಹಿಂದಿರುಗಿ ಬರುತ್ತಿರುವುದು ಕಂಡಿತು. ಅವರ ಮುಖದಲ್ಲಿನ ಕಳವಳ ಕೊಂಚ ಕಡಿಮೆಯಾಗಿದ್ದಂತೆ ತೋರಿತು. ಬಹುಶಃ ಟಿಕೆಟ್ ಸಿಕ್ಕಿರಬಹುದೆಂದು ಊಹಿಸಿದೆ.

"ಏನ್ರೀ ಟಿಕೆಟ್ ಸಿಕ್ಕಿರೋ ಹಾಗೆ ಕಾಣ್ತದೆ?" ಎಂದೆ.

"ಎಲ್ಲಿಂದ ಸಿಗೋದು? ದಿಗ್ಲಿಪುರದಲ್ಲೇ ಫೋರ್ಟ್‌ಬ್ಲೇರಿಗೆ ಟಿಕೆಟ್ ತಗೊಳ್ಳಿ ಎಂದು ನಾನು ಹೇಳಿರಲಿಲ್ಲವೆ? ನಿಮಗ್ಯಾರು ಇಲ್ಲಿಗೆ ತಗೊಳ್ಳಲು ಹೇಳಿದ್ದು ಎಂದು ಎಲ್ಲರೆದುರು ಚೆನ್ನಾಗಿ ಉಗಿದ" ಎಂದರು ಬಸವರಾಜು.

ಅಯ್ಯೋ ದೇವರೆ! ನಮಗಿದ್ದ ಕೊನೇ ಆಶಾಕಿರಣವೂ ಮಾಯವಾಯ್ತಲ್ಲ! ಎನ್ನಿಸಿತು.

"ಅಲ್ರೀ ಭಾರಿ ಫ್ರೆಂಡ್ಲಿ ಆಗಿದಾನೆ ಅಂತ ಹೋಗಿದ್ರಿ. ಈಗ ನೋಡಿದರೆ ಎಲ್ಲರೆದುರು ಚೆನ್ನಾಗಿ ಉಗಿದ ಅಂತ ಹೇಳ್ತಿರಲ್ರೀ!"

"ಹಡಗಿಗೆ ಟಿಕೆಟ್ ಕೊಡೋದು ಅವನ ಕೈಲಿಲ್ವಂತೆ! ಹಾಗೇನಾದರೂ ಮಾಡಿದರೆ ಮೇಲಧಿಕಾರಿಗಳಿಗೆ ರಿಪೋರ್ಟ್ ಮಾಡಿ ಅವನ ಕೆಲಸಕ್ಕೇ ಸಂಚಕಾರ ಬರ್ತದಂತೆ!"

This PDF was created using the Sonic PDF Creator.
To remove this watermark, please license this product at www.investintech.com

"ಸರಿಯಪ್ಪಾ ಈಗ ಮುಂದಿನ ದಾರಿ ಏನು? ಇಲ್ಲಿಂದ ಬಸ್ ಹತ್ತಿ ರಂಗತ್‌ಗಾದರೂ ಹೋಗೋಣ. ಅಲ್ಲಿ ಯಾವುದಾದರೂ ಹಡಗು ಪೋರ್ಟ್ ಬ್ಲೇರಿಗೆ ಸಿಗಬಹುದು" ಎಂದು ಚಂದ್ರು ಹೇಳಿದರು.

"ರಂಗತ್ ಬಸ್ಸು ಹೋಗಿಯಾಯ್ತು. ಅಲ್ಲಿಂದ ಯಾವ ಹಡಗು ಪೋರ್ಟ್‌ಬ್ಲೇರಿಗೆ ಇರೋದಿಲ್ಲ. ನಾವು ಬಂದ ಲಿಟಲ್ .ಅಂಡಮಾನ್ ಹಡಗ ನಿನ್ನೆಯೇ ಪೋರ್ಟ್‌ಬ್ಲೇರಿಗೆ ಹೋಗಿರುತ್ತೆ" ಮಲ್ಲಿಕ್ ನಮ್ಮ ಮೇಲೆ ಇನ್ನಷ್ಟು ತಣ್ಣೀರೆರಚಿದರು.

ಬಸವರಾಜು "ನಾವೀಗ ಪೋರ್ಟ್‌ಬ್ಲೇರಿಗೆ ಹೋಗಬೇಕಾದರೆ ಒಂದ ಒಂದು ಉಪಾಯ ಇದೆ ನೋಡಿ. ಅದು ಸ್ವಲ್ಪ ರಿಸ್ಕಿ ಅಷ್ಟೇ" ಅಂದರು.

"ಏನ್ರೀ ಅದು?"

"ಯಾರು ಹೇಳಿದರು ಉಪಾಯ?"

"ರಿಸ್ಕ್ ಅಂದ್ರೆ ಏನಪ್ಪಾ?"

ಎಲ್ಲ ಬಸವರಾಜು ತಲೆಗೆ ಹೊಳೆದಿರುವ ಉಪಾಯ ಕೇಳಲು ಕಾತರರಾದರು.

"ಯಾರು ಹೇಳಿಕೊಡೋದೇನು! ಕ್ಯಾಪ್ಟನ್ನೇ ನನಗೆ ಹೇಳಿದ" ಎಂದರು ಬಸವರಾಜು.

"ಮತ್ತೆ ಎಲ್ಲರೆದುರು ಚೆನ್ನಾಗಿ ಬಯ್ದ ಅಂತ ಹೇಳಿದಿರಿ?" ಎಂದ ನಾನು ಕೇಳಿದೆ.

"ಎಲ್ಲಾ ಇದ್ರಲ್ಲಾ ಅದಕ್ಕೇ ಬಯ್ದ. ಬೇರೆಯವರೆಲ್ಲಾ ಹೋದಮೇಲೆ ನನ್ನ ಒಳಗೆ ಕರೆದು ಉಪಾಯ ಹೇಳಿಕೊಟ್ಟ."

"ಏನು ಉಪಾಯ ಅಂತೆ"

ಬಸವರಾಜು ಬೇರೆ ಯಾರಾದರೂ ಕೇಳಿಸಿಕೊಂಡಾರೆಂಬಂತೆ ಅತ್ತಿತ್ತ ನೋಡಿ ತಗ್ಗಿದ ದನಿಯಲ್ಲಿ "ನೋಡಿ, ನಾಳೆ ಬೆಳಗಿನಝಾವ ಹಡಗು ಹೊರಡುತ್ತಂತೆ. ನಾವು ಕತ್ತಲೆಯಲ್ಲೇ ಎಲ್ಲರಿಗಿಂತ ಮೊದಲೇ ಎದ್ದು ಮೆಲ್ಲಗೆ ಯಾರಿಗೂ ಕಾಣದಂತೆ ಹಡಗಿನೊಳಗೆ ದಾಟಿಕೊಂಡು ಬಿಡಬೇಕಂತೆ. ಗೇಟ್ ಕೀಪರ್‌ಗೆ ನಮ್ಮನ್ನು ಒಳಗೆ ಬಿಡಲು ಒಂದು ಮಾತು ಆತ ಹೇಳಿರುತ್ತಾನಂತೆ!"

"ಟಿಕೆಟ್ ಇಲ್ಲದವರು ಅಂತ ಹಿಡಿದು ಹಡಗಿನಿಂದ ಇಳಿಸಿದರೆ ಏನ್ರೀ ಮಾಡೋದು."

This PDF was created using the Sonic PDF Creator.
To remove this watermark, please license this product at www.investintech.com

"ಹಡಗು ಹೊರಡೋವರೆಗೂ ನಾವು ಯಾರ ಕಣ್ಣಿಗೂ ಕಾಣಿಸಿಕೊಳ್ಳಬಾರದು. ಹಡಗು ಹೊರಟ ಮೇಲೆ ಏನ್ರೀ ಮಾಡ್ತಾರೆ? ಅದೇನು ಬಸ್ಸೋ ರೈಲೋ? ದಾರಿಯಲ್ಲಿ ಇಳಿಸೋದಕ್ಕೆ. ಸಮುದ್ರಕ್ಕೆ ತಳ್ಳುತ್ತಾರಾ? ಟಿಕೆಟ್ ಇಲ್ಲದೆ ಪ್ರಯಾಣ ಮಾಡಿದೆವಂತ ಒಂದಕ್ಕೆ ಡಬಲ್ ಜುಲ್ಮಾನೆ ಹಾಕ್ತಾರಂತೆ. ಅದೇನ್ಮಹಾ! ಕೊಟ್ಟರಾಯ್ತು."

ಬಸವರಾಜುಗೆ ಕ್ಯಾಪ್ಟನ್ ಹೇಳಿಕೊಟ್ಟ ಉಪಾಯ ಕೇಳಿ ನಮಗೆ ಇನ್ನಷ್ಟು ಚಿಂತೆಯಾಯ್ತು. ನಮಗೆ ಯಾರಿಗೂ ಈ ತರ ಕಳ್ಳತನದಲ್ಲಿ ಓಡಾಡಿ ಅಭ್ಯಾಸವೇ ಇರಲಿಲ್ಲ. ಆದ್ದರಿಂದ ನಾವು ಸಿಕ್ಕಿಕೊಳ್ಳುವ ಸಂಭವವೇ ಹೆಚ್ಚಿತ್ತು. ಆ ಕ್ಯಾಪ್ಟನ್ ಮಹಾಶಯ ಗೇಟ್‌ಕೀಪರ್‌ಗೆ ಹೇಳುವುದನ್ನು ಮರೆತರೆ ಏನು ಕತೆ? ಬೆಳಿಗ್ಗೆ ಎಲ್ಲರಿಗಿಂತ ಮುಂಚೆ ಎಂದರೆ ಎಷ್ಟುಹೊತ್ತಿಗೆ? ತೀರಾ ಮುಂಚೆ ಹೋದರೆ ಹಡಗಿಗೆ ಹತ್ತಲು ಮೆಟ್ಟಲು ದಾರಿಯೇ ಇಲ್ಲದಿದ್ದರೆ! ನನಗಂತೂ ಕಳ್ಳಸಾಗಾಣಿಕೆದಾರರ ತರ ಅನ್ನಿಸತೊಡಗಿತು. ಹಡಗಿನೊಳಗೆ ದಾಟಕೊಂಡ ಮೇಲೆ ಎಲ್ಲಿ ಅಡಗಲು ಒಳ್ಳೆಯ ಜಾಗ ಯಾವುದೂ ಹೊಳೆಯಲಿಲ್ಲ. ಕೊನೆಗೆ ಏನಾದರಾಗಲಿ ರಿಸ್ಕ್ ತಗೊಂಡೇ ಬಿಡುವುದೆಂದು ನಿರ್ಧರಿಸಿ, ನಮ್ಮಲ್ಲಿ ಯಾರಾದರೂ ಒಬ್ಬರನ್ನು ಇಳಿಸಿದರೆ ಎಲ್ಲರೂ ಇಳಿಯುವುದೆಂದು ತೀರ್ಮಾನಿಸಿದೆವು.

ಬೆಳಿಗ್ಗೆ ಬೇಗ ಬೇಗ ಎದ್ದು ಟೀ ಕುಡಿದು ನಮ್ಮ ನಮ್ಮ ಸಾಮಾನುಗಳನ್ನು ಹೊತ್ತುಕೊಂಡು ಬಂದರಿನ ಕಡೆಗೆ ಓಡಿದೆವು. ಬಂದರುಕಟ್ಟೆಗೆ ಹೋದಾಗ ನಮಗೆ ಇನ್ನೂ ಗಾಬರಿಯಾಯ್ತು. ಯಾರೂ ಇರುವುದಿಲ್ಲ. ಹಡಗಿನೊಳಕ್ಕೆ ನೆಗೆದು ಎಲ್ಲಾದರೂ ಕದ್ದು ಕುಳಿತು ಬಿಡೋಣೆಂದುಕೊಂಡು ಬಂದರೆ ಬಂದರುಕಟ್ಟೆ ತುಂಬಾ ಒಂದು ಜನಜಾತ್ರೆಯೇ ನೆರೆದಿತ್ತು! ಕೋಳಿ, ಕುರಿ, ಗಂಟು, ಮೂಟೆ, ಮಕ್ಕಳು, ಮರಿ, ಕುಯ್ಯೋ ಓಯ್ಯೋ!" ದೊಡ್ಡ ಅಧ್ವಾನದ ಸಂತೆ! ಈ ಹಾಡುಹಗಲಿನಲ್ಲಿ ಜನಜಾತ್ರೆಯ ನಡುವೆ ಕಳ್ಳತನ ಅಸಾಧ್ಯದ ಕೆಲಸ. ನಾಲ್ಕು ಜನರೆದುರು ಮರ್ಯಾದೆ ಕಳೆದುಕೊಳ್ಳುವುದರ ಬದಲು ಸುಮ್ಮನೆ ಹಿಂದಿರುಗುವುದು ಒಳ್ಳೆಯದೆಂದು ನನಗೆ ತೀವ್ರವಾಗಿ ಅನ್ನಿಸತೊಡಗಿತು.

ಹೇಳೋಣೆಂದು ಮುಂದೆ ನೋಡಿದರೆ ಬಸವರಾಜು ತಾನೇ ಹಡಗಿನ ಕ್ಯಾಪ್ಟನ್ ಎನ್ನುವ ಠೀವಿಯಲ್ಲಿ ಹೋಗುತ್ತಾ ಇದ್ದಾರೆ! ನಾವೂ ಎಲ್ಲಾ ಅದೇ ಸೋಗು ಹಾಕಿಕೊಂಡು ಮುಂದುವರಿದೆವು. ಕೊನೇಗಳಿಗೆಯಲ್ಲಿ ಕಾರ್ಯಕ್ರಮ ಬದಲಿಸುವಂತಿರಲಿಲ್ಲ!

This PDF was created using the Sonic PDF Creator.
To remove this watermark, please license this product at www.investintech.com

ಹೊರಗಿನವರಂತೆ ಕಾಣುತ್ತಿದ್ದ ನಮ್ಮನ್ನು ನೋಡಿ ಜನರೆಲ್ಲಾ ದಾರಿ ಬಿಟ್ಟು ಸರಿದರು. ಗೇಟ್‌ಕೀಪರ್ ಸರಿದು ಪಕ್ಕಕ್ಕೆ ನಿಂತ. ಬಸವರಾಜು ಯಾವ ಅಡೆತಡೆಯೂ ಇಲ್ಲದೆ ಸೀದ ಒಳಕ್ಕೆ ಹೋದರು. ಅವರ ಹಿಂದೆ ಒಬ್ಬೊಬ್ಬರಾಗಿ ಕ್ಷೇಮವಾಗಿ ಒಳಗೆ ದಾಟಿದೆವು. ಬಸವರಾಜು ದಾಟಿದವರು ಅಲ್ಲಿ ನಿಲ್ಲಲೇ ಇಲ್ಲ, ಕ್ಯಾಬಿನ್ ಡೆಕ್ಕಿನ ಏಣಿಗಳನ್ನು ಹತ್ತಿ ಕ್ಯಾಬಿನ್ ಡೆಕ್ಕಿನ ಇನ್ನೊಂದು ತುದಿಗೆ ಹೋಗಿ ಅಲ್ಲಿದ್ದ ಬೆಂಚಿನಡಿ ಅವರ ಸಾಮಾನುಗಳನ್ನು ಪೇರಿಸಿ ಅಲ್ಲೇ ಕುಳಿತರು. ಕ್ಯಾಪ್ಟನ್ ಹಡಗಿನ ಗೇಟ್‌ಕೀಪರ್‌ಗೆ ಹೇಳಿದ್ದನೋ ಬಿಟ್ಟನೋ! ನಮ್ಮ ಹಿಂದೆಯೇ ಬಂದರುಕಟ್ಟೆಯಲ್ಲಿದಷ್ಟೂ ಜನ ಹಡಗಿನೊಳಗೆ ತುಂಬಿಕೊಳ್ಳತೊಡಗಿದರು. ಆ ಹಡಗಿನಲ್ಲಿ ಹೇಳುವವರಾಗಲೀ ಕೇಳುವವರಾಗಲೀ ಯಾರೂ ಇದ್ದಂತೆ ತೋರಲಿಲ್ಲ. ನಾವಂತೂ ಬೆಂಚಿನ ಮೇಲೆ ಕುಳಿತುಕೊಂಡು ಹಡಗು ಹೊರಡುವುದನ್ನು ಕಾಯತೊಡಗಿದೆವು.

ಹಡಗು ಹೊರಟ ಮೇಲೆ ನಮ್ಮ ಕಣ್ಣೆದುರು ಅಂಡಮಾನಿನ ಪ್ರಶಾಂತ ಸಮುದ್ರ, ಬೆಳಗಿನ ಬಿಸಿಲಿಗೆ ಮಿರಿ ಮಿರಿ ಮಿರುಗುತ್ತಿದ್ದ ಕಾಡುಗಳು, ತೊಳೆದಿಟ್ಟಂಥ ಸಮುದ್ರ ದಂಡೆಗಳು ಚಕ್ಕನೆ ಪ್ರತ್ಯಕ್ಷವಾದುದು. ಅಲ್ಲಿಯವರೆಗೆ ಹಾಗಾದರೆ ಅವೆಲ್ಲಾ ಎಲ್ಲಿಗೆ ಹೋಗಿದ್ದುವೋ ಏನೋ?

* * *

ಒಂಗೇ ಹಡಗಿನ ಹಿಂತುದಿಯಲ್ಲಿ ನಿಂತು ದೂರಾಗುತ್ತಿದ್ದ ಮಾಯಾಬಂದರ್ ನೋಡುತ್ತಿದ್ದ ನನಗೆ ಒಬ್ಬ "ಹಲೋ" ಎಂದ. ಆತನ ಹೆಸರು ಅಶ್ವಿನಿರಾಯ್ ಎಂದು ಹೇಳಿದಂತೆ ನನಗೆ ಜ್ಞಾಪಕ. ಆತ ಒಂಗೇ ಹಡಗಿನಲ್ಲಿ ಒಬ್ಬ ಎಂಜಿನಿಯರ್, ಆತ ಅಂಡಮಾನಿನ ಪೌರ. ಆತನ ಅಜ್ಜ ಸ್ವಾತಂತ್ರ್ಯ ಹೋರಾಟಗಾರನಾಗಿ ಅಂಡಮಾನಿನ ಜೇಲಿಗೆ ಬಂದಾತ. ಅವನ ತಾಯಿ ಮಲಯಾಳದವಳಂತೆ. ದಿಗ್ಲಿಪುರಕ್ಕೆ ಬಸ್ಸಿನಲ್ಲಿ ಹೋಗುತ್ತ ತಾಲ್ಲೂಕು ಕಛೇರಿ ಎಲ್ಲಿ ಎಂದು ಆತನನ್ನು ಕೇಳಿದ್ದೆ. ಆ ಪರಿಚಯದ ಮೇಲೆ ಆತ ನನಗೆ "ಹಲೋ" ಎಂದಿದ್ದು.

ಹಡಗಿನ ಮೇಲೆ ಆತನ ವೇಷ ನೋಡಿ ನನಗೆ ಥಕ್ಕನೆ ಆತನ ಗುರುತು ಹತ್ತಲಿಲ್ಲ. ದಿಗ್ಲಿಪುರದಲ್ಲಿ ಪ್ಯಾಂಟು ಸೂಟಿನಲ್ಲಿದ್ದವ ಇಲ್ಲಿ ಗ್ರೀಸು ಹತ್ತಿದ್ದ ಉದ್ದನೆಯ ಕರಿನಿಲುವಂಗಿ ರೀತಿಯ ಸಮವಸ್ತ್ರ ಧರಿಸಿದ್ದ. ಹೋಟೆಲುಗಳಲ್ಲಿ ಆಗಾಗ ಅಡುಗೆ ಮನೆಯಿಂದ ಹೊರಬಂದು ಓಡಾಡುವ ಅಡಿಗೆಭಟ್ಟರ ತರ

This PDF was created using the Sonic PDF Creator.
To remove this watermark, please license this product at www.investintech.com

ಹಡಗಿನಲ್ಲಿ ಈ ಕರಡಿ ವೇಷದ ಇಂಜಿನಿಯರುಗಳು ಹೊರಬಂದು ರಳಾಯಿಸುತ್ತಿದ್ದರು. ರಾಯ್ ಕೂಡ ಎಂಜಿನ್‌ರೂಮಿನ ಯಂತ್ರಗಳೆಡೆಯಿಂದ ತಪ್ಪಿಸಿಕೊಂಡು ಹೊರಬಂದಿದ್ದ ಕರಡಿಯಾಗಿದ್ದ.

ಇಬ್ಬರೂ ನಿಂತು ಮಾತನಾಡುತ್ತಿದ್ದಾಗ ಓಂಗೇ ಹಡಗಿನ ಹಿಂತುದಿಯಲ್ಲಿ ಹಡಗಿನಿಂದ ಸಮುದ್ರಕ್ಕೆ ಇಳಿಬಿಟ್ಟಿದ್ದ ಕೆಲವು ದಾರಗಳು ಕಂಡವು. ನಾನು ಆತನೊಡನೆ ಅದೇನೆಂದು ಕೇಳಿದೆ. ಅವು ಮೀನು ಹಿಡಿಯಲು ಗಾಳ ಕಟ್ಟಿ ಸಮುದ್ರಕ್ಕೆ ಎಸೆದಿರುವ ದಾರಗಳಂತೆ! ಆತನ ಹಿಂದಿ ಮಿಶ್ರಿತ ಇಂಗ್ಲಿಷ್‌ನಲ್ಲಿ ನಾನು ಸ್ಥೂಲವಾಗಿ ಗ್ರಹಿಸಿದ್ದು ಇಷ್ಟು–

ದೋಣಿಗಳಿಂದ ಬಲವಾದ ದಾರಗಳಿಗೆ ಗಾಳ ಕಟ್ಟಿ ಸಮುದ್ರಕ್ಕೆಸೆದು ತುಂಬ ದೂರದವರೆಗೆ ದಾರ ಬಿಟ್ಟಿರುತ್ತಾರೆ. ಗಾಳಕ್ಕೆ ಅವರು ಯಾವುದೇ ತಿಂಡಿಯನ್ನಾಗಲೀ, ಮೀನನ್ನಾಗಲಿ ಚುಚ್ಚಿರುವುದಿಲ್ಲ. ದೋಣಿಗಳು ದಾರವನ್ನು ಎಳೆಯುವ ರಭಸಕ್ಕೆ ಗಾಳಕ್ಕೆ ಚುಚ್ಚಿದ ತಿಂಡಿಗಳು ಕಳಚಿಹೋಗುತ್ತವೆ. ಆದರ ಬದಲು ಗಾಳಕ್ಕೆ ಕೆಂಪುಬಟ್ಟೆಯ ತುಂಡು ಕಟ್ಟಿರುತ್ತಾರೆ.

ದೋಣಿಯ ಹಿಂದೆ ಬಹುದೂರದಲ್ಲಿ ಸಮುದ್ರದಲ್ಲಿ ಸರ್ರನೆ ಸಾಗುವ ಬಟ್ಟೆತುಂಡನ್ನು ನೋಡಿದ ಮೀನುಗಳು ಇದನ್ನು ಯಾವುದೋ ಮೀನೆಂದೇ ಭ್ರಮಿಸಿಯೋ ಅಥವಾ ಇದೇನಿರಬಹುದು ಎಂಬ ಕುತೂಹಲಕ್ಕೋ ಇದನ್ನು ರಪ್ಪನೆ ಬಾಯಲ್ಲಿ ಹಿಡಿದು ಎಳೆಯುತ್ತವೆ. ತಕ್ಷಣ ಗಾಳ ಚುಚ್ಚಿಕೊಂಡು ಬಿಡುತ್ತದೆ. ಈ ಬಗೆಯ ಮೀನುಗಳನ್ನು ಹಿಡಿಯುವ ಕ್ರಮಕ್ಕೆ ಟ್ರಾಲಿಂಗ್ ಎಂದು ಕರೆಯುತ್ತಾರೆ. ಟ್ಯೂನಾ ಮೀನುಗಳನ್ನೂ, ಬ್ಲೂಮರ್ಲಿನ್, ಸೋರ್ಡ್‌ಫಿಷ್ ಮುಂತಾದ ಪ್ರಖ್ಯಾತ ಮೀನುಗಳನ್ನೂ ಈ ಟ್ರಾಲಿಂಗ್ ವಿಧಾನದಲ್ಲಿಯೇ ಹಿಡಿಯುತ್ತಾರೆಂದು ಓದಿದ್ದೆ. ಆದರೆ ಅಂಡಮಾನಿನಲ್ಲಿ ಪ್ರತಿಯೊಂದು ಸಾಗಾಣಿಕೆ ದೋಣಿಗಳು ಹಡಗುಗಳಿಗೂ ಈ ಟ್ರಾಲಿಂಗ್ ಗಾಳ ಕಟ್ಟಿರುತ್ತಾರೆಂದು ಗೊತ್ತಿರಲಿಲ್ಲ.

"ನಿಮ್ಮ ಈ ದಾರಕ್ಕೆ ಮೀನು ಸಿಕ್ಕಿತ್ತೆ?" ಎಂದು ಕೇಳಿದೆ.

"ಇಲ್ಲ, ಈ ಹಡಗಿನ ವೇಗ ಟ್ರಾಲಿಂಗ್ ವಿಧಾನಕ್ಕೆ ತುಂಬಾ ಹೆಚ್ಚಾಯ್ತು. ವೇಗ ಹೆಚ್ಚಾದಂತೆ ನಮ್ಮ ಗಾಳಗಳು ಸಮುದ್ರದಲ್ಲಿ ಮೇಲ್ಮಟ್ಟಕ್ಕೆ ಬಂದುಬಿಡುತ್ತವೆ. ಈ ವಿಧಾನದಲ್ಲಿ ಮೀನು ಹಿಡಿಯಲು ಒಂದು ನಿರ್ದಿಷ್ಟ ಆಳದಲ್ಲಿ ಗಾಳಗಳನ್ನು ಎಳೆಯುವುದು ಅಗತ್ಯ. ನಾವು ನಿಕೋಬಾರ್ ದ್ವೀಪಗಳ

This PDF was created using the Sonic PDF Creator.
To remove this watermark, please license this product at www.investintech.com

ಕಡೆಗೆ ಬೇರೆ ದೋಣಿಗಳಲ್ಲಿ ಹೋಗುತ್ತಾ ಅನೇಕ ಬಾರಿ ಮೀನುಗಳನ್ನು ಹಿಡಿದಿದ್ದೇವೆ.''

''ಎಷ್ಟು ದೊಡ್ಡ ಮೀನುಗಳನ್ನು ಹಿಡಿದಿದ್ದೀರಿ?'' ಎಂದು ಕೇಳಿದೆ.

''ತುಂಬಾ ದೊಡ್ಡ ದೊಡ್ಡವನ್ನು ಹಿಡಿದಿದ್ದೇವೆ. ನಲ್ವತ್ತು ಐವತ್ತು ಕೇಜಿಯವನ್ನು. ನಮ್ಮ ಹಡಗಿನ ಸಿಬ್ಬಂದಿಗೆಲ್ಲಾ ಮೂರ್‍ನಾಲ್ಕು ದಿನಗಳಿಗಾಗುವಷ್ಟನ್ನು ಹಿಡಿದಿದ್ದೇವೆ. ಒಮ್ಮೊಮ್ಮೆ ಭಾರೀ ಮೀನುಗಳು ಬಂದು ಹೊಡೆದಾಗ ಇಡೀ ಹಡಗೇ ಜಗ್ಗಿದಂತಾಗಿ ದಾರವೇ ತುಂಡಾಗಿ ಹೋಗುತ್ತದೆ. ಒಮ್ಮೊಮ್ಮೆ ಮೀನಿನ ಬಾಯಿ ಸಿಕ್ಕಿ ಹರಿದುಕೊಂಡು ಗಾಳದಲ್ಲಿ ನೇತಾಡುತ್ತಿರುತ್ತದೆ'' ರಾಯ್ ವಿವರಿಸಿದ.

ನಾನು ತುಂಬಾ ಕುತೂಹಲದಿಂದ ದಾರವನ್ನೇ ನೋಡತೊಡಗಿದೆ. ದೊಡ್ಡ ಮೀನೊಂದು ಬೆನ್ನಟ್ಟಿ ಬಂದು ಗಾಳಕ್ಕೆ ಹೊಡೆದು ಇಡೀ ಹಡಗನ್ನೇ ಮಾಯಾಬಂದರಿನತ್ತ ಎಳೆದೊಯ್ಯುವ ಹಗಲುಗನಸನ್ನು ಕಾಣತೊಡಗಿದೆ. ಟ್ರಾಲಿಂಗ್ ವಿಧಾನದಲ್ಲಿ ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯುವಾಗ ಒಮ್ಮೊಮ್ಮೆ ಮೀನುಗಳು ಅನೇಕ ಮೈಲುಗಳವರೆಗೆ ಎಳೆದೊಯ್ಯುವುದೂ ಉಂಟು. ಈ ರೀತಿ ದೋಣಿಯನ್ನು ಅತ್ಯಂತ ಹೆಚ್ಚಿಗೆ ಕಾಲ ಮತ್ತು ಅತ್ಯಂತ ಹೆಚ್ಚು ದೂರ ಎಳೆದೊಯ್ದ ವಿಶ್ವದಾಖಲೆಯ ಕೀರ್ತಿ ಒಂದು ಬ್ಲೂ ಮರ್ಲಿನ್ ಮೀನಿನದು. ಆ ಮೀನು ಹದಿನೆಂಟು ಟನ್ ತೂಕದ ದೋಣಿಯನ್ನು ನಲ್ವತ್ತೆಂಟು ಗಂಟೆಗಳ ಕಾಲ ಐವತ್ತು ಮೈಲಿಗಳವರೆಗೆ ಎಳೆದೊಯ್ದಿತ್ತು. ಇಷ್ಟು ಹೊತ್ತು ಇಷ್ಟು ದೂರ ಎಳೆದೂ ಆ ಮೀನು ಸೋತು ಶರಣಾಗಲಿಲ್ಲ. ಕೊನೆಗೂ ದಾರ ತುಂಡು ಮಾಡಿ ಹೋಯಿತು.

ನಾನು ದಾರವನ್ನು ದಿಟ್ಟಿಸಿ ನೋಡುತ್ತಲೇ ಇರುವುದನ್ನು ಕಂಡು ರಾಯ್ ನಸುನಕ್ಕು ''ಇದನ್ನು ನೋಡಿ ಏನೂ ಪ್ರಯೋಜನವಿಲ್ಲ. ಇದು ಕೊಂಚ ವೇಗದ ಹಡಗು ಇದಕ್ಕೆ ಯಾವತ್ತೂ ಮೀನು ಸಿಕ್ಕಿಲ್ಲ'' ಎಂದು ಹೇಳಿ ತನ್ನ ಕೆಲಸದತ್ತ ಗಮನ ಕೊಡಲು ಹೊರಟ. ಹೋಗುತ್ತಾ ''ದಾರ ನೋಡುವುದರ ಬದಲು ಸಮುದ್ರವನ್ನಾದರೂ ನೋಡು. ಇಲ್ಲೆಲ್ಲಾ ತುಂಬಾ ಡಾಲ್ಫಿನ್‌ಗಳಿವೆ'' ಎಂದು ಹೇಳಿ ಹಡಗಿನ ತಳಭಾಗದಲ್ಲಿದ್ದ ಮೆಶೀನ್ ರೂಮಿಗೆ ಹೋಗುವ ಏಣಿಯಲ್ಲಿ ಇಳಿದಿಳಿದು ಹೋದ.

This PDF was created using the Sonic PDF Creator.
To remove this watermark, please license this product at www.investintech.com

ಅಂಡಮಾನ್ ಸಮುದ್ರದಲ್ಲಿ ಡಾಲ್ಫಿನ್‌ಗಳು ಕಾಣಸಿಗುತ್ತವೆಂದು ನಮಗೆ ಮೊದಲೇ ಯಾರೋ ಹೇಳಿದ್ದರು. ನಾವು ನಾನ್‌ಕೌರಿ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾಗಿನಿಂದಲೂ ಸಮುದ್ರದತ್ತ ಡಾಲ್ಫಿನ್‌ಗಳನ್ನು ನಿರೀಕ್ಷಿಸಿ ನೋಡಿದ್ದೆವು. ನಮಗೆಲ್ಲೂ ಕಂಡಿರಲಿಲ್ಲ. ಹಾಗಾಗಿ ರಾಯ್ ಮಾತಿಗೆ ನಾನು ಹೆಚ್ಚು ಗಮನ ಕೊಡಲಿಲ್ಲ.

ಮತ್ತೆ ಬಿಸಿಲೇರತೊಡಗಿತು. ದೂರದ ದ್ವೀಪ, ಸಮುದ್ರ, ಕಾಡು ಎಲ್ಲವೂ ಬಿಸಿಲ್ಗುದುರೆಗಳಾಗತೊಡಗಿದವು. ಡೆಕ್ಕಿನ ಮೇಲುಗಡೆ ನೇತುಹಾಕಿದ್ದ ಲೈಫ್ ಬೋಟುಗಳ ನೆರಳಿನಲ್ಲಿ ಕುಳಿತುಕೊಳ್ಳಲು ಹೋದೆ. ಯಾವನೋ ಮಲ್ಲಿಕ್ ಹತ್ತಿರ ಒಂದು ಬಿಲ್ ಪುಸ್ತಕವನ್ನು ಹಿಡಿದು ಏನನ್ನೋ ಬರೆದುಕೊಳ್ಳುತ್ತಿದ್ದ. ಬಹುಶಃ ಟಿಕೆಟ್ಟಿಲ್ಲದೆ ಪ್ರಯಾಣ ಮಾಡುತ್ತಿರುವುದಕ್ಕೆ ಜುಲ್ಮಾನೆ ಹಾಕುತ್ತಿದ್ದನೆಂದು ಕಾಣುತ್ತದೆ. ಅದಕ್ಕೆ ತಯಾರಾಗಿಯೇ ನಾವು ಹಡಗು ಹತ್ತಿದ್ದರಿಂದ ಅದನ್ನು ಯಾರೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ.

ಲೈಫ್ ಬೋಟಿನಡಿಯ ನೆರಳಿನಲ್ಲಿ ಕುಳಿತು ಡಾಲ್ಫಿನ್‌ಗಳ ಬಗ್ಗೆ ಹಗಲುಗನಸುಗಳನ್ನು ಕಾಣತೊಡಗಿದೆ. ಈ ತರ ಹಗಲುಗನಸುಗಳನ್ನು ಸೃಷ್ಟಿಸಿಕೊಳ್ಳುವುದರಲ್ಲಿ ನಾನಂತೂ ನಿಸ್ಸೀಮ ಎನ್ನಿ. ಇವನ್ನು ನಾನೆಷ್ಟು ಸಾಕ್ಷಾತ್ತಾಗಿ ಕಾಣುತ್ತೇನೆಂದರೆ ಕೊನೆಗೆ ಕನಸಿಗೂ ನನಸಿಗೂ ನಡುವಿನ ಗೆರೆಯೇ ನನಗೆ ಮರೆತು ಹೋಗುತ್ತದೆ. ಈಗಲೂ ನನಗೆ ಇಡೀ ಅಂಡಮಾನ್ ನಾನು ಕಂಡ ಹಗಲುಗನಸಾಗಿರಲಿಕ್ಕೂ ಸಾಕೆಂಬ ಅನುಮಾನ ಇದೆ!

ಡಾಲ್ಫಿನ್‌ಗಳು ಸಾಗರದ ಸಸ್ತನಿಗಳು. ಸಾಗರದ ಸಸ್ತನಿಗಳಲ್ಲಿ ಮೂರು ವಿಧಗಳಿವೆ. ಮೊದಲಿನದು PINNIPEDIA ಸೀಲ್ ಪ್ರಾಣಿ, ವಾಲ್ರಸ್, ಎಲಿಫೆಂಟ್ ಸೀಲ್ ಮುಂತಾದವು ಈ ಜಾತಿಗೆ ಸೇರುತ್ತವೆ. ಇವುಗಳ ಮುಂಗಾಲುಗಳು ರೆಕ್ಕೆಗಳು ಅಥವಾ ಜಲಪಾದಗಳಾಗಿ ರೂಪಾಂತರಗೊಂಡು ನೀರಿನಲ್ಲಿ ಸುಲಭವಾಗಿ ಈಜಲು ಸಹಾಯ ಮಾಡುತ್ತವೆ. ಆದರೆ ಈ ಪ್ರಾಣಿಗಳು ತಮ್ಮ ಜೀವಿತ ಕಾಲದ ಸಾಕಷ್ಟು ಸಮಯವನ್ನು ನೀರಿನಿಂದ ಹೊರಗೆ ಭೂಮಿಯ ಮೇಲೂ ಕಳೆಯುತ್ತವೆ. ತಮ್ಮ ರೂಪಾಂತರಗೊಂಡ ಮುಂಗಾಲುಗಳ ಸಹಾಯದಿಂದ ದೇಹವನ್ನು ಭೂಮಿಯ ಮೇಲೆ ಎಳೆದುಕೊಂಡು ಓಡಾಡುತ್ತವೆ. ಆದರೂ ಪ್ರಧಾನವಾಗಿ ಇವು ಜಲಚರಗಳೇ. ಇವುಗಳ ಆಹಾರ ಸಮುದ್ರಜೀವಿಗಳು.

This PDF was created using the Sonic PDF Creator.
To remove this watermark, please license this product at www.investintech.com

ಎರಡನೆಯ ವರ್ಗದ ಸಸ್ತನಿಗಳು CETACEA. ಎಲ್ಲ ಜಾತಿಯ ತಿಮಿಂಗಿಲಗಳು, ಕಿಲ್ಲರ್‌ವೇಲ್‌ಗಳು ಈ ವರ್ಗಕ್ಕೆ ಸೇರುತ್ತವೆ. ಈ ಸಸ್ತನಿಗಳ ಸಂಪೂರ್ಣ ಸಾಗರದ ನೀರಿಗೇ ಹೊಂದಿಕೊಂಡ ಜೀವಿಗಳು. ಸಾಗರದ ಮೇಲ್ಮೈಗ ಉಸಿರಾಡಲು ಮಾತ್ರ ಬರುವ ಇವುಗಳು ಮೀನುಗಳಂತೆಯೇ ತಮ್ಮ ಜೀವಮಾನ ವನ್ನೆಲ್ಲಾ ನೀರೊಳಗೆ ಕಳೆಯುತ್ತವೆ.

ಮೂರನೆಯ ವರ್ಗಗವೆಂದರೆ SIRENIA. ಸಮುದ್ರ ಗೋವು ಅಥವಾ ಮನಟೀ, ಡೂಗಾಂಗ್ ಮುಂತಾದ ಪ್ರಾಣಿಗಳು. ಇವೂ ಸಹ ಸಂಪೂರ್ಣ ಸಮುದ್ರ ಜೀವಿಗಳಾದರೂ ಇವು ಸಸ್ಯಾಹಾರಿ ಪ್ರಾಣಿಗಳು. ಜಲಸಸ್ಯಗಳನ್ನು ತಿಂದು ಬದುಕುವ ಇವುಗಳಿಗೆ ಸಮುದ್ರದ ಜಲಚರಗಳನ್ನು ಹಿಡಿಯುವ ವೇಗವಾಗಲೀ ಶಕ್ತಿಯಾಗಲೀ ಇಲ್ಲ.

ಡಾಲ್ಫಿನ್ ಅತ್ಯಂತ ಬುದ್ಧಿಯುತ ಸಮುದ್ರಜೀವಿ ಎಂದು ಪ್ರಖ್ಯಾತ ವಾಗಿದೆ. ಅಲ್ಟ್ರಾಸಾನಿಕ್ ಶಬ್ದ ಮಾಪಕಯಂತ್ರಗಳಿಂದ ಈ ಪ್ರಾಣಿಗಳು ಬುದ್ಧಿ ಯುತ ಭಾಷೆಯನ್ನೂ ಸಹ ರೂಪಿಸಿಕೊಂಡಿವೆ ಎಂದು ತಿಳಿದು ಬಂದಿದೆ. ಸಾಕಿದ ಡಾಲ್ಫಿನ್‌ಗಳು ಕೃತಕ ತೊಟ್ಟಿಗಳಲ್ಲಿ ಉಂಗುರದೊಳಕ್ಕೆ ನೆಗೆಯುವುದು, ತಮ್ಮ ಕೊಕ್ಕಿನಂಥ ಮೂತಿಗಳಲ್ಲಿ ಚೆಂಡಾಟವಾಡುವುದು ಮುಂತಾದ ಸರ್ಕಸ್‌ಗಳನ್ನು ಮಾಡುತ್ತವೆ. ಇವುಗಳನ್ನು ಪಳಗಿಸಿ ಮನುಷ್ಯರ ಮಾತುಗಳಿಗೆ ವಿಧೇಯವಾಗಿ ವರ್ತಿಸುವಂತೆ ಮಾಡಬಹುದು. ಡಾಲ್ಫಿನ್‌ಗಳಿಂದ ಅನೇಕ ಉಪಯುಕ್ತ ಕೆಲಸ ಗಳನ್ನೂ ಮಾಡಿಸುತ್ತಾರೆ. ಸಾಗರಕ್ಕೆ ಬಿದ್ದ ವಿಮಾನಗಳನ್ನೂ, ಮುಳುಗಿದ ಹಡಗುಗಳನ್ನೂ ಪತ್ತೆ ಹಚ್ಚಲು, ಮುಳುಗಿ ಇಂಥಲ್ಲಿಯೇ ಇದೆಯೆಂದು ನಿರ್ದೇಶಿಸುವ ಸೂಕ್ಷ್ಮ ಕೆಲಸಗಳನ್ನೂ ಡಾಲ್ಫಿನ್‌ಗಳು ಮಾಡುತ್ತವೆ. ಪೋಲೀಸ್ ನಾಯಿಗಳು ನೆಲದ ಮೇಲೆ ಮಾಡುವ ಎಲ್ಲ ಕೆಲಸಗಳನ್ನೂ ಡಾಲ್ಫಿನ್‌ಗಳು ನೀರಿನಲ್ಲಿ ಮಾಡುತ್ತವೆ.

ಬೆಸ್ತರು ಡಾಲ್ಫಿನ್‌ಗಳನ್ನು ಹಿಡಿಯುವುದಿಲ್ಲ. ನಾವಿಕರು ಡಾಲ್ಫಿನ್ ಗಳನ್ನು ಮಾನವರ ಸ್ನೇಹಿತ ಎಂದು ಭಾವಿಸುತ್ತಾರೆ. ಡಾಲ್ಫಿನ್‌ಗಳಿದ್ದಲ್ಲಿ ಏನು ಕಾರಣವೋ ಏನೋ ಷಾರ್ಕುಗಳು ಬರುವುದಿಲ್ಲೆಂದು ಹೇಳುತ್ತಾರೆ. ಎಷ್ಟೋ ವೇಳೆ ಸಮುದ್ರದಲ್ಲಿ ಮುಳುಗುತ್ತಿರುವ ಮನುಷ್ಯರನ್ನು ಇನ್ನೊಂದು ಡಾಲ್ಫಿನ್ ಎಂದು ತಿಳಿದೋ ಏನೋ ತಮ್ಮ ಕೊಕ್ಕಿನಂಥ ಮೂತಿಯಿಂದ ತಳ್ಳಿ ತಳ್ಳಿ ದೋಣಿ ಹತ್ತಿಸಿದ ಅಪೂರ್ವ ಉದಾಹರಣೆಗಳೂ ಅನೇಕವಿವೆ. ಸಾಗರಗಳಲ್ಲಿ ಒಮ್ಮೊಮ್ಮೆ ಹಿಂಡು

This PDF was created using the Sonic PDF Creator.
To remove this watermark, please license this product at www.investintech.com

ಹಿಂಡಾಗಿ ಹಿಂಬಾಲಿಸುವ ಇವಕ್ಕೆ ನಾವಿಕರು ತಮ್ಮಲ್ಲಿ ಮಿಕ್ಕ ಚೂರುಪಾರು ತಿಂಡಿಗಳನ್ನು ಹಾಕುತ್ತಾರೆ.

ಡಾಲ್ಫಿನ್ ಮುಖ ವಿಚಿತ್ರವಾದ ನಗುಮುಖದಂತೆ ಕಾಣುತ್ತದೆ!

ಡಾಲ್ಫಿನ್।

ಸಮುದ್ರದ ಕಡೆಗೆ ಶೂನ್ಯದೃಷ್ಟಿ ಬೀರುತ್ತ ಯೋಚಿಸುತ್ತಿದ್ದ ನನಗೆ ಅಲೆಗಳ ನಡುವೆ ಒಂದು ವಿಚಿತ್ರವಾದ ನೀಲಿಯ ನಗುಮುಖ ಕಂಡಂತಾಯ್ತು। ಬಹುಶಃ ನನ್ನ ಹಗಲುಗನಸಿನ ಭ್ರಮೆ ಇರಬೇಕು. ಹಾಗಾದರೆ ಬೇರೆಯವರೂ ಅತ್ತ ಕಡೆಯೇ ನೋಡುತ್ತಿದ್ದಾರೆ. ಅವರಿಗೇಕೆ ಕಾಣಲಿಲ್ಲ?

ಎಲ್ಲರೂ ಅತ್ತ ಸುಮ್ಮನೆ ನೋಡುತ್ತಿದ್ದಾರೆ. ಯಾರೂ ಏನನ್ನೂ ಕಾಣುತ್ತಿಲ್ಲ. ನಾನು ಡಾಲ್ಫಿನ್ ನಗುಮುಖವನ್ನು ನೋಡಿದ್ದೇನು ಭ್ರಾಂತಿಯೆ? ಭ್ರಾಂತಿ ಯಾವುದು ನಿಜ ಯಾವುದು?

ಮತ್ತೆ ಇದೇ ಹಳೇ ಪ್ರಶ್ನೆ।

ಹಾಗಾದರೆ ಡಾಲ್ಫಿನ್ ನಕ್ಕಿದ್ದು ನನ್ನ ಮನಸ್ಸಿನಲ್ಲೆ? ಇಡೀ ಅಂಡಮಾನ್ ಸಂಭವಿಸುತ್ತಿರುವುದು ನನ್ನ ಒಳಗೋ ನನ್ನ ಹೊರಗೋ। ನಾನು ನೋಡಿದ ಅಂಡಮಾನ್ ನನಗೆ ಮಾತ್ರ ಕಾಣುವುದೆ? ಈ ಅಂಡಮಾನ್ ಒಂದು ವಿಚಿತ್ರ। ತಾಜಮಹಲಿನಂತೆ ಕುತುಬ್‌ಮೀನಾರಿನಂತೆ ಎಲ್ಲರಿಗೂ ಒಂದೇ ತರ ಕಾಣುವುದಿಲ್ಲ.

ಮತ್ತೆ ಡಾಲ್ಫಿನ್। ನನ್ನ ವಿಚಿತ್ರ ಯೋಚನಾಲಹರಿಯನ್ನು ನೋಡಿ ಸಮುದ್ರದತ್ತಣಿಂದ ಒಂದು ನೀಲಿಯ ಮುಖ ನಕ್ಕಿತು. ಡಾಲ್ಫಿನ್ ಎಂದು ಕೈ ಬೆಟ್ಟುಮಾಡಿ ಎಲ್ಲರಿಗೂ ತೋರಿಸಿದೆ. ಯಾರಿಗೂ ಏನೂ ಕಾಣಲಿಲ್ಲ. ಎಲ್ಲ ನನ್ನ ಕಡೆ ಮಿಕಿಮಿಕಿ ನೋಡಿದರು. ನನಗೆ ವಿಚಿತ್ರವಾಗೆನ್ನಿಸಿತು.

"ನಾನೊಂದು ಡಾಲ್ಫಿನ್ ಮುಖ ನೋಡಿದೆ"

"ಎಲ್ಲಿ? ನಮಗ್ಯಾರಿಗೂ ಕಾಣಲಿಲ್ಲ?"

"ಓ ಈ ನೇರಕ್ಕೆ ನನಗೆ ಕಾಣಿಸಿತು"

"ಹೌದಾ।" ಎಲ್ಲ ನನ್ನ ಕೈ ನೇರಕ್ಕೆ ನೋಡಿದರು.

ಆ ಕ್ಷಣ ಅದೇ ನೇರದಲ್ಲಿ ಕೊಕ್ಕಿನ ಮೂತಿಯ ನಗುಮುಖದ ಅನೇಕ ಡಾಲ್ಫಿನ್ ತಲೆಗಳು ಸಮುದ್ರದಿಂದ ಚಂಗ್ ಚಂಗ್ ನೆಗೆದವು. "ಓ ಡಾಲ್ಫಿನ್", ಎನ್ನುತ್ತಾ ಎಲ್ಲ ಆಶ್ಚರಿಯ ಉದ್ಗಾರ ತೆಗೆದು ಡೆಕ್ಕಿನ ಕಟ್ಟೆಯ ಬಳಿ ನಡೆದರು.

This PDF was created using the Sonic PDF Creator.
To remove this watermark, please license this product at www.investintech.com

ನೂರಾರು ಡಾಲ್ಫಿನ್‌ಗಳು ಸಮುದ್ರದ ನೊರೆನೊರೆಯ ಅಲೆಗಳ ನಡುವೆ ಚಂ ಚಂಗ್ ಹಾರುತ್ತಾ ಹಡಗನ್ನು ಮೀರಿದ ವೇಗದಲ್ಲಿ ಮುಂದೆ ಮುಂದೆ ಹೋದವು ಕೆಲವು ಪುಟ್ಟ ಮರಿಗಳೂ ಹಿಂದೆ ಬೀಳದೆ ಗುಂಪನ್ನು ಹಿಂಬಾಲಿಸುತ್ತಿದ್ದುದ ಕಂಡಿತು.

"ಓ ಡಾಲ್ಫಿನ್!" ಹಡಗಿನ ಇನ್ನೊಂದು ಪಾರ್ಶ್ವದಿಂದ ಯಾರೋ ಕೂಗಿದ್ದು ಕೇಳಿತು. ಎಲ್ಲ ಅತ್ತ ಓಡಿದರು.

ಸಮುದ್ರದ ನೊರೆಯ ಮಧ್ಯೆ ನಸುನಗುವ ಅನೇಕ ನೀಲಿಯ ಮುಖಗಳು ಅಲೆಗಳನ್ನು ಕತ್ತಿಯಲ್ಲಿ ಕತ್ತರಿಸಿದಂತೆ ಸೀಳಿಕೊಂಡು ಮುಂದೆ ಹೋದವು. ಅವು ನೀರಿನ ನೀಲಿಯ ನಡುವೆ ಲೀನವಾಗುವವರೆಗೆ ಎಲ್ಲರೂ ನೋಡುತ್ತ ನಿಂತಿದ್ದವು.

This PDF was created using the Sonic PDF Creator.
To remove this watermark, please license this product at www.investintech.com



# 15. ಇನ್ನಿಂಗ್ಸ್ ಡಿಫೀಟ್!

ಓಂಗೇ ಹಡಗಿನಲ್ಲಿ ಬಂದು ಪೋರ್ಟ್‌ಬ್ಲೇರಿನಲ್ಲಿ ಇಳಿದಾಗ ಮತ್ತೆ ಊರಿಗೇ ಹಿಂದಿರುಗಿ ಬಂದಂತೆನ್ನಿಸಿ ನನಗೆ ಅಲೆಯುವ. ಕುತೂಹಲ ಉತ್ಸಾಹ ಇತ್ಯಾದಿಗಳೆಲ್ಲಾ ಹೊರಟುಹೋಗಿ ಅಂಡಮಾನಿನ ಪ್ರವಾಸ ನನ್ನಮಟ್ಟಿಗೆ ಅಧಿಕೃತವಾಗಿ ಮುಕ್ತಾಯವಾಯ್ತು. ಅಸಾಧ್ಯ ಸೆಖೆ, ರಣಬಿಸಿಲು. ನಮ್ಮ ಸೂಟ್‌ಕೇಸುಗಳನ್ನು ಹೊತ್ತುಕೊಂಡು ನಡೆಯುತ್ತಾ ಯೂತ್ ಹಾಸ್ಟೆಲ್ ಹಾದಿ ಹಿಡಿದೆವು. ದಾರಿಯಲ್ಲಿ ಎತ್ತಲೋ ಹೋಗುತ್ತಿದ್ದ ಬೆಳವಾಡಿ ಸಿಕ್ಕರು. ರಣ ಬಿಸಿಲಿನಲ್ಲಿ ಸುಸ್ತಾಗಿ ನಡೆಯುತ್ತಿದ್ದ ನಮ್ಮನ್ನು ನೋಡಿ ಚಕಿತರಾಗಿ ಸ್ಕೂಟರು ನಿಲ್ಲಿಸಿದರು.

"ಈಗ ಬರ್ತಿದ್ದೀರಾ?" ಎಂದು ಕೇಳಿದರು.

"ಹೌದು"

"ಎಲ್ಲಿಂದ?"

This PDF was created using the Sonic PDF Creator.
To remove this watermark, please license this product at www.investintech.com

“ದಿಗ್ಲಿಪುರದಿಂದ”

“ಅರೆ! ಅಲ್ಲಿಗ್ಯಾಕೆ ಹೋಗಿದ್ರಿ?”

“ಏನು ಮಾಡೋದು. ಇಲ್ಲಿಗೆ ಬರಬೇಕಾದರೆ ಅಲ್ಲಿಗೆ ಹೋ[ಗ] ಬೇಕಿತ್ತು.”

“ಹೇಗಿತ್ತು ಪ್ರಯಾಣ”

“ನಿಮಗೆ ಗೊತ್ತಲ್ಲ ಅಂಡಮಾನಿನಲ್ಲಿ ಪ್ರಯಾಣ”

“ಅದು ಸರಿ ಬಿಡಿ. ನಿಮ್ಮನ್ನಿಲ್ಲಿ ಇವತ್ತು ನೋಡಿದ್ದೇ ನನಗೆ ಆಶ್ಚರ್ಯ. ನಾನು ಮೊದಲೇ ಹೇಳಿದೆ ಮಲ್ಲಿಕ್‌ಗೆ ನೀವು ಹೋದರೆ ಬರೋದೇ ಕಷ್ಟಾಂತ, ಸಾರಿ”

“ಇಲ್ಲಾ ಬೆಳ್ವಾಡಿ, ತೊಂದರೆ ತಾಪತ್ರಯ ಕಷ್ಟ ಎಲ್ಲಾ ಆಗಿದ್ದು ನಿಜ. ಆದರೆ ಇದನ್ನೆಲ್ಲಾ ಸೇರಿಸಿಕೊಂಡೇ ಹೇಳ್ತಿದ್ದೀನಿ ಅಲೆದಾಟ ತುಂಬಾ ಚೆನ್ನಾಗೇ ಇತ್ತು. ನೀವು ಸಾರಿ ಅನ್ನುವ ಅಗತ್ಯ ಇಲ್ಲ.”

ಬೆಳ್ವಾಡಿ ಯೂಥ್ ಹಾಸ್ಟೆಲಿನಲ್ಲಿ ಸಿಗುತ್ತೇನೆಂದು ಹೇಳಿಹೋದರು. ಅವತ್ತು ಅವರ ಮನೆಗೆ ಊಟಕ್ಕೆ ಬರಬೇಕೆಂದು ಹೇಳಿಹೋದರು. ನಮಗೆ ಪೋರ್ಟ್‌ಬ್ಲೇರಿನಲ್ಲಿ ಉಳಿದಿದ್ದು ಒಂದೇ ಒಂದುದಿನ. ಮೂರನೆಯ ದಿನ ಮದ್ರಾಸಿಗೆ ವಿಮಾನ ಹತ್ತಬೇಕಿತ್ತು. ಅಂಡಮಾನಿನ ಮಿತ್ರರ ಮನೆಗಳ ಸತ್ಕಾರಗಳನ್ನೆಲ್ಲಾ ಸ್ವೀಕರಿಸಿ ಕಪ್ಪೆಚಿಪ್ಪಿನ ಆಭರಣಗಳ ಶಾಪಿಂಗ್ ಮುಗಿಸುವ ಹೊತ್ತಿಗೆ ಇಪ್ಪತ್ನಾಲ್ಕು ಗಂಟೆ ಕಳೆದೇ ಹೋಗುತ್ತದೆ. ಪ್ರತಿ ಪ್ರವಾಸದ ಕೊನೆಯ ದಿನಗಳ ಈ ಮಾಮೂಲೀ ಕಾರ್ಯಕ್ರಮಗಳನ್ನು ನಾನು ಬರೆಯುವುದೂ ನೀವು ಓದುವುದೂ ಅನವಶ್ಯಕ ಹಾಗೂ ಅಪ್ರಸ್ತುತ.

ಆದರೆ ನಾನು ಚಂದ್ರು ಶಾಪಿಂಗ್ ತಪ್ಪಿಸಿ ಒಂದು ದಿನ ಪೂರ್ತಿ ಗಾಳಹಾಕಿಕೊಂಡು ಸಮುದ್ರದ ದಂಡೆಯ ಮೇಲೆ ಕೂತಿರಬೇಕೆಂದು ಉಪಾಯ ಮಾಡಿದ್ದೆವು. ಅದೊಂದು ಸ್ಮರಣೀಯ ಘಟನೆಯಾಗಿ ಈ ಅಧ್ಯಾಯ ಬರೆಯಬೇಕಾಗಿದೆ.

ನಮ್ಮ ರಾಡುರೀಲು ಗಾಳಗಳ ಬಗ್ಗೆ ಬಹಳಷ್ಟು ಈ ಪ್ರವಾಸ ಕಥನದಲ್ಲಿ ಬರೆದಿದ್ದೇನೆ. ನಮ್ಮ ಮೀನು ಹಿಡಿಯುವ ಈ ಉಪಕರಣಗಳು ವಾಸ್ತವವಾಗಿ ನಮಗೆ ಅಂಡಮಾನಿನ ಟ್ರೆಜರಿಗೆ ಬೀಗದ ಕೈ ಇದ್ದಂತಿತ್ತು. ನೀವು ಅಂಡಮಾನಿಗೆ ಹೋದರೆ ನಿಮಗೂ ಕೂಡ ಇಂಥದೊಂದು ಬೀಗದ ಕೈ ಅವಶ್ಯಕತೆ

This PDF was created using the Sonic PDF Creator.
To remove this watermark, please license this product at www.investintech.com

ಇದ್ದೇ ಇದೆ. ಒಂದು ಬಟರ್ ಫ್ಲೈ ನೆಟ್, ಅಥವಾ ಒಂದು ಕೋವಿ, ಒಂದು ಟೆಲಿಫೋಟೋ ಲೆನ್ಸಿನ ಕ್ಯಾಮರ, ಒಂದು ರಾಡುರೀಲಿನ ಗಾಳ ಮುಂತಾದ ಯಾವುದೋ ಒಂದನ್ನು ಹಿಡಿದು ಅನ್ವೇಷಣೆಗೆ ಹೋದರೆ ಮಾತ್ರ ಅಂಡಮಾನ್ ನಿಮ್ಮೆದುರು ನಿಧಾನವಾಗಿ ಹಂತ ಹಂತವಾಗಿ ತೆರೆದುಕೊಳ್ಳಲಾರಂಭಿಸುತ್ತದೆ. ಕೇವಲ ಕೈಕಟ್ಟಿಕೊಂಡು ಕಣ್ಣುಬಿಟ್ಟುಕೊಂಡು ಓಡಾಡಿದರೆ ನಿಮಗೆ ಅಂಡಮಾನಿನ ಅಂತರಂಗ ಬಹುಭಾಗ ಅಪರಿಚಿತವಾಗಿಯೇ ಉಳಿಯುವ ಸಂಭವ ಉಂಟು. ನಮ್ಮ ಅಂಡಮಾನಿನ ಅನುಭವಗಳ ಬಹುಭಾಗ ಇಂಥ ಬೀಗದ ಕೈಗಳಿಂದಲೇ ತೆರೆದುಕೊಂಡು ಸಂಭವಿಸಿರುವುದನ್ನು ನೀವು ಗಮನಿಸಿರಬಹುದು.

* * *

ಚಂದ್ರು ಡಾಕ್ಟರ್ ಶರ್ಮಾರವರಿಗೆ ಪುಸಲಾಯಿಸಿ ಒಂದು ದಿನಕ್ಕೆ ಅವರ ಸ್ಕೂಟರನ್ನು ನಮಗೆ ಕೊಡಲು ಒಪ್ಪಿಸಿದ್ದರು. ಆ ಸ್ಕೂಟರನ್ನು ಕೊಡಲು ಅವರಿಗೆ ಯಾವ ಅಭ್ಯಂತರವೂ ಇರಲಿಲ್ಲ. ಆದರೆ ಅದು ಶೋಚನೀಯ ಪರಿಸ್ಥಿತಿಯಲ್ಲಿದ್ದ ಲ್ಯಾಂಬ್ರೆಟ್ಟಾ ಸ್ಕೂಟರಾದ್ದರಿಂದ ನಮ್ಮ ಕ್ಷೇಮ ಚಿಂತನೆಯ ದೆಸೆಯಿಂದಲೇ ಅವರು ಹಿಂದುಮುಂದು ನೋಡಿದ್ದು. ನಾನೂ ಚಂದ್ರು ಇಬ್ಬರೂ ಒಳ್ಳೆಯ ಮೆಕಾನಿಕ್‌ಗಳೂ ಸಹ ಎಂದು ಹೇಳಿ ಅವರಿಗೆ ಧೈರ್ಯ ತುಂಬಿ ಅದು ಎಂಥ ತರ್ಲೆ ಕೊಡುವ ದ್ವಿಚಕ್ರ ವಾಹನವಾದರೂ ಅದನ್ನು ಪಳಗಿಸುವ ಶಕ್ತಿ ನಮಗಿದೆ ಎಂದು ಅವರಿಗೆ ಆಶ್ವಾಸನೆ ಕೊಟ್ಟೆವು.

ಶರ್ಮಾ ಮಾರನೆದಿನ ಬೆಳಿಗ್ಗೆಯೇ ಅವರ ಸ್ಕೂಟರನ್ನು ತಂದು ಯೂತ್‌ಹಾಸ್ಟೆಲಿನ ಎದುರು ನಿಲ್ಲಿಸಿ ಆ ಸ್ಕೂಟರಿನ ದುರ್ವರ್ತನೆಯ ಪಟ್ಟಿ ಕೊಟ್ಟರು. ಬ್ರೇಕ್ ಹಾಕಿದರೆ ಹಿಡಿದ ಬ್ರೇಕ್ ಮತ್ತೆ ಬಿಡುವುದೇ ಇಲ್ಲ. ಕಾರ್ಬರೇಟರಿನಲ್ಲಿ ಪೆಟ್ರೋಲ್ ತುಂಬಿತುಳುಕಿ ಸ್ಪಾರ್ಕ್ಪ್ಲಗು ತೊಂದರೆ ಕೊಡುತ್ತದೆ. ಗೇರುಗಳು ಆಗಾಗ ಸ್ಲಿಪ್ ಆಗುತ್ತದೆ. ಇತ್ಯಾದಿ ಇತ್ಯಾದಿ. ಇವ್ಯಾವೂ ನಾವು ತಿಳಿಯದ ಖಾಯಿಲೆಗಳಾಗಿರಲಿಲ್ಲ. ನಮ್ಮ ಸ್ಕೂಟರುಗಳೇ ಬೇಕಾದಷ್ಟು ಸಾರಿ ಇಂಥ ಕಳ್ಳಾಟಗಳನ್ನು ತೆಗೆದು ನಮ್ಮಿಂದ ಸರಿಯಾಗಿ ಬುದ್ಧಿ ಕಲಿತಿದ್ದವು. ನಮಗೆ ವಾಸ್ತವವಾಗಿ ಸಮಯ ಇರಲಿಲ್ಲ. ಇಲ್ಲದಿದ್ದರೆ ಅದನ್ನು ಬಿಚ್ಚಿ ಅಲ್ಲೇ ರಿಪೇರಿ ಮಾಡಿಕೊಡುತ್ತಿದ್ದೆವು.

ನಾನು ಚಂದ್ರು ರೀಲುಗಳನ್ನೂ ರಾಡುಗಳನ್ನೂ ಬಗಲಿಗೆ ಹಾಕಿಕೊಂಡು ಮೀನು ಮಾರ್ಕೆಟ್ಟಿಗೆ ಓಡಿದೆವು. ಗಾಳಕ್ಕೆ ಚುಚ್ಚಲು ಪುಡಿಮೀನು, ಸೀಗಡಿ

This PDF was created using the Sonic PDF Creator.
To remove this watermark, please license this product at www.investintech.com

ಗಳನ್ನು ಹುಡುಕಿದೆವು. ಮಿಕ್ಕ ಗೆಳೆಯರೆಲ್ಲಾ ತಾವು ಕೊಳ್ಳಬೇಕಾದ ವಸ್ತುಗಳ ಪಟ್ಟಿ ಮಾಡಿಕೊಳ್ಳುತ್ತಿದ್ದರು.

ನಾವು ಚಿಡಿಯಾ ಟಾಪಿಗೆ ಹೋಗಬೇಕೆಂದು ಯೋಚಿಸಿದ್ದೆವು. ನಾವು ಬಂದ ಮೊದಲಲ್ಲಿ ಚಂದ್ರುಗೆ ಅಲ್ಲಿಯೇ ನೀಲಿಯ ಮೀನು ದಾರ ತುಂಡುಮಾಡಿ ಕೈಕೊಟ್ಟಿದ್ದು. ಅದು ಅಲ್ಲೇ ಮತ್ತೆ ಚಂದ್ರು ಗಾಳ ಹಿಡಿದು ತುಂಡು ಮಾಡಲು ಕಾದಿರುತ್ತದೆ ಎನ್ನುವಂತೆ ಭಾವಿಸಿಕೊಂಡು ಚಂದ್ರು ಅಲ್ಲಿಗೇ ಹೋಗೋಣೆಂದು ಒತ್ತಾಯಮಾಡಿದರು.

ಹೋಗಿಬರಲು ಸಾಕಾಗುವಷ್ಟು ಪೆಟ್ರೋಲನ್ನು ಸ್ಕೂಟರಿಗೆ ತುಂಬಿಸಿ ಕೊಂಡು, ಕೊಂಚ ಬ್ರೆಡ್ಡು ಬನ್ನುಗಳನ್ನು ನಮಗೆ ಕಟ್ಟಿಸಿಕೊಂಡು ಚಿಡಿಯಾ ಟಾಪಿನ ದಾರಿ ಹಿಡಿದೆವು. ಸ್ಕೂಟರು ನಮಗೆ ಯಾವ ತೊಂದರೆಯನ್ನೂ ಕೊಡದೆ ಮೂಗುದಾರ ಹಾಕಿದ ಎತ್ತಿನ ತರ ಹೇಳಿದ ಹಾಗೆ ಕೇಳಿತು.

ಸುಮಾರು ಮುಕ್ಕಾಲು ದೂರ ದಾರಿ ಸವೆಸಿದ ನಂತರ'ದಾರಿ ಸಮುದ್ರದ ಪಕ್ಕದಲ್ಲೇ ಸಾಗುತ್ತಿತ್ತು. ಸಮುದ್ರಕ್ಕೆ ಗಾಳ ಬೀಸಲು ಅತ್ಯಂತ ಪ್ರಶಸ್ತವಾದ ಸ್ಥಳಗಳು ಅನೇಕವು ನಮಗೆ ಕಂಡವು. ಬಸ್ಸಿನಲ್ಲಿ ಚಿಡಿಯಾಟಾಪಿಗೆ ಹೋಗುತ್ತಾ ಆ ಬಂಗಾಳಿಯೊಡನೆ ಜಗಳದಲ್ಲಿ ಕಾಲ ಕಳೆದಿದ್ದರಿಂದ ಇವುಗಳತ್ತ ನಮಗೆ ಹೋದ ಸಾರಿ ಗಮನ ಹರಿಸಲಾಗಿರಲಿಲ್ಲ.

ಅಲ್ಲೊಂದು ಕಡೆ ಬಂಡೆಗಳ ಕೊರಕಲುಗಳೆಡೆಯಲ್ಲಿ ಸಮುದ್ರ ಆಳವಾಗಿ ಒಳನುಗ್ಗಿತ್ತು. ಇಲ್ಲೊಂದು ಸ್ವಲ್ಪ ಪ್ರಯತ್ನ ಮಾಡಿ ನೋಡೋಣವೆ? ಎಂದು ಚಂದ್ರು ಕೇಳಿದರು. ನನಗೂ ಹಾಗೇ ಅನ್ನಿಸಿತ್ತು. ಆದರೆ ಅದರೊ ಡನೆಯೇ ಇಲ್ಲಿ ಇಳಿದರೆ ಮುಂದಕ್ಕೆ ನಾವು ಹೋಗುವುದೂ ಅಸಂಭವ ಎಂದೆನ್ನಿಸಿತು. ದೊಡ್ಡ ಚಿಟ್ಟದಂತಿದ್ದ ದಂಡೆಯ ಮೇಲೆ ಸ್ಕೂಟರನ್ನು ನಿಲ್ಲಿಸಿ ಕೆಳಕ್ಕೆ ಇಳಿದಿಳಿದು ಸಮುದ್ರದ ದಂಡೆ ತಲುಪಿದೆವು.

ಸಮುದ್ರದ ದಂಡೆಯಲ್ಲಿ ನಾವು ಕಳೆದ ಮುಂದಿನ ನಾಲ್ಕಾರು ಗಂಟೆಗಳ ಪ್ರತಿಯೊಂದು ಕ್ಷಣವೂ ಸೋಲಿನ, ಹತಾಶೆಯ, ಎದೆ ನಡುಗಿಸುವ ರೋಮಾಂಚನದ ಕ್ಷಣಗಳಾಗಿದ್ದವು. ನಾವು ಅಲ್ಲಿಂದ ಮುಂದಕ್ಕೆ ಚಿಡಿಯಾ ಟಾಪಿಗೆ ಹೋಗಲು ಸಾಧ್ಯವಾಗಲೇ ಇಲ್ಲ.

ಕರಗಿ ನೀರಾದ ಪಚ್ಚೆಯಂತೆ ಸಮುದ್ರ ಹಸಿರಾಗಿತ್ತು. ಹೊಂಬಿಸಿಲಿನ ಕಿರಣಗಳನ್ನು ಪೃಥಕ್ಕರಿಸಿ ಅಲೆಗಳು ಹೊಳೆಯುತ್ತಿದ್ದವು. ಕತ್ತಿಗೆ ಕತ್ತಿ ತಾಗಿ

This PDF was created using the Sonic PDF Creator.
To remove this watermark, please license this product at www.investintech.com

ಏಳುವ ಕಿಡಿಗಳಂತೆ ಅಲೆಗಳ ನೆತ್ತಿಯಿಂದ ನೀರಿನ ತುಂತುರುಗಳು ಸಿಡಿದವು. ದಂಡೆಗಳ ಮೇಲೆ ಕಲ್ಲಿನ ಕೊರಕಲುಗಳಲ್ಲಿ ನಿಂತಿದ್ದ ನೀರಿನ ಹೊಂಡಗಳಲ್ಲಿ ಬಣ್ಣಬಣ್ಣದ ವಿಚಿತ್ರ ಆಭರಣಗಳಂತೆ ಹವಳದ ರಚನೆಗಳು ಹೊಳೆಯುತ್ತಿದ್ದವು. ಅವುಗಳೊಳಗೂ ಚಿಕ್ಕ ಮೀನುಗಳು ಕಣಕ್ ಮಿಣಕ್ ಎಂದು ಮಿನುಗಿ ಮಿನುಗಿ ಈಜಾಡಿದವು. ಇವುಗಳಿಂದೆಲ್ಲ ಇನ್ನಷ್ಟು ಸ್ಫೂರ್ತಿಗೊಂಡು ಗಾಳ, ದಾರ, ರೀಲುಗಳನ್ನು ರೆಡಿ ಮಾಡಿಕೊಳ್ಳತೊಡಗಿದ ನಮಗೆ ಆ ದಿನ ನಮ್ಮ ಆತ್ಮಾಭಿಮಾನಕ್ಕೆ ಪೆಟ್ಟುಬೀಳುವ ದಿನವಾದೀತೆಂದು ಅನ್ನಿಸಲಿಲ್ಲ. ಮಿರುಗುವ ಸಮುದ್ರದ, ಹವಳದ ದಂಡೆಯ ಮೇಲೆ ಕುಳಿತು ನಾನು ಅದೇ ಸಮಯದಲ್ಲಿ ಪೋರ್ಟ್‌ಬ್ಲೇರಿನ ಅಂಗಡಿ ಬೀದಿಗಳಲ್ಲಿ ತಿರುಗುತ್ತಿರುವ ಇತರ ಗೆಳೆಯರ ಬಗ್ಗೆ ಕನಿಕರದಿಂದ ಯೋಚಿಸಿದೆ.

ನನಗಿಂತ ಮೊದಲೇ ಬೇಗಬೇಗನೆ ಗಾಳ ರೆಡಿ ಮಾಡಿ ಚಂದ್ರು ಸಮುದ್ರಕ್ಕೆ ಬಿಸಿ ಕುಳಿತಿದ್ದರು. ನಾನು ಏನೋ ಯೋಚಿಸುತ್ತ ಅನ್ಯಮನಸ್ಕನಾಗಿ ಅತ್ತ. ನೋಡುತ್ತಿದ್ದೆ. ಚಂದ್ರು ಗಾಳದ ದಾರ ಮಿಂಚು ಹೊಡೆದಂತೆ ಬಿಗಿಯಾಯ್ತು. ನಾನು ನನ್ನ ಕೈಲಿದ್ದುದನ್ನು ಕೆಳಗಿಟ್ಟು ಏಳುವಷ್ಟರಲ್ಲಿ "ಸಾರ್ ಎಂಥದೋ ಏಳೀತಾ ಇದೆ" ಎಂದು ಸಮುದ್ರದ ಕಡೆಗೇ ನೋಡುತ್ತಾ ಚಂದ್ರು ಕೂಗಿದರು. ಅವರ ಫಿಶಿಂಗ್ ರಾಡ್ ಕಾಮನ ಬಿಲ್ಲಿನಂತೆ ಬಗ್ಗಿತು.

"ನೋಡಿ ನೋಡಿ! ದಾರ ಹೋಗ್ತಾ ಇದೆ" ಎಂದರು.

ಬಿಗಿ ಮಾಡಿದ್ದ ಅವರ ರೀಲಿನಿಂದ ದಾರ ಪರಪರ ಸದ್ದು ಮಾಡುತ್ತ ಬಿಚ್ಚಿಕೊಳ್ಳುತ್ತಿತ್ತು. ಯಾವುದೋ ಮೀನು ಅನಾಯಾಸವಾಗಿ ದೂರ ಸಮುದ್ರದ ಕಡೆಗೆ ಅವರ ದಾರವನ್ನು ಎಳೆದೊಯ್ಯುತ್ತಿತ್ತು.

"ಇದೇನ್ರೀ ದಾರ ಇಷ್ಟೊಂದು ಸಲೀಸಾಗಿ ಕೊಡ್ತಿದೀರಾ? ದಾರದ ಡ್ರಾಗ್ ಇನ್ನೊಂದು ಸ್ವಲ್ಪ ಬಿಗಿ ಮಾಡ್ರಿ" ಎಂದು ಕೂಗಿದೆ.

ಚಂದ್ರು ಡ್ರಾಗ್ ಬಿಗಿಮಾಡುತ್ತಲೂ ಆ ಮೀನಿಗೆ ಇನ್ನೂ ಕೊಂಚ ರೇಗಿ ತೆಂದು ಕಾಣುತ್ತದೆ. ಇನ್ನೂ ಬಲವಾಗಿ ಲೈನನ್ನು ಎಳೆದುಕೊಂಡು ಹೊರಟಿತು. ರೀಲು ಗಿರ್ರನೆ ಫ್ಯಾನ್‌ಶರ ತಿರುಗುತ್ತಾ ದಾರ ಕೊಡಲಾರಂಭಿಸಿತು. ರೀಲಿಗೆ ಸುತ್ತಿದ್ದ ಸುಮಾರು ಇನ್ನೂರು ಮೀಟರು ದಾರದಲ್ಲಿ ಅರ್ಧದಾರ ಆಗಲೇ ಸಮುದ್ರದೊಳಗೆಹೋಗಿಯಾಗಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ಮೀನು ಹಿಡಿಯುವ ನಮ್ಮ ರೀಲುಗಳ ರಚನೆ ಮತ್ತು ಅವು ಕೆಲ ಮಾಡುವ ರೀತಿಯ ಬಗ್ಗೆ ನಿಮಗೆ ಕೊಂಚ ತಿಳಿಸುವುದು ಒಳ್ಳೆಯದು. ನಮ ಗಾಳಗಳಿಗೆ ಪುಡಿಮೀನು ಚುಚ್ಚಿ ಸಮುದ್ರಕ್ಕೆ ಬೀಸಿ ಎಸೆದಾಗ ದಡದಿಂ ಸುಮಾರು ಮುವ್ವತ್ತು ಮೀಟರು ದೂರ ಸಮುದ್ರದೊಳಕ್ಕೆ ಅದ ಹೋಗಿಬೀಳುತ್ತದೆ ಎಂದು ಇಟ್ಟುಕೊಳ್ಳೋಣ. ಆಗ ಇನ್ನೂ ನೂರ ಅರವತ ಮೀಟರು ದಾರ ರೀಲಿನಲ್ಲಿ ಉಳಿದಿರುತ್ತದೆ. ನಾವು ನಮ್ಮ ರೀಲುಗಳಿ ಇಪ್ಪತ್ತೈದು ಕೆಜಿ ತೂಕ ತಡೆಯುವ ದಾರ ಹಾಕಿದ್ದೇವೆಂದಿಟ್ಟುಕೊಳ್ಳಿ, ಆ ರೀಲಿನ ಡ್ರ್ಯಾಗನ್ನು ಇಪ್ಪತ್ತೈದು ಕೇಜಿಗೆ ಸರಿಯಾಗಿ ಬಿಗಿ ಮಾಡಿರುತ್ತೇ ಮೀನು ಇಪ್ಪತ್ತೈದು ಕೇಜಿಗಿಂತಲೂ ಹೆಚ್ಚಿನ ತೂಕ ಬಿಟ್ಟು ಎಳೆದರೆ ದಾ ತುಂಡಾಗುವುದರ ಬದಲು ರೀಲು ಇಪ್ಪತ್ತೈದು ಕೇಜಿ ಬಿಗಿಯಲ್ಲಿ ದಾ ಬಿಡತೊಡಗುತ್ತದೆ. ನೊಗ ಹೊತ್ತ ಎತ್ತು ಗಾಡಿಯನ್ನು ಎಳೆಯುವಂತೆ ಅಷ ಬಿಗಿಯಲ್ಲಿ ಮೀನು ದಾರವನ್ನು ಎಳೆದೊಯ್ಯಬೇಕಾಗುತ್ತದೆ. ರೀಲಿನ ದಾ ಖರ್ಚಾಗುವಷ್ಟು ದೂರ ಅಷ್ಟು ಬಿಗಿಯಲ್ಲಿ ದಾರ ಎಳೆದೊಯ್ಯಲಾರದೆ ಮೀ ಸುಸ್ತಾಗುತ್ತದೆ. ಎಷ್ಟೋ ಸಾರಿ ಹಿಂದಿರುಗಿ ದಡದತ್ತ ಬರುತ್ತದೆ. ಮತ ಎಳೆದೊಯ್ಯುತ್ತದೆ. ಬಲಶಾಲಿಗಳಾದ ಮೀನುಗಳು ಗಂಟೆಗಟ್ಟಲೆ ಸೆಣಸಾ ನಮ್ಮನ್ನೇ ಸುಸ್ತು ಮಾಡುತ್ತವೆ. ನಾವು ಗಾಬರಿಯಲ್ಲಿ ಎರ್ರಾಬಿರ್ರಿ ಎಳೆದಾಡಿದ ದಾರ ತುಂಡುಮಾಡಿ ಮೀನು ಪರಾರಿಯಾಗುತ್ತದೆ.

ಆದರೆ ಅವತ್ತು ಚಂದ್ರುಗೆ ಹಾಗಾಗಲೇ ಇಲ್ಲ. ಮೀನನ್ನು ಆಡಿಸ ಅವಕಾಶವೇ ಸಿಕ್ಕಲಿಲ್ಲ. ಮುಕ್ಕಾಲು ದಾರ ಮುಗಿಯುತ್ತಾ ಬಂದರೂ ಆ ಮೀನಿ ಶಕ್ತಿ ಮತ್ತು ವೇಗಗಳು ಹೆಚ್ಚಿತೇ ವಿನಾ ಕಡಿಮೆಯಾಗಲೇ ಇಲ್ಲ. ದಾ ಮುಗಿಯುತ್ತಾ ಬಂದಂತೆ ಚಂದ್ರು ಗಾಬರಿ ಹೆಚ್ಚುತ್ತಾ ಹೋಯ್ತು.

"ಏನ್ಮಾಡೋದು ಸಾರ್ ಈಗ?"

"ಯಾಕ್ರಿ? ಏನಾಯ್ತು?"

"ದಾರ! ದಾರ! ಮುಗೀತಾಬಂತು"

ದಾರ ದೂರದಲ್ಲೆಲ್ಲೋ ನೀರಿಗೆ ತಾಗಿ ಸಮುದ್ರದೊಳಕ್ಕೆ ಹೋಗಿತ್ತು.

"ಏನ್ಮಾಡೋದು ಸಾರ್?" ಮತ್ತೆ ಚಂದ್ರು ಕೂಗಿದರು.

ಏನು ಮಾಡುವುದು? ಏನೂ ಮಾಡುವ ಹಾಗೇ ಇರಲಿಲ್ಲ. ಅಂಡಮಾ ನಲ್ಲಿ ಇಂಥ ದೈತ್ಯ ಮೀನುಗಳು ನಮ್ಮ ಗಾಳಕ್ಕೆ ಗಂಟು ಬೀಳುತ್ತವೆ ಎಂದ

This PDF was created using the Sonic PDF Creator.
To remove this watermark, please license this product at www.investintech.com

ಮೊದಲೇ ಸೂಚನೆ ಕೊಟ್ಟಿದ್ದರೆ ಏನಾದರೂ ಮಾಡಬಹುದಿತ್ತೇನೋ? ಈಗಂತೂ ಏನು ಮಾಡಬೇಕೆಂದು ನನಗೆ ಹೊಳೆಯಲಿಲ್ಲ. ದಾರ ಮುಗಿಯುತ್ತಾ ಕೊನೆಯ ನಾಲ್ಕಾರು ಸುತ್ತುಗಳು ಮಾತ್ರ ಉಳಿದಿದ್ದವು. ಚಂದ್ರು ಗಾಬರಿ ಮಿಗಿಲಾಗಿ ದಾರ ಇನ್ನೂ ಕೊಂಚ ಬಿಗಿ ಮಾಡಿದರು. ದಾರ ಫಟಾರ್ ಎಂದು ಗಾಳದ ಬಳಿ ತುಂಡಾಗಿ ಅಷ್ಟು ದಾರವೂ ಬಂದು ಚಂದ್ರು ಮೈಮೇಲೆ ಗೋಜಲು ಗೋಜಲಾಗಿ ಬಿದ್ದಿತು. ಚಂದ್ರು ಮುಖದಲ್ಲಿ ಕಳವಳ! ದಿಗ್ಭ್ರಾಂತ!

ನಾನು ಚಂದ್ರುಗಿಂತ ಹೆಚ್ಚು ಆತ್ಮವಿಶ್ವಾಸದಿಂದಿದ್ದೆ. ಯಾಕೆಂದರೆ ನನ್ನ ರೀಲಿಗೆ ಪಶ್ಚಿಮ ಜರ್ಮನಿಯ ಬ್ರೋನೋ ಕಂಪನಿಯ ದಾರ ಹಾಕಿದ್ದೆ. ಆ ದಾರದಲ್ಲಿ ಸಾಕಷ್ಟು ದೊಡ್ಡ ದೊಡ್ಡ ಮಹಶೀರ್ ಮೀನುಗಳನ್ನೆಲ್ಲಾ ಆಡಿಸಿ ಆಡಿಸಿ ಸೋಲಿಸಿದ್ದೆ. ಆದ್ದರಿಂದ ಕೊಂಚ ಜಾಗ್ರತೆ ವಹಿಸಿದರೆ ಈ ಅಂಡಮಾನ್ ಮೀನುಗಳನ್ನೂ ದಾರಿಗೆ ತರಬಹುದು ಎಂದು ಯೋಚಿಸಿದೆ.

ಸಮುದ್ರದೊಳಗೆ ಚಾಚಿಕೊಂಡಿದ್ದ ಒಂದು ಎತ್ತರವಾದ ಬಂಡೆಯಿಂದ ಗಾಳ ಬೀಸಿ ಎಸೆದೆ. ಸುಮಾರು ನಲ್ವತ್ತು ಗಜ ಸಮುದ್ರದೊಳಕ್ಕೆ ಹೋಗಿ ಅಲೆಗಳ ನಡುವೆ ಗಾಳ ಸಮುದ್ರ ತಾಗಿತು. ಗಾಳ ಬೀಳುತ್ತಿದ್ದಂತೆಯೇ ಸಮುದ್ರದ ಮೇಲ್ಮೈಯಲ್ಲಿ ಒಂದು ಚಿಕ್ಕ ಆಸ್ಫೋಟನೆಯಾದಂತಾಗಿ ಮಿಂಚಿನ ವೇಗದಲ್ಲಿ ದಾರ ವಿಪರೀತ ಬಿಗಿಯಾಗಿ ತುಂಡಾಗಿಹೋಯ್ತು!

ಚಂದ್ರು ಕಡೆಗೆ ನೋಡಿದೆ. ಅವರು ಗಾಳ ಕಟ್ಟಿಕೊಳ್ಳುತ್ತಾ ಇದ್ದರು. ನಾನು ತುಂಡಾದ ನನ್ನ ದಾರಕ್ಕೆ ಗಾಳ ಕಟ್ಟತೊಡಗಿದೆ. ಚಂದ್ರು ನನ್ನತ್ತ ತಿರುಗಿ "ಏನ್ರೀ ಇನ್ನೂ ಗಾಳ ಕಟ್ತೋದರ ಒಳಗೇ ಇದ್ದೀರಲ್ಲಾ?" ಎಂದು ಕೇಳಿದರು. ನಡೆದ ಅನಾಹುತವನ್ನು ವಿವರಿಸುವ ವ್ಯವಧಾನವಿರಲಿಲ್ಲ. "ಹೌದು" ಎಂದೆ.

ನಾವು ಅನೇಕ ಸಾರಿ ಮೀನುಗಳ ಹತ್ತಿರ ಸೋಲು ಅನುಭವಿಸಿದ್ದೇವೆ. ಎಷ್ಟು ಹುಷಾರಾಗಿ ಆಡಿಸಿದರೂ ದಡಕ್ಕೆ ಬರದೆ ಸಿಕ್ಕಾಪಟ್ಟೆ ಜಗ್ಗಾಡಿ ಬಂಡೆಗಳಡಿಯೆಲ್ಲಾ ನುಗ್ಗಾಡಿ ದಾರ ಸಿಕ್ಕಿಸಿ ತುಂಡು ಮಾಡಿರುವ ಮೀನು, ಗಾಳದ ಕೊಕ್ಕೆಯನ್ನು ಎಳೆದೆಳೆದು ನೆಟ್ಟಗೆ ಮಾಡಿದ ಮೀನು ಮುಂತಾದವನ್ನೆಲ್ಲಾ ನೋಡಿದ್ದೇವೆ. ಆದರೆ ಇದು ನಾವು ಊಹಿಸದಿದ್ದ ಸವಾಲು. ಗಾಳ ನೀರಿಗೆ ತಾಗುವ ಮೊದಲೆ ದಾರ ತುಂಡುಮಾಡಿ ಬಿಸಾಕುವ ಮೀನುಗಳು!

ಮತ್ತೆ ಗಾಳಕ್ಕೆ ಪುಡಿ ಮೀನು ಸಿಕ್ಕಿಸಿ ಸಮುದ್ರಕ್ಕೆ ಬೀಸಿದೆ. ಆಶ್ಚರ್ಯ! ಗಾಳ ಸಮುದ್ರಕ್ಕೆ ತಾಗಿತೋ ಇಲ್ಲವೋ ಮತ್ತೆ ತದ್ವತ್ತಾಗಿ ಹಿಂದೆ

This PDF was created using the Sonic PDF Creator.
To remove this watermark, please license this product at www.investintech.com

ನಡೆದುದೇ ಪುನರಾವರ್ತನೆ! ಏನು ಎತ್ತ ಎಂದು ಯೋಚಿಸಲೂ ಪುರುಸೊತ್ತು ಕೊಡದೆ ದಾರ ವಿಪರೀತ ವೇಗದಲ್ಲಿ ಬಿಗಿಯಾಗಿ ತುಂಡಾಯ್ತು. ಕ್ರಿಕೆಟ್ ಆಟದಲ್ಲಿ ಕ್ಯಾಚ್ ಹಿಡಿಯಲು ಫೀಲ್ಡರುಗಳು ನಿಂತ ರೀತಿ ಸಮುದ್ರದಲ್ಲಿ ಮೀನುಗಳು ನಿಂತಿರುವಂತೆ ನನಗೆ ಭಾಸವಾಯ್ತು.

ಅಂಡಮಾನಿನ ಮೀನುಗಳ ಅಂದಾಜು ತಿಳಿಯದೆ ನಾವು ನಮ್ಮ ನದಿಗಳಲ್ಲಿ ಉಪಯೋಗಿಸುವ ಹತಾರುಗಳನ್ನೇ ಇಲ್ಲಿಗೂ ತಂದದ್ದು ತಪ್ಪಾಯ್ತೆಂದು ಅನ್ನಿಸಿತು.

ಅಂಡಮಾನಿನ ಒಂದೆರಡು ಅಂಗಡಿಗಳಲ್ಲಿ ಮೀನು ಹಿಡಿಯುವ ದಾರ ಇಟ್ಟಿದ್ದನ್ನು ನೋಡಿದ್ದೆವು. ಎಲ್ಲಾ ಬಟ್ಟೆ ಒಣಹಾಕುವ ಹಗ್ಗಗಳಷ್ಟು ಬಲವಾಗಿದ್ದವು. ಅವನ್ನು ನೋಡಿ ನಾವು ಆಶ್ಚರ್ಯಪಟ್ಟಿದ್ದೆವು. ಇಷ್ಟೊಂದು ಬಲವಾದ ದಾರಗಳು ಅನಾವಶ್ಯಕ ಎಂದೇ ನಮ್ಮ ಭಾವನೆಯಾಗಿತ್ತು. ಆದರೆ ಈಗ ಈ ಮೀನುಗಳು ಎಳೆಯುವ ಪರಿಯನ್ನು ನೋಡಿದರೆ ಆ ದಾರಗಳೂ ಕೂಡ ಇವಕ್ಕೆ ಈಡಲ್ಲ ಎಂದೆನ್ನಿಸಿತು. ತೀರಾ ಬಲವಾದ ದಾರ ಹಾಕಿದರೆ ಇವುಗಳು ಎಳೆಯುವ ಹೊಡೆತಕ್ಕೆ ಇಲ್ಲಾ ನಮ್ಮ ರಾಡುರೀಲುಗಳು ಪುಡಿ ಪುಡಿಯಾಗುತ್ತವೆ, ಇಲ್ಲವೇ ನಮ್ಮನ್ನೇ ಇವು ಸಮುದ್ರದೊಳಕ್ಕೆ ಎಳೆದುಬಿಡುತ್ತವೆ!

ದಡದ ಮೇಲೆ ಮುಂದೇನು ಮಾಡುವುದೆಂದು ಚಿಂತಾಕ್ರಾಂತನಾಗಿ ಯೋಚಿಸುತ್ತಿದ್ದ ನನಗೆ ಈ ಮೀನುಗಳ ರಾಕ್ಷಸ ಶಕ್ತಿ ನೋಡಿ ಗಾಬರಿಯಾಯ್ತು. ನಾವು ಸಾಧ್ಯವಾದರೆ ದೋಣಿಯಲ್ಲಿ ಹೋಗಿ ನಡು ಸಮುದ್ರದಲ್ಲಿ ಗಾಳ ಹಾಕಬೇಕೆಂದು ಒಮ್ಮೆ ಯೋಚಿಸಿದ್ದೆವು. ಆದರೆ ಆಗ ಏನಾದರೂ ಇಂಥ ಮೀನುಗಳು ಗಾಳ ನುಂಗಿ ದಾರದ ಸಮೇತ ದೋಣಿಯನ್ನು ಎಳೆದೊಯ್ಯತೊಡಗಿದರೆ ನಾವು ಸಾಗರದ ನಡುವೆ ಅತಂತ್ರರಾಗುತ್ತಿದ್ದೆವೆನ್ನುವುದು ಖಚಿತ ಎನ್ನಿಸಿತು.

ನನ್ನ ರೀಲನ್ನು ತೆಗೆದಿಟ್ಟು ನಾನು ತೆಗೆದುಕೊಂಡು ಬಂದಿದ್ದ ರಾಮದಾಸ್ ರೀಲನ್ನು ನನ್ನ ರಾಡಿಗೆ ಜೋಡಿಸಿದೆ. ಹಿಂದಿನ ದಿನ ಅಂಡಮಾನಿನಲ್ಲಿ ಕೊಂಡು ಕೊಂಡ ಹೊಚ್ಚ ಹೊಸ ನೀಲಿಯ ಗರ್‍ವಾರೆ ಕಂಪೆನಿಯ ದಾರ ಸುತ್ತಿದ್ದೆವು. ಅದರಲ್ಲೂ ಸಹ ಈ ಮೀನುಗಳನ್ನು ದಡ ಹತ್ತಿಸಬಹುದೆಂಬ ನಂಬಿಕೆ ನನಗಿರಲಿಲ್ಲ. ಆದರೂ ಆ ಮೀನುಗಳ ಮುಖವನ್ನಾದರೂ ನೋಡಲು ಪ್ರಯತ್ನಿಸಬೇಕೆಂಬ ಕುತೂಹಲ ನನಗೆ. ಅವು ಷಾರ್ಕುಗಳಿರಬಹುದೆ? ಅಥವಾ ಮರ್‍ಲಿನ್, ಟ್ಯೂನಾ, ಬ್ಯಾರಾ ಖೂಡಾ ಇರಬಹುದೆ? ಅಥವಾ ಏನಿರಬಹುದು?

This PDF was created using the Sonic PDF Creator.
To remove this watermark, please license this product at www.investintech.com

ಅಂಡಮಾನಿನ ಪಚ್ಚೆಯ ಬಣ್ಣದ ಸಮುದ್ರದೊಳಗೆ ಗೂಢವಾಗಿ ಕುಳಿತು, ನಮಗೆ ಸವಾಲೆಸೆದಿರುವ ಈ ದೈತ್ಯ ಮೀನುಗಳು ಯಾವುದಾದರೂ ಸರಿ, ನಮ್ಮ ದಾರಗಳನ್ನು ಕ್ಷುಲ್ಲಕವಾಗಿ ನೋಡಿ ತುಂಡುಮಾಡಿ ಎಸೆದ ಅವುಗಳ ಬಗ್ಗೆ ಗೌರವ ಮೂಡಿತು ನಮಗೆ.

ಚಂದ್ರು ಗಾಳಕ್ಕೆ ಮತ್ಯಾವುದೋ ಗಡವ ಹಿಡಿದು ಎಳೆಯತೊಡಗಿತು. ಬಿಗಿಮಾಡಿದ್ದ ದಾರವನ್ನೇ ಗರಗರ ಎಳೆಯತೊಡಗಿತು. ಕೆಲವೇ ಕ್ಷಣಗಳಲ್ಲಿ ದಾರ ಕಟ್ಟಾಯಿತ್ತು.

ನಾನು ಮತ್ತೆ ಗಾಳಬೀಸಿ ರಾಡು ಹಿಡಿದು ಕುಳಿತಿರಬೇಕಾದರೆ ಚಂದ್ರು ಅವರ ದಾರ ಹಿಡಿದು ಪರೀಕ್ಷಿಸುತ್ತಾ ನನ್ನ ಬಳಿಗೆ ಬಂದು ದಾರ ತೋರಿಸಿದರು. ಆ ಮೀನುಗಳು ದಾರವನ್ನು ಎಳೆದಾಡಿದ ರಭಸಕ್ಕೆ ರಾಡಿನ ಗೈಡುಗಳ ಮೇಲೆ ದಾರ ತಿಕ್ಕಿ ತಂತಿಯಂತಿದ್ದ ಮಾನೋ ಫಿಲ್ಮೆಂಟ್ ದಾರ ಜೂಲೆದ್ದು ಸ್ವೆಟರ್ ಹಾಕುವ ಉಲ್ಲನ್ ದಾರದಂತಾಗಿತ್ತು. ಲಡ್ಡು ಬಿದ್ದಿದ್ದ ಆ ದಾರದಲ್ಲಿ ಇನ್ನು ಮೀನು ಹಿಡಿಯುವುದು ಕಷ್ಟಸಾಧ್ಯವಾಗಿತ್ತು. ಚಂದ್ರು ಸ್ಥಿತಿ ನೋಡಿ ನನಗೆ ನನ್ನ ಮನಃಸ್ಥೈರ್ಯ ಕುಸಿಯತೊಡಗಿತು.

ಅದೇ ಸಮಯಕ್ಕೆ ಜೋರಾಗಿ ಅಲೆಯೊಂದು ನುಗ್ಗಿಬಂದು ನಮ್ಮ ಬಟ್ಟೆಗಳನ್ನು ತೊಯ್ಸಿತು. ಬೇರೊಂದು ಕಡೆಗೆ ಗಾಳ ಬೀಸೋಣವೆಂದು ದಾರ ಸುತ್ತಲೆತ್ನಿಸಿದೆ. ದಾರ ಬರಲಿಲ್ಲ. ಬಲವಾಗಿ ಎಳೆದೆ ಜಗ್ಗಲಿಲ್ಲ! ಸಮುದ್ರದ ತಳದ ಯಾವುದೋ ಕಲ್ಲಿಗೆ ಸಿಕ್ಕಿಕೊಂಡಿದೆ ಎಂದೆನ್ನಿಸಿತು. ಕುಳಿತವನು ಎದ್ದು ನಿಂತು ದಾರವನ್ನು ಕಲ್ಲಿನಿಂದ ಬಿಡಿಸಲು ಪ್ರಯತ್ನಿಸುತ್ತಾ ಎಳೆದೆ. ಹಠಾತ್ತಾಗಿ ಸಮುದ್ರದ ತಳದಿಂದ ದಾರಕ್ಕೆ ಎಳೆತ ಶುರುವಾಯ್ತು. ಚಂದ್ರು ಕಲ್ಲು ಅಲ್ಲಾ ಸಾರ್! ಯಾವುದೋ ಮೀನು ಗಾಳ ಹಿಡಿದಿದೆ!'' ಎಂದರು. ಗಾಳ ಕಲ್ಲಿಗೆ ಸಿಕ್ಕಿಕೊಂಡಷ್ಟು ಬಲವಾಗಿ ಯಾವುದೋ ಮೀನು ಹಿಡಿದಿತ್ತು. ನಾನು ಎದ್ದು ನಿಂತು ದಾರ ಎಳೆಯುತ್ತಲೂ ಅದು ಸಮುದ್ರದ ಆಳದ ಕಡೆಗೆ ದಾರ ಎಳೆದುಕೊಂಡು ಚಲಿಸಲಾರಂಭಿಸಿತು. ದಾರ ಬಿಗಿ ಮಾಡಲು ಇನ್ನು ಸಾಧ್ಯವೇ ಇರಲಿಲ್ಲ. ಆಗಲೇ ಅದು ಸಾಕಷ್ಟು ಬಿಗಿಯಾಗಿ ಪಿಟೀಲಿನ ತಂತಿಯಂತೆ ಟೊಂಯ್ ಎಂದು ಸದ್ದು ಮಾಡುತ್ತಿತ್ತು. ಅದನ್ನು ಇನ್ನು ಕೊಂಚವೇ ಬಿಗಿ ಮಾಡಿದರೂ ತುಂಡಾಗುತ್ತಿತ್ತು. ಅದು ಸುಮಾರು ಮುಕ್ಕಾಲು ರೀಲುದಾರ ಎಳೆದೊಯ್ದಿರಬೇಕಾದರೆ ಏನೂ ಮಾಡಲು ತೋರದೆ ರೀಲಿನಿಂದ ಹರಿದು

This PDF was created using the Sonic PDF Creator.
To remove this watermark, please license this product at www.investintech.com

ಹೋಗುತ್ತಿದ್ದ ದಾರವನ್ನು ಸುಮ್ಮನೆ ಕೈಬೆರಳಿನಿಂದ ಮುಟ್ಟಿದೆ ಅಷ್ಟೆ. ಅಷ್ಟಕ್ಕೇ ದಾರ ಪರೀರನೆ ತುಂಡಾಯಿತು.

ಕಾಲ ಸರಿಯುತ್ತಾ ಸಂಜೆಯಾಗತೊಡಗಿತು. ಸಮುದ್ರದ ಮೀನುಗಳ ಸವಾಲನ್ನೆದುರಿಸಲು ಸಾಧ್ಯವಾಗುವುದಿಲ್ಲೆಂದು ನಮಗೆ ಅರಿವಾಯಿತು. ಈ ಜಾಗವೇ ಬೇಡ. ಬೇರೆಲ್ಲಾದರೂ ಪ್ರಯತ್ನಿಸೋಣ ಎಂದು ಸಮುದ್ರದ ದಂಡೆಯ ಮೇಲೆ ನಡೆಯುತ್ತ ಕೊಂಚ ದೂರ ಹೋದೆವು. ಸಮುದ್ರದ ಉಬ್ಬರ ಆರಂಭವಾಯಿತು. ಅಲೆಗಳು ನೊರೆ ಕಾರುತ್ತಾ ದಡದ ಕಡೆಗೆ ನುಗ್ಗಿ ಬರಲಾರಂಭಿಸಿದವು. ಅವುಗಳ ತುಯ್ದಾಟಕ್ಕೆ ಪದೇ ಪದೇ ನಮ್ಮ ಗಾಳಗಳು ಕಲ್ಲುಗಳಿಗೆ ಸಿಕ್ಕಿಕೊಳ್ಳಲಾರಂಭಿಸಿದವು.

ಒಂದು ಕಡೆ ಎರಡು ದೊಡ್ಡ ನೀಲಿಯ ಮೀನುಗಳು ಬಂದು ಗಾಳವನ್ನು ಎರಡು ಮೂರು ಸಾರಿ ಅಟ್ಟಿಸಿಕೊಂಡು ಬಂದವು. ಆದರೆ ಅಲೆಗಳ ತುಯ್ದಾಟದಲ್ಲಿ ಅವುಗಳಿಗೆ ಗಾಳ ಹಿಡಿಯಲು ಸಾಧ್ಯವಾಗಲಿಲ್ಲ. ಸ್ಕೂಟರಿನಲ್ಲಿ ನಾವು ತಂದಿದ್ದ ತಿಂಡಿ ಜ್ಞಾಪಕಕ್ಕೆ ಬರುವವರೆಗೂ ಅಲ್ಲೇ ಪ್ರಯತ್ನ ಮಾಡುತ್ತಿದ್ದೆವು. ಆದರೆ ಹಿಂದಿರುಗುವಾಗ ಆಗಲೇ ಕತ್ತಲಾಗತೊಡಗಿತ್ತು.

ಬೆಳಿಗ್ಗೆ ಸಮುದ್ರದ ದಂಡೆಗೆ ಬಂದ ನಮಗೆ ಸಂಜೆವರೆಗೆ ಹೇಗೆ ಕಾಲ ಸರಿಯಿತೋ ಗೊತ್ತಾಗಲೇ ಇಲ್ಲ. ಒಂದೇ ಒಂದು ಮೀನನ್ನಾದರೂ ಸೋಲಿಸಿ ದಡದ ಸಮೀಪಕ್ಕೆ ಬರುವಂತೆ ಸಹ ಮಾಡಲು ನಮ್ಮಿಂದ ಸಾಧ್ಯವಾಗಲಿಲ್ಲ.

ಸಮುದ್ರದ ದಂಡೆಯ ಮೇಲೆ ನಿಂತು ತುಂಡು ತುಂಡಾದ ದಾರಗಳೊಂದಿಗೆ ಯೋಚಿಸಿದೆವು. ಗಾಳ ಹಾಕಿ ಮೀನು ಹಿಡಿಯುವವರ ಜೀವಮಾನದಲ್ಲಿ ಎಲ್ಲೋ ಒಮ್ಮೊಮ್ಮೆ ಸಿಗಬಹುದಾದಂಥ ಅಪೂರ್ವ ಅವಕಾಶ ನಮಗೆ ಸಿಕ್ಕಿತ್ತು! ಮತ್ತಿನ್ನೆಲ್ಲೂ ಹಿಡಿಯಲಾರದಷ್ಟು ದೊಡ್ಡ ಮೀನುಗಳೊಡನೆ ಸೆಣಸಬಹುದಾದಂಥ ಅವಕಾಶ! ಇನ್ನೊಮ್ಮೆ ನಮ್ಮ ಜೀವನದಲ್ಲಿ ಇಲ್ಲಿಗೆ ಬಂದು ಇದೇ ಸಮುದ್ರತೀರದಲ್ಲಿ ನಿಂತು ಈ ಮೀನುಗಳ ಸವಾಲನ್ನು ಎದುರಿಸುತ್ತೇವೆಯೋ ಇಲ್ಲವೋ! ನಾವು ಇವುಗಳಿಗೆ ಸರಿಯಾಗಿ ತಯಾರಾಗಿ ಬರದೆ ಎಂಥ ಕೆಲಸವಾಯಿತು ಎಂದು ಕೈಕೈ ಹಿಸುಕಿಕೊಂಡೆವು.

ಸಾವಿರಾರು ಮೈಲಿ ಬಂದು ಅಂಡಮಾನಿನಲ್ಲಿ ಇನ್ನಿಂಗ್ಸ್ ಡಿಫೀಟ್ ಅನುಭವಿಸಿ ವಾಪಸು ಹೋಗಬೇಕಲ್ಲ ಎಂದು ದುಃಖವಾಯಿತು.

This PDF was created using the Sonic PDF Creator.
To remove this watermark, please license this product at www.investintech.com

"ಇನ್ನೊಂದೇ ಒಂದು ದಿವಸ ಟೈಮ್ ಸಿಕ್ಕಿದ್ದರೆ ಇವಕ್ಕೆ ಸರಿಯಾಗಿ ಬುದ್ಧಿ ಕಲಿಸಬಹುದಿತ್ತು ಸಾರ್! ಪೋರ್ಟ್‌ಬ್ಲೇರಲ್ಲಿ ಸರಿಯಾದ ದಾರ ಕೊಂಡು ಕೊಂಡು ಬಂದು" ಎಂದರು ಚಂದ್ರು. ಸೋಲೊಪ್ಪಿಕೊಳ್ಳುವುದು ಚಂದ್ರುಗೆ ಯಾವಾಗಲೂ ಅಸಹನೀಯವಾಗಿತ್ತು.

"ಅಲ್ರೀ ಬಲವಾದ ದಾರ ಹಾಕಿದಿರಿ ಅನ್ನಿ! ಈ ಮೀನುಗಳು ಸಮುದ್ರಕ್ಕೆ ನಮ್ಮನ್ನೇ ಎಳೆಯುವಂತೆ ಕಾಣ್ತದಲ್ರಿ" ಎಂದೆ ನಾನು.

ಮತ್ತೆ ಸ್ಕೂಟರ್ ಹತ್ತಿ ಪೋರ್ಟ್‌ಬ್ಲೇರ್ ಕಡೆಗೆ ಮಾರನೆಯ ದಿನ ಮದ್ರಾಸಿಗೆ ಅಲ್ಲಿಂದ ಊರಿಗೆ ಹೊರಟೆವು.

ಬರುತ್ತಾ ದಾರಿಯಲ್ಲಿ ನಾವಿಬ್ಬರೂ ಇನ್ನೊಮ್ಮೆ ಬಂದರೆ ಎಂಥ ರೀಲುಗಳನ್ನೂ ದಾರಗಳನ್ನೂ ತರಬೇಕು, ಹೇಗೆ ಈ ರಾಕ್ಷಸ ಮೀನುಗಳ ದಾಳಿಯನ್ನು ಎದುರಿಸಿ ಬುದ್ಧಿ ಕಲಿಸಬೇಕು ಇತ್ಯಾದಿಗಳನ್ನೆಲ್ಲಾ ವಿವರವಾಗಿ ಚರ್ಚಿಸಿ ನೀಲಿ ನಕ್ಷೆಯೊಂದನ್ನು ತಯ್ಯಾರಿಸಿದೆವು, ನಾಳೆಯೇ ಹಿಂದಿರುಗಲಿದ್ದೇವೆನ್ನುವಂತೆ.

ಹಸುರಾಗಿದ್ದ ಸಮುದ್ರ ಮುಳುಗುವ ಸೂರ್ಯನ ಕಿರಣಗಳಿಗೆ ಹಳದಿಯಾಗತೊಡಗಿತ್ತು. ಸಮುದ್ರದ ದಂಡೆಯಿಂದಲೇ ರಂಬೆಗಳ ಕೈಕೈ ಹಿಡಿದು ಹಬ್ಬಿದ್ದ ದಟ್ಟ ಅರಣ್ಯದ ನಡುವೆ ಹಿಸುಗುಡುತ್ತ ಗಾಳಿ ಸಾಗಿತು.


ಮೊರೆಯುತ್ತಿದ್ದ ಹಳದಿ ಸಮುದ್ರದೊಳಗಿನ ನಿಶ್ಶಬ್ದದಲ್ಲಿ ನಮ್ಮ ದಾರಗಳನ್ನು ಪುಡಿಪುಡಿ ಮಾಡಿದ ನಿಗೂಢ ಜೀವಿಗಳು ಅಂಡಮಾನಿನ ರಹಸ್ಯಮಯತೆಯನ್ನು ಇನ್ನಷ್ಟು ಉಲ್ಬಣಗೊಳಿಸಿದ್ದವು.

This PDF was created using the Sonic PDF Creator.
To remove this watermark, please license this product at www.investintech.com

This PDF was created using the Sonic PDF Creator.
To remove this watermark, please license this product at www.investintech.com

# ಮಹಾನದಿ ನೈಲ್

This PDF was created using the Sonic PDF Creator.
To remove this watermark, please license this product at www.investintech.com




This PDF was created using the Sonic PDF Creator.
To remove this watermark, please license this product at www.investintech.com

# 1. ಮಹಾನದಿ ನೈಲ್

ನೈಲ್‌ನದಿಯ ಬಗ್ಗೆ ಬರೆಯುವುದು ಇತರ ನದಿಗಳ ಬಗ್ಗೆ ಬರೆದಷ್ಟು ಸುಲಭವಲ್ಲ. ಏಕೆ? ನೈಲ್ ನದಿಯೂ ಮಳೆಯ ನೀರಿನಿಂದಲೇ ಉದ್ಭವಿಸಿದ್ದು. ನೈಲ್ ನದಿಯೂ ಬೆಟ್ಟಗಳ ತಪ್ಪಲುಗಳಿಂದ ತೊಟ್ಟಿಕ್ಕಿ ಚಿಕ್ಕ ಝರಿಯಾಗಿ ಹರಿದು ಹಳ್ಳಕೊಳ್ಳಗಳನ್ನು ಸೇರಿ ಹಳ್ಳವಾಗಿ ನದಿಯಾಗಿ ಕೊನೆಗೆ ಮಹಾನದಿಯಾಗಿ ಮೆಡಿಟರೇನಿಯನ್ ಸಮುದ್ರಕ್ಕೆ ಸೇರುತ್ತದೆ. ಪ್ರಪಂಚದ ಅತ್ಯಂತ ಉದ್ದ ನದಿಯಾದ ಇದು ಸುಮಾರು 4125 ಮೈಲುಗಳಷ್ಟು ದೂರ ಹರಿಯುತ್ತದೆ. ಆದರೆ ಈ ನದಿಯನ್ನು ಎಲ್ಲ ನದಿಗಳಂತೆ ಎಲ್ಲಿಂದ ಹುಟ್ಟುತ್ತದೆ? ಎಲ್ಲಿ ಸಮುದ್ರ ಸೇರುತ್ತದೆ, ಎಷ್ಟುದೂರ ಹರಿಯುತ್ತದೆ ಎಂದು ಮಾತ್ರ ತಿಳಿಸಿದರೆ ಈ ನದಿಯ ಬಗ್ಗೆ ಏನನ್ನೂ ತಿಳಿಸಿದಂತಾಗುವುದೇ ಇಲ್ಲ. ಕಗ್ಗತ್ತಲೆಯ ಖಂಡ ಆಫ್ರಿಕಾದ ನಟ್ಟ ನಡುವಿನಿಂದ ಹುಟ್ಟಿ ಆಫ್ರಿಕಾದ ಭಯಂಕರ ಮರಳುಗಾಡಿನ ನಡುವೆ ಹರಿಯುತ್ತಾ ಸಾಗುವ ಈ ನದಿಗೆ ಮನುಷ್ಯನ ಇತಿಹಾಸದಲ್ಲಿ ಒಂದು ಚಿರಸ್ಥಾಯಿಯಾದ ಸ್ಥಾನ ಇದೆ.

"ಮಂಗನಿಂದ ಮಾನವ ವಿಕಾಸಗೊಂಡ" ಎಂದು ಚಾರ್ಲ್ಸ್ ಡಾರ್ವಿನ್ ಸಿದ್ಧಾಂತವನ್ನು ಮಂಡಿಸಿದ. ಈ ಡಾರ್ವಿನ್ನನ ವಿಕಾಸವಾದ ವೈಜ್ಞಾನಿಕ ಪ್ರಪಂಚದಲ್ಲಿ ಎಬ್ಬಿಸಿದ ಅಲ್ಲೋಲಕಲ್ಲೋಲಗಳು ನಮಗೆಲ್ಲ ತಿಳಿದೇ ಇದೆ. ಆದರೆ ಮನುಷ್ಯ ಮಂಗನಿಂದ ವಿಕಾಸಗೊಂಡುದಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಿದ್ದ ಒಂದು ಹಂತದ ಪಳೆಯುಳಿಕೆಗಳು ಮಾನವ ಶಾಸ್ತ್ರಜ್ಞರಿಗೆ ಸಿಕ್ಕಿರಲಿಲ್ಲ. ಅದೇ ಮಂಗನ ಅವಸ್ಥೆಯಿಂದ ಮಾನವನ ಅವಸ್ಥೆಗೆ ಮನುಷ್ಯ ಪರಿವರ್ತನೆ

This PDF was created using the Sonic PDF Creator.
To remove this watermark, please license this product at www.investintech.com

ಗೊಳ್ಳುತ್ತಿದ್ದಾಗಿನ ಹಂತ. ಅದೇ ನರವಾನರ ಹಂತ. ಮಿಸ್ಸಿಂಗ್ ಲಿಂಕ್ ಅಥವಾ ಕಣ್ತಪ್ಪಿದ ಕುಣಿಕೆ ಎಂದು ಇದನ್ನು ಮಾನವಶಾಸ್ತ್ರಜ್ಞರು ಕರೆಯುತ್ತಾರೆ. ಈ ಕಣ್ತಪ್ಪಿದ ಕುಣಿಕೆಯನ್ನು ಇತ್ತೀಚೆಗೆ ಮಾನವಶಾಸ್ತ್ರಜ್ಞ ಡಾ|| ಲೀಕಿ ಮತ್ತು ಆತನ ಹೆಂಡತಿ ಮೇರಿಲೀಕಿ ಸಂಶೋಧಿಸಿದರು. ಈ ಮಹತ್ವದ ಸಂಶೋಧನೆಯ ಬಗ್ಗೆ ಮುಂದೆ ಎಂದಾದರೂ ಬರೆಯುತ್ತೇನೆ. ಈ ಸಂಶೋಧನೆಯಾದುದು ನೈಲ್ ನದಿಯ ಜಲಾನಯನ ಪ್ರದೇಶದಲ್ಲಿ. ಲೇಕ್ ರುಡಾಲ್ಫ್ ಸರೋವರದ ತೀರದಲ್ಲಿ. ಎಂದರೆ ನೈಲ್‌ನದಿಯ ಚರಿತ್ರೆ ಮಾನವನ ವಿಕಾಸದ ಚರಿತ್ರೆಯೊಂದಿಗೇ ಮಿಳಿತ ಗೊಂಡಿದೆ ಎಂಬುದನ್ನು ತಿಳಿಸಲು ಇದನ್ನು ಹೇಳಿದೆನಷ್ಟೆ.

ಜಗತ್ತಿನ ಯಾವ ಪ್ರದೇಶದ ಸಂಶೋಧನೆಗೂ ಮನುಷ್ಯ ನೈಲ್ ನದಿಯ ಸಂಶೋಧನೆಗೆ ತೆಗೆದುಕೊಂಡಷ್ಟು ಕಾಲ, ಕಷ್ಟ ಮತ್ತು ಸಾಹಸಪಟ್ಟಿಲ್ಲ. ನೈಲ್‌ನದಿಯ ಚರಿತ್ರೆ ಎಂದರೆ ಇಡಿಯ ಆಫ್ರಿಕಾದ ಮತ್ತು ಮನುಕುಲದ ಚರಿತ್ರೆಯೇ ಸರಿ. ಇದನ್ನೆಲ್ಲಾ ಬಿಟ್ಟು ನೈಲ್ ನದಿಯ ಉದ್ದಗಲಗಳನ್ನು ವಿವರಿಸಿ ದರೆ ಕೇವಲ ಭೂಪಟದಲ್ಲಿನ ಒಂದು ಹಸುರು ಗೀರನ್ನು ತೋರಿಸಿ ಇದೇ ನೈಲ್‌ನದಿ ಎಂದು ಹೇಳಿದಂತಾಗುತ್ತದೆ.

ನೈಲ್ ನದಿಯ ಆಕರ್ಷಣೆ ಮತ್ತು ನೈಲ್ ನದಿಯ ರಹಸ್ಯಮಯತೆಗಳು ಮಾನವನನ್ನು ಸುಮಾರು 2000 ವರ್ಷಗಳಿಂದ ಕಾಡಿರುವುದಕ್ಕೆ ಚಾರಿತ್ರಿಕ ದಾಖಲೆಗಳಿವೆ. ಈಗ್ಗೆ ಕೇವಲ ನೂರುವರ್ಷಗಳ ಹಿಂದಷ್ಟೆ ನೈಲ್ ನದಿಯ ಉಗಮ ಸ್ಥಾನದ ಬಗ್ಗೆ ಇದ್ದ ವಿವಾದಗಳು ಬಗೆಹರಿದುವು. ಆ ವೇಳೆಗಾಗಲೆ ಭೂಗೋಲದ ಎಲ್ಲ ಖಂಡಗಳೂ ಬೆಳಕಿಗೆ ಬಂದಿದ್ದವು. ಭೂಮಂಡಲದ ಭೂಪಟವೆಲ್ಲ ಸಿದ್ಧ ವಾಗಿತ್ತು, ಆದರೆ ನೈಲ್ ಎಲ್ಲಿಂದ ಹುಟ್ಟುತ್ತದೆ ಎನ್ನುವುದು ಮಾತ್ರ ತಿಳಿದಿರ ಲಿಲ್ಲ. ಎಂದರೆ ಹತ್ತೊಂಬತ್ತನೆ ಶತಮಾನದ ಅನ್ವೇಷಕರಿಗೂ ನೈಲ್ ಎಂಥ ಸವಾಲಾಗಿತ್ತೆಂಬುದನ್ನು ನೀವು ಅರಿಯಬಹುದು.

ಈಜಿಪ್ಟಿನ ಒಂದೂ ಹನಿ ಬೀಳದ ಮರಳುಗಾಡನ್ನು ಹಸುರು ಗೊಳಿಸುತ್ತಾ ಉಕ್ಕಿ ಹರಿಯುವ ಈ ನೈಲ್ ನದಿಯನ್ನು ಖಾರ್‌ಟೂಂವರೆಗೆ ಮಾತ್ರ ಈಜಿಪ್ಟಿಯನ್ನರು ತಿಳಿದಿದ್ದರು. ಇಥಿಯೋಪಿಯದ ಕಡೆಯಿಂದ ಹರಿದು ಬರುವ ನೀಲಿ ನೈಲ್‌ವರೆಗೆ ಮಾತ್ರ ಇವರಿಗೆ ಗೊತ್ತಿತ್ತು. ಅಲ್ಲಿಂದ ಮುಂದೆ ಯಾವುದು ನೈಲ್ ಎಲ್ಲಿಂದ ಇದು ಹರಿದುಬರುತ್ತದೆನ್ನುವ ಬಗ್ಗೆ ನೂರಾರು ಊಹಾಪೋಹ ಗಳು ವದಂತಿಗಳು ಇದ್ದುವಷ್ಟೆ. ಯಾರಿಗೂ ಯಾವುದೂ ಸರಿಯಾಗಿ ಗೊತ್ತಿರ

This PDF was created using the Sonic PDF Creator.
To remove this watermark, please license this product at www.investintech.com

ಲಿಲ್ಲ. ಎಲ್ಲರೂ ನೈಲ್ ನದಿಯನ್ನು ಖಂಡಖಂಡವಾಗಿ ತಿಳಿದಿದ್ದರಷ್ಟೆ. ನೈಲ್ ನದಿಯ ಅಖಂಡ ಸ್ವರೂಪ ಯಾರಿಗೂ ಗೊತ್ತಿರಲಿಲ್ಲ.

ಎಂದೂ ಬತ್ತದ ಉಕ್ಕಿ ಉಕ್ಕಿ ಹರಿಯುತ್ತಾ ಈಜಿಪ್ಟಿನ ನಾಗರಿಕತೆಗೆ ಜೀವದಾಯಿನಿಯಾದ ನದಿ ಎಲ್ಲಿಂದಲೋ ಬರುತ್ತದೆ ಎಂದಷ್ಟೇ ಜನ ತಿಳಿದಿದ್ದರು. ಕ್ರಿಸ್ತಪೂರ್ವ 460ರಲ್ಲಿಯೇ ಹಿರೋಡೋಟಸ್ ಎನ್ನುವ ಅನ್ವೇಷಕ ಈಗಿನ ಅಸ್ವಾನ್ ಅಣೆಕಟ್ಟೆಯವರೆಗೂ ಇದರ ಅನ್ವೇಷಣೆಯನ್ನು ಮಾಡಿದ್ದ. ಆದರೆ ಅಲ್ಲಿಂದ ಮುಂದೆ ನೈಲ್ ನದಿಯನ್ನು ಹಿಂಬಾಲಿಸಲಾರದೆ ಹಿಂದಿರುಗಿದ್ದ. ಮಧ್ಯ ಆಫ್ರಿಕಾದಲ್ಲೆಲ್ಲೋ ಒಂದು ದೊಡ್ಡ ಚಿಲುಮೆಯಿಂದ ಈ ಮಹಾನದಿ ಉದ್ಭವಿಸುತ್ತದೆಂದಷ್ಟೆ ಇವನು ಕೇಳಿದ್ದ.

ಅಲ್ಲಿಂದ ಮುಂದೆ ಚಕ್ರವರ್ತಿ ನೀರೋ ಕೆಲವರನ್ನು ಈ ನದಿಯ ಮೂಲವನ್ನು ಸಂಶೋಧಿಸಲು ಕಳಿಸಿದ್ದ. ಅವರು ಈಗಿನ ಸುಡಾನಿನವರೆಗೂ ನೈಲ್ ನದಿಯನ್ನು ಹಿಂಬಾಲಿಸಿದರು. ಆದರೆ ಅಲ್ಲಿ ಅವರಿಗೆ ಮುಂದುವರಿಯಲು ಅಸಾಧ್ಯವಾದ ಸಹಸ್ರಾರು ಚದರ ಮೈಲಿ ವಿಸ್ತೀರ್ಣದ ಸುಡ್ ಎನ್ನುವ ಜೌಗು ಪ್ರದೇಶ ಎದುರಾಯ್ತು. ಇಲ್ಲಿ ನೈಲ್ ನದಿ ಹರಿಯುವುದೇ ಇಲ್ಲ. ಮಧ್ಯ ಆಫ್ರಿಕಾದಿಂದ ಹರಿದುಬರುವ ನೈಲ್ ನದಿ ಸುಡ್ ಜವುಗಿನಲ್ಲಿ ಸುಮ್ಮನೆ ಅಂತರ್ಧಾನವಾಗಿ ಬಿಡುತ್ತದೆ. ಆನಂತರ ಮುಂದೆ ಖಾರ್ಟೂಂ ಬಳಿ ಮತ್ತೆ ಜವುಗಿನಿಂದ ಹೊರಬಂದು ಹರಿಯಲಾರಂಭಿಸುತ್ತದೆ. ನೀರೋ ಚಕ್ರವರ್ತಿ ಕಳಿಸಿದ್ದ ಅನ್ವೇಷಕರ ತಂಡ ಸುಡ್ ಜವುಗಿನ ಬಳಿ ಬಂದು ಅದರ ಅನಂತ ವಿಸ್ತಾರವನ್ನು ನೋಡಿ ಕಂಗಾಲಾಗಿ ನದಿಯ ಮೂಲ ಇದೇ ಇರಬಹುದೆಂದು ತಿಳಿದು ಹಿಂದಿರುಗಿದ್ದರು.

1770 ರಿಂದ 1856 ರವರೆಗೆ ನೈಲ್ ನದೀ ಮೂಲ ತಿಳಿಯಲು ತುಂಬ ಜನ ತುಂಬಾ ಸಾಹಸಪಟ್ಟರು. ಜೇಮ್ಸ್ ಬ್ರೂಸ್ ಎನ್ನುವವನು ನೀಲಿ ನೈಲ್ ಮೂಲವನ್ನು ಕಂಡವನು ಕೊನೆಗೆ ಮೂಲ ನದಿಯಾದ ಬಿಳಿಯ ನೈಲ್ ಬಗ್ಗೆ ತಿಳಿಯಲು ಯಮಸಾಹಸ ಮಾಡಿ ಸೋತು ಹೋದ. ನೈಲ್ ನದಿಯ ದಡದಲ್ಲಿರುವ ಈಗಿನ ಜುಬಾ ಪಟ್ಟಣದವರೆಗೂ ಬಂದ ಆತ ಕೊನೆಗೆ ಹಿಂದಿರುಗಿದ. ನೈಲ್ ನದೀ ಮೂಲದ ಹತ್ತಿರ ಹತ್ತಿರ ಸಹ ಯಾರೂ ಬರಲಾಗಲಿಲ್ಲ.

ನೈಲ್‌ನದಿಯ ಅಂಕುಡೊಂಕಿನ ಪ್ರಪಾತಮಯವಾದ ಹಾದಿ, ಅದರ ಊಹೆಗೂ ನಿಲುಕದಷ್ಟು ವಿಸ್ತಾರವಾದ ಜವುಗು ಪ್ರದೇಶಗಳು, ಅಗಮ್ಯವಾದ

This PDF was created using the Sonic PDF Creator.
To remove this watermark, please license this product at www.investintech.com

ಅರಣ್ಯಗಳು, ನರಭಕ್ಷಕ ಕಾಡುಜನರ ಸಮುದಾಯ, ಅಗಣಿತ ಕಾಡುಮೃಗಗಳು, ವಿಷಸರ್ಪಗಳು, ದಟ್ಟ ಕ್ರಿಮಿಕೀಟಗಳು, ಮಲೇರಿಯಾ ಮುಂತಾದ ರೋಗಗಳು, ಜೊತಗೆ ಅರಬ್ ಗುಲಾಮ ವ್ಯಾಪಾರಿಗಳ ಹಾವಳಿ ಇವೆಲ್ಲವುಗಳಿಂದ ನೈಲ್ ನದಿಯ ಮೂಲ ಹುಡುಕುವುದೆಂದರೆ ಒಂದು ಅಸಾಧಾರಣ ಸಾಹಸವಾಗಿ ಪರಿಣಮಿಸಿತು. ನೈಲ್ ನದಿಯ ಮೂಲವಾದ ಮಧ್ಯ ಆಫ್ರಿಕಾದ ಕಗ್ಗತ್ತಲೊಳಗೆ ಒಂದೊಂದು ಹೆಜ್ಜೆ ಮುಂದಿಡುವುದೂ ಸಾವು ಬದುಕಿನ ಪ್ರಶ್ನೆಯಾಗಿತ್ತು. ಇದರೊಡನೆ ಅನೇಕ ಊಹಾಪೋಹಗಳೂ ಹಬ್ಬತೊಡಗಿದವು.

ಬಾಲಗಳಿರುವ ಮನುಷ್ಯರಿದ್ದಾರೆ, ರಾಕ್ಷಸಾಕಾರದ ವಾನರರಿದ್ದಾರೆ, ಪುಟ್ಟ ಪುಟ್ಟ ಲಿಲಿಪುಟ್ ಮನುಷ್ಯರಿದ್ದಾರೆ, ಪ್ರಾಚೀನ ಕಾಲದ ಸರೀಸೃಪಗಳು ಇನ್ನೂ ಜೀವಂತವಾಗಿ ನೈಲ್‌ನದೀ ಮೂಲದಲ್ಲಿ ಕಾಲಹಾಕುತ್ತಿವೆ, ಇತ್ಯಾದಿ ವದಂತಿಗಳೆಲ್ಲಾ ಅನ್ವೇಷಕ ಸಾಹಸಿಗಳ ಎದೆ ನಡುಗಿಸುವಂತೆ ಯೂರೋಪಿನಲ್ಲಿ ಹಬ್ಬಿದ್ದವು.

ಕ್ರಿ. ಪೂ. 160ರಲ್ಲಿ ಡೋಗೇನಸ್ ಎನ್ನುವ ಒಬ್ಬ ಗ್ರೀಕ್ ವ್ಯಾಪಾರಿ ಮಧ್ಯ ಆಫ್ರಿಕಾದಲ್ಲಿ ಸುತ್ತಾಡಿ ಮೋಡಗಳಷ್ಟು ಎತ್ತರವಾಗಿರುವ ಹಿಮ ಕವಿದ ಪರ್ವತಗಳು ಆಫ್ರಿಕದ ಮಧ್ಯಭಾಗದಲ್ಲಿವೆಯೆಂದೂ ಇವುಗಳಿಂದ ಈ ನದಿ ಬರುತ್ತದೆಂದೂ ಊಹಿಸಿದ್ದ. ಡೋಗ್ಲಾಸ್ ನೈಲ್‌ನದಿಯನ್ನು ಹಿಂಬಾಲಿಸಿರಲಿಲ್ಲ. ಜಾಂಜಿಬಾರ್ ಕಡೆಯಿಂದ ಸುಮಾರು 25 ದಿನ ಪ್ರಯಾಣ ಮಾಡಿ ಮಧ್ಯ ಆಫ್ರಿಕಕ್ಕೆ ಹೋಗಿದ್ದ. ಅಲ್ಲಿ ಆತ ಸಮುದ್ರದೋಪಾದಿಯಲ್ಲಿದ್ದ ಎರಡು ಮಹಾ ಸರೋವರಗಳನ್ನೂ ಕಂಡೆನೆಂದೂ ವರದಿ ಮಾಡಿದ್ದ.

1700 ವರ್ಷಗಳವರೆಗೆ ಟೋಲೆಮಿ ಆಫ್ರಿಕಾದ ಬಗ್ಗೆ ತಯಾರಿಸಿದ ಭೂಪಟವೇ ಅಂತಿಮ ದಾಖಲೆಯಾಗಿತ್ತು. ಟೋಲೆಮಿ ಮೆಡಿಟರೇನಿಯನ್ ಸಮುದ್ರದಿಂದ ನೇರವಾಗಿ ಮಧ್ಯ ಆಫ್ರಿಕಾದ ಎರಡು ಸರೋವರಗಳವರೆಗೆ ನೈಲ್ ನದಿಯನ್ನು ಗುರುತಿಸಿದ್ದ. ಯಾರೂ ಇದನ್ನು ಒಪ್ಪದಿದ್ದರೂ ಇದನ್ನು ಸರಿಯಾದ ಸಾಕ್ಷ್ಯಾಧಾರಗಳಿಲ್ಲದೆ ತಿರಸ್ಕರಿಸಲೂ ಆಗದೆ ಒಟ್ಟಿನಲ್ಲಿ ಟೋಲೆಮಿಯ ನೈಲ್ ಭೂಪಟ ನಿರಂತರ ವಾಗ್ವಾದದ ಸೆಲೆಯಾಗಿತ್ತು.

1848ರಲ್ಲಿ ಜಾನ್ ರೆಬ್‌ಮ್ಯಾನ್ ಎನ್ನುವವನು ಪೂರ್ವ ಆಫ್ರಿಕಾದ ಕಡೆಯಿಂದ ಮಧ್ಯ ಆಫ್ರಿಕದ ಕಡೆಗೆ ಅನ್ವೇಷಣಾಯಾನ ಮಾಡಿದವನು ಮಧ್ಯಾಫ್ರಿಕಾದಲ್ಲಿ ಸರಿಯಾಗಿ ಭೂಮಧ್ಯ ರೇಖೆಯ ಕೆಳಗೆ ಅಗಾಧವಾದ ಪರ್ವತಗಳನ್ನು ಕಂಡೆ

This PDF was created using the Sonic PDF Creator.
To remove this watermark, please license this product at www.investintech.com

ನೆಂದೂ ಅವುಗಳು ಎಷ್ಟೊಂದು ಎತ್ತರವಾಗಿತ್ತೆಂದರೆ ಅವುಗಳ ಶಿಖರಗಳು ಹಿಮಾಚ್ಛಾದಿತವಾಗಿತ್ತೆಂದೂ, ಇದನ್ನು ಕಿಲಿ ಮಂಜಾರೋ ಎಂದು ಕರೆಯುತ್ತಾರೆಂದೂ ಹೊರ ನಾಗರಿಕ ಜಗತ್ತಿಗೆ ವರದಿ ಮಾಡಿದ. ರೆಬ್ ಮ್ಯಾನ್ ವರದಿಯು ಕೂಡಲೇ ಆಗಿನ ಕಾಲದ ವಿದ್ವಾಂಸರ ಕಟುಟೀಕೆಗೆ ಗುರಿಯಾಯಿತು. ಭೂಮಧ್ಯ ರೇಖೆಯ ಕೆಳಗೆ ಆ ರೀತಿ ಪರ್ವತಗಳ ಮೇಲೆ ಹಿಮ ಇರಲು ಸಾಧ್ಯವೇ ಇಲ್ಲವೆಂದೂ, ಬಿಸಿಲನ್ನು ಪ್ರತಿಫಲಿಸುವ ಬಿಳಿಯ ಕಲ್ಲುಗಳನ್ನು ನೋಡಿ ಈ ರೀತಿ ರೆಬ್‌ಮ್ಯಾನ್ ವರದಿ ಮಾಡಿದ್ದಾನೆಂದೂ ಆತನನ್ನು ಎಲ್ಲರೂ ತೆಗಳಿದರು.

ರೆಬ್‌ಮ್ಯಾನ್ ವರದಿಯು ಎಷ್ಟೇ ತೆಗಳಿಕೆಗೆ ತುತ್ತಾದರೂ ಕೂಡ ಯೂರೋಪಿನ ಅನ್ವೇಷಕರ ಕುತೂಹಲವನ್ನು ಅದು ಇನ್ನಿಲ್ಲದಂತೆ ಕೆರಳಿಸಿತು. ಈ ವಿವಾದಗಳನ್ನು ಸಂಪೂರ್ಣವಾಗಿ ಬಗೆಹರಿಸಬೇಕೆಂಬ ಛಲದಿಂದ ಒಬ್ಬೊಬ್ಬರಾಗಿ ಅನ್ವೇಷಕರು ಮಧ್ಯ ಆಫ್ರಿಕದತ್ತ ಸಾಹಸ ಯಾತ್ರೆ ಕೈಗೊಂಡರು. ನೈಲ್ ನದೀ ಮೂಲವನ್ನು ಕಂಡುಹಿಡಿಯಲು ತಮ್ಮ ಜೀವಮಾನವನ್ನೇ ಸಮರ್ಪಿಸಿಕೊಂಡ ಈ ಮಹಾ ಅನ್ವೇಷಕರ ಸಾಹಸ ಕಥೆಗಳನ್ನು ಸಂಕ್ಷಿಪ್ತವಾಗಿ ತಿಳಿಯುವುದರ ಮುಖಾಂತರ ನಾವು ನೈಲ್‌ನದಿಯನ್ನು ತಿಳಿಯುವುದು ಒಂದು ರೋಮಾಂಚಕ ಅನುಭವ.

This PDF was created using the Sonic PDF Creator.
To remove this watermark, please license this product at www.investintech.com

# 2. ಮಹಾಸರೋವರಗಳು

## ಟಾಂಗಾನೀಕಿಯಾ ಮತ್ತು ನ್ಯಾಸ್ಸಾ

ಇವತ್ತು ಅಲ್ಲೋಲಕಲ್ಲೋಲಗಳ ತವರುಮನೆಯಾಗಿರುವ ಆಫ್ರಿಕಾ ದೇಶ ಕಳೆದ ಶತಮಾನದಲ್ಲಿ ನಿಗೂಢವಾದ ಕಗ್ಗತ್ತಲೆಯ ಖಂಡ ಎನ್ನಿಸಿ ಕೊಂಡಿತ್ತು. ಇಂದು ಚಂದ್ರಗ್ರಹ ಅಥವಾ ಮಂಗಳ ಗ್ರಹಗಳ ಬಗ್ಗೆ ಜಗತ್ತಿನಲ್ಲಿ ಎಂಥ ಕುತೂಹಲ ವ್ಯಕ್ತವಾಗುತ್ತಿದೆಯೋ ಹಾಗೆ ಇಡೀ ಪಾಶ್ಚಿಮಾತ್ಯ ಜಗತ್ತು ಕಳೆದ ಶತಮಾನದಲ್ಲಿ ಆಫ್ರಿಕಾದತ್ತ ನೋಡುತ್ತಿತ್ತು. ಅನೇಕ ಊಹೆಗಳ ಚಿತ್ರ ವಿಚಿತ್ರ ವದಂತಿಗಳ ಕಟ್ಟುಕತೆಗಳ ತವರು ಮನೆಯಾಗಿತ್ತು ಆಫ್ರಿಕಾ. ಆಫ್ರಿಕಾದಲ್ಲಿ ಅನ್ವೇಷಣೆಯ ಸಾಹಸ ಕೈಗೊಂಡು ಹಿಂದಿರುಗಿದವರನ್ನು ಇಂದಿನ ಗಗನಯಾತ್ರಿಗಳನ್ನು ಕಂಡಂತೆ ಕಾಣಲಾಗುತ್ತಿತ್ತು. ಅವರ ಅನುಭವಗಳನ್ನು ಜನ ಆಸಕ್ತಿಯಿಂದ ಕೇಳುತ್ತಿದ್ದರು, ಓದುತ್ತಿದ್ದರು. ಈ ರೋಮಾಂಚಕ ಸಾಹಸಕ್ಕೆ ಕೈಹಾಕಿ ಎಷ್ಟೋ ಜನ ಆಫ್ರಿಕಾದಲ್ಲೇ ಅಸು ನೀಗಿದ್ದರು.

ಆಫ್ರಿಕಾದ ಅನ್ವೇಷಣೆಗೆ ಹೋಗಿ ಅಲ್ಲಿಯೇ ದಿವಂಗತರಾದವರಲ್ಲಿ ಅತ್ಯಂತ ಧೀರೋದಾತ್ತ ವ್ಯಕ್ತಿ ಎಂದರೆ ಡಾ। ಡೇವಿಡ್ ಲಿವಿಂಗ್ ಸ್ಟೋನ್. ಆಫ್ರಿಕದ ಕಗ್ಗಾಡಿನ ರಹಸ್ಯಗಳನ್ನು ಈತ ಬಯಲುಮಾಡಿದಂತೆಯೇ ಆಫ್ರಿಕಾದ ಜನರ ಕಷ್ಟಕಾರ್ಪಣ್ಯಗಳನ್ನೂ, ಗುಲಾಮ ವ್ಯಾಪಾರಿಗಳು ಅಲ್ಲಿ ಎಸಗುತ್ತಿದ್ದ ದೌರ್ಜನ್ಯಗಳನ್ನೂ ನಾಗರಿಕ ಜಗತ್ತಿಗೆ ತಿಳಿಸಿ ಅವರ ಪ್ರತಿಭಟನೆಯನ್ನೂ ರೂಪಿಸಿದ. ಆದರೆ ಲಿವಿಂಗ್ ಸ್ಟೋನ್‌ಗೆ ಆಫ್ರಿಕಾದ ಜನರ ಸ್ಥಿತಿ ನೈಲ್‌ನದೀ

This PDF was created using the Sonic PDF Creator.
To remove this watermark, please license this product at www.investintech.com

ಮೂಲವನ್ನು ಕಂಡುಹಿಡಿಯುವುದಕ್ಕಿಂತ ಮುಖ್ಯವಾದುದಾಗಿ ಕಂಡದ್ದರಿಂದಲೋ ನೋ ಈತ ನೈಲ್ ನದಿಯ ಅನ್ವೇಷಕರಲ್ಲಿ ಮೊದಲಿಗನಾಗಲಿಲ್ಲ.

ಡಾ। ಲಿವಿಂಗ್ ಸ್ಟೋನ್‌ರ ಕಾಳಜಿಗಳು ಸಾಹಸಪ್ರಿಯ ಅನ್ವೇಷಣೆಗಿಂತಲೂ ಹೆಚ್ಚಾಗಿ ಆಳವಾದ ನೈತಿಕತೆಯಿಂದ ಕೂಡಿದವಾಗಿದ್ದವು. ಲಿವಿಂಗ್ ಸ್ಟೋನ್ ಆಫ್ರಿಕದಲ್ಲಿ ಬೇರೆ ಅನ್ವೇಷಣೆಗಳಲ್ಲಿ ಮೊದಲಿಗನಾಗಿದ್ದರೂ ನೈಲ್ ನದೀ ಮೂಲದ ಅನ್ವೇಷಕರಲ್ಲಿ ಬರ್ಟನ್ ಮತ್ತು ಸ್ಪೀಕೇ ಎನ್ನುವವರೇ ಮೊದಲಿಗರು. ಬ್ರಿಟಿಷರ ವಸಾಹತುವಾಗಿದ್ದ ಭಾರತದಲ್ಲಿ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ಇವರಿಬ್ಬರೂ ಅನ್ವೇಷಕರಾಗಲು ಕಾರಣ, ರಾಯಲ್ ಜಿಯಾಗ್ರಾಫಿಕಲ್ ಸೊಸೈಟಿ ಎನ್ನುವ ಲಂಡನ್ನಿನ ಸಂಸ್ಥೆ ಬರ್ಟನ್‌ಗೆ ಟಾಂಗನೀಕಾ ಸರೋವರದ ಬಳಿ ಅನ್ವೇಷಣೆ ಮಾಡಿ ವರದಿ ಮಾಡುವಂತೆ ತಿಳಿಸಿತು. ಬರ್ಟನ್ ತನ್ನ ಸಹಾಯಕನಾಗಿ ಸ್ಪೀಕೆಯನ್ನು ಆರಿಸಿಕೊಂಡ. ಇಬ್ಬರು ಯೋಧರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು 1856ರಲ್ಲಿ ಜಾಂಜಿಬಾರ್‌ಗೆ ಬಂದಿಳಿದರು.

ಜಾಂಜಿಬಾರ್ ಆಫ್ರಿಕಾ ಭೂಖಂಡದಿಂದ ಕೇವಲ 20 ಮೈಲಿಗಳಷ್ಟು ದೂರವಿರುವ ಒಂದು ಚಿಕ್ಕ ದ್ವೀಪ. ಇದನ್ನು ಒಬ್ಬ ಸುಲ್ತಾನ ಆಳುತ್ತಿದ್ದ. ಆಫ್ರಿಕಾಖಂಡದಲ್ಲಿ ನಡೆಯುತ್ತಿದ್ದ ಎಲ್ಲ ಅನಾಚಾರ ದೌರ್ಜನ್ಯ ಮುಂತಾದವುಗಳಿಗೆ ಆಗ ಜಾಂಜಿಬಾರ್ ತವರುಮನೆಯಾಗಿತ್ತು. ಕೊಬ್ಬರಿ, ತೆಂಗಿನಕಾಯಿ, ಸಾಂಬಾರ ಪದಾರ್ಥಗಳು, ಅಮೂಲ್ಯವಾದ ಆನೆಯ ದಂತಗಳು, ಕಾಡು ಪ್ರಾಣಿಗಳ ಚರ್ಮ ಮುಂತಾದ ಅನೇಕ ವಸ್ತುಗಳ ವ್ಯಾಪಾರಕ್ಕಾಗಿ ಹಡಗುಗಳು ಜಾಂಜಿಬಾರ್‌ಗೆ ಬರುತ್ತಿದ್ದವು. ಅಷ್ಟಲ್ಲದೆ ಭಾರತಕ್ಕೆ ಬರುತ್ತಿದ್ದ ಹಡಗುಗಳೆಲ್ಲ ಜಾಂಜಿಬಾರಿನಲ್ಲಿ ತಂಗಿ ಅನಂತರ ಏಡನ್ ಮಾರ್ಗವಾಗಿ ಬೊಂಬಾಯಿ ತಲುಪುತ್ತಿದ್ದವು. ಆಗ ಸೂಯೆಜ್ ಕಾಲುವೆ ಇರಲಿಲ್ಲವಾದ ಕಾರಣ ಆಫ್ರಿಕಾದ ಗುಡ್ ಹೋಪ್ ಭೂಶಿರವನ್ನು ಬಳಸಿಕೊಂಡು ಹಡಗುಗಳು ಬರಬೇಕಿತ್ತು. ಹಾಗಾಗಿ ಜಾಂಜಿಬಾರ್‌ಗೆ ಪ್ರಮುಖ ಬಂದರಿನ ಸ್ಥಾನ ಲಭ್ಯವಾಗಿತ್ತು.

ಆದರೆ ಇದೆಲ್ಲಕ್ಕಿಂತ ಮುಖ್ಯವಾಗಿ ಜಾಂಜಿಬಾರ್ ಗುಲಾಮ ವ್ಯಾಪಾರದ ಮುಖ್ಯ ಕೇಂದ್ರವಾಗಿ ಕುಖ್ಯಾತವಾಗಿತ್ತು. ಪ್ರತಿವರ್ಷ ಇಲ್ಲಿ ಸುಮಾರು 40,000 ಜನ ಗುಲಾಮರನ್ನು ಅರಬ್ ಗುಲಾಮ ವ್ಯಾಪಾರಿಗಳು ಆಫ್ರಿಕದ ಒಳನಾಡುಗಳಿಂದ ಕಾಡುಮೃಗಗಳನ್ನು ಹಿಡಿದಂತೆ ಹಿಡಿದು ತಂದು ಹೊರದೇಶಗಳಿಗೆ ರಫ್ತು ಮಾಡುತ್ತಿದ್ದರು. ವಯಸ್ಕರೂ ದೃಢಕಾಯರೂ ಆದ ಗುಲಾಮರು ಸರಾಸರಿ 5 ಪೌಂಡು

This PDF was created using the Sonic PDF Creator.
To remove this watermark, please license this product at www.investintech.com

ಗಳಂತೆ ಮಾರಾಟ ಮಾಡಲ್ಪಡುತ್ತಿದ್ದರು. ಈ ಪಾಶವೀ ವ್ಯವಹಾರಗಳ ದೆಸೆಯಿಂದ ಇಡೀ ಜಾಂಜಿಬಾರ್ ದುಷ್ಕೃತ್ಯ ದುರಾಚಾರಗಳ ತವರುಮನೆಯಾಗಿತ್ತು. ಬರ್ಟನ್ ಮತ್ತು ಸ್ಪೀಕೇ ಜಾಂಜಿಬಾರಿಗೆ ಬಂದಿಳಿದದ್ದು ಸುಮಾರು 2 ವರ್ಷಗಳವರೆಗೆ ಸಾಗುವ ತಮ್ಮ ಅನ್ವೇಷಣೆಗೆ ಅಗತ್ಯವಾದ ಹೊರೆ ಹೊರುವ ಕೂಲಿಗಳನ್ನೂ ಕುದುರೆ ಎತ್ತು ಇತ್ಯಾದಿಗಳನ್ನೂ ಸಂಗ್ರಹಿಸಲು.

ಬರ್ಟನ್ ಕಂಡ ಗುಲಾಮ ವ್ಯಾಪಾರವನ್ನು ಆತ ಹೀಗೆ ಹೇಳಿದ್ದಾನೆ. ಜಾಂಜಿಬಾರ್ ಮಾರುಕಟ್ಟೆಗಳಲ್ಲಿ ಸಂಜೆಹೊತ್ತಿಗೆ ಗುಲಾಮ ವ್ಯಾಪಾರ ಆರಂಭವಾಗುತ್ತಿತ್ತು. ಇದನ್ನು "ಬಜಾರ್ ಖುಷ್'' ಎಂದು ಕರೆಯುತ್ತಿದ್ದರು. ಇದನ್ನು ನೋಡಿದರೆ ನಾವು ಯಾವುದೋ ಕಾಲದ ಲೋಕಕ್ಕೆ ಹೋದಂತೆನ್ನಿಸುತ್ತಿತ್ತು. ಸುಮಾರು 6 ವರ್ಷದಿಂದ ಹಿಡಿದು 60 ವರ್ಷಗಳವರೆಗಿನ ಹೆಣ್ಣು ಗಂಡು ಗುಲಾಮರುಗಳ ಸಾಲು ಸಾಲಾದ ಮೆರವಣಿಗೆಯೊಂದು ವ್ಯಾಪಾರ ಸ್ಥಳಕ್ಕೆ ಆಗಮಿಸುತ್ತಿತ್ತು. ಈ ಸಾಲಿನ ಅಕ್ಕಪಕ್ಕದಲ್ಲಿ ಚಾವಟಿ ಹಾಗೂ ಭರ್ಚಿಗಳನ್ನು ಹಿಡಿದ ಕೆಲವರು ಹಳೆಯ ಗುಲಾಮರುಗಳು ಕಾವಲು ಕಾಯುತ್ತಿದ್ದರು.

ವ್ಯಾಪಾರಿಗಳು ರಫ್ತು ಮಾಡಲು ತಮಗೆ ಬೇಕಾದ ಗುಲಾಮರುಗಳನ್ನು ಆರಿಸಿಕೊಳ್ಳುತ್ತಿದ್ದರು. ಗುಲಾಮರಿಗೆ ಮೈಗೆಲ್ಲಾ ತೆಂಗಿನ ಎಣ್ಣೆ ಬಳಿದಿರುತ್ತಿದ್ದರು. ಮುಖದ ಮೇಲೆ ಬಣ್ಣಬಣ್ಣದ ಪಟ್ಟೆಗಳಿರುತ್ತಿದ್ದವು. ಯೂರೋಪಿನ ದನದ ಮಾರುಕಟ್ಟೆ ಸಹ ಇಷ್ಟೊಂದು ಮೃಗೀಯವಾಗುತ್ತಿರಲಿಲ್ಲ. ಗುಲಾಮರ ಪರೀಕ್ಷೆಯಂತೂ ಅಸಹ್ಯವಾಗಿರುತ್ತಿತ್ತು. ಮೊದಲು ಗುಲಾಮರ ಬಾಯಿ ಮತ್ತು ಹಲ್ಲುಗಳನ್ನು ಪರೀಕ್ಷಿಸುತ್ತಿದ್ದರು. ಮಲಗಿದಾಗ ಗೊರಕೆ ಹೊಡೆಯುತ್ತಾನೆಯೇ ತಿಳಿದುಕೊಳ್ಳುತ್ತಿದ್ದರು. ಗೊರಕೆ ಹೊಡೆಯುತ್ತಾ ಮಲಗುವ ಗುಲಾಮನಿಗೆ ಅರ್ಧ ಬೆಲೆ. ಆನಂತರ ಮನುಷ್ಯನ ಪ್ರತಿಯೊಂದು ಅವಯವವನ್ನೂ ಒಂದು ಇಂಚೂ ಬಿಡದೆ ಪರೀಕ್ಷಿಸಲಾಗುತ್ತಿತ್ತು; ಮೊಲೆ ಲಿಂಗ ಯೋನಿ ಆಸನ ದ್ವಾರಗಳು ಪ್ರತಿಯೊಂದನ್ನು ಗುಲಾಮ ಸಾರ್ವಜನಿಕವಾಗಿ ಪ್ರದರ್ಶಿಸಬೇಕಿತ್ತು.

ಬ್ರಿಟಿಷ್ ಮತ್ತು ಫ್ರೆಂಚ್ ಸರ್ಕಾರಗಳು ಈ ಗುಲಾಮ ವ್ಯಾಪಾರವನ್ನು ನಿಷೇಧಿಸಿದ್ದವು. ಆದರೆ ಗುಲಾಮ ವ್ಯಾಪಾರವು ಅರಬರಿಗೆ ಎಷ್ಟೊಂದು ರಕ್ತಗತವಾಗಿತ್ತೆಂದರೆ ಅನೇಕ ಕಳ್ಳ ಮಾರ್ಗಗಳಲ್ಲಿ ಗುಲಾಮ ವ್ಯಾಪಾರವನ್ನು ಸಾಂಗವಾಗಿ ನಡೆಸುತ್ತಲೇ ಇದ್ದರು. ಸರ್ಕಾರಗಳ ಪ್ರತಿಬಂಧದಿಂದ ತೊಂದರೆಯಾದುದು ಎಂದರೆ ಅದು ಗುಲಾಮರಿಗೇ. ಹಡಗುಗಳ ಸರಕು ಸಾಗಣೆಯ ಒಳಕೋಣೆಗಳಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಪದಾರ್ಥಗಳನ್ನು ತುರುಕುವಂತೆ ಗುಲಾಮರನ್ನು ತುರುಕಿ ಒಯ್ಯುತ್ತಿದ್ದರು. ಆಫ್ರಿಕಾದ ಕಾಡಿನ ನಡುವಿನ ತಮ್ಮ ಹಳ್ಳಿಗಳಿಂದ ಸೆರೆಯಾಗಿ ಬಂದ ಇವರು ಮೊದಲೇ ಮೂಳೆ ಚಕ್ಕಳವಾಗಿರುತ್ತಿದ್ದರು. ಹಡಗಿನ ಒಳಕೋಣೆಗಳಲ್ಲಿ ಇದ್ದಲ್ಲೇ ಹೇಲು ಉಚ್ಚೆ ಮಾಡಿಕೊಂಡು ರೋಗರುಜಿನಗಳಿಗೆ ತುತ್ತಾಗಿ ಇವರು ಸಾಧಾರಣವಾಗಿ ಅರ್ಧಕರ್ಧ ಜನ ಸಾಯುವುದು ಖಚಿತ.

ಇದು ಬರ್ಟನ್ ಮತ್ತು ಸ್ಪೀಕೇ ಜಾಂಜಿಬಾರಿನಲ್ಲಿ ನೋಡಿದ ಪರಿಸ್ಥಿತಿ. ಆಫ್ರಿಕದ ಕಾಡು ಜನಗಳಿಂದ ಅನ್ವೇಷಕರನೇಕರು ಸತ್ತಿದ್ದರೆ ಅದಕ್ಕೆ ಮೂಲ ಕಾರಣ ಈ ಗುಲಾಮ ವ್ಯಾಪಾರಿಗಳ ದೌರ್ಜನ್ಯವೇ.

ಜಾಂಜಿಬಾರಿನಲ್ಲಿ ಬರ್ಟನ್ ಮತ್ತು ಸ್ಪೀಕೆ 170 ಜನ ಕೂಲಿಗಳನ್ನೂ, 2 ವರ್ಷಗಳಿಗಾಗುವಷ್ಟು ದಿನಸಿ ಇತ್ಯಾದಿಗಳನ್ನೂ ಸಂಗ್ರಹಿಸಿಕೊಂಡರು. ಅವರು ನೈಲ್‌ನದಿಯನ್ನು ಈಜಿಪ್ಟಿನ ಕಡೆಯಿಂದ ಅನುಸರಿಸಿಕೊಂಡು ಅದರ ಮೂಲ ಕಂಡುಹಿಡಿಯುವ ಬದಲು ಜಾಂಜಿಬಾರಿನ ಕಡೆಯಿಂದ ಅದರ ಉಗಮ ಸ್ಥಳವಾದ ಮಧ್ಯ ಆಫ್ರಿಕಾಕ್ಕೆ ನೇರವಾಗಿ ಹೋಗಲು ಹವಣಿಸಿದ್ದರು. ಅವರೊಡನೆ ಇದ್ದ ಇನ್ನು ಮೂವರು ಪ್ರಮುಖ ವ್ಯಕ್ತಿಗಳೆಂದರೆ ಜಾಂಜಿಬಾರಿನ ಸುಲ್ತಾನನ ಆಪ್ತ ಸಹಾಯಕನಾದ ಸೈಯ್ಯದ್ ಬಿನ್ ಸಲೀಂ ಎನ್ನುವವನು. ಈತ ದಾರಿ ತೋರಿಸು ವವನು. ಬಾಂಬೆ ಮತ್ತು ಮುಬಾರಕ್ ಎನ್ನುವ ಇಬ್ಬರು ಭಾರತೀಯ ಮೂಲ ದವರೂ ಇವರೊಡನೆ ಇದ್ದರು.

ಬರ್ಟನ್ ಅರ್‍ಯಾಬಿಕ್ ಹಾಗೂ ಇತರ ಭಾಷೆಗಳನ್ನು ಬಲ್ಲ ಒಳ್ಳೆಯ ಭಾಷಾ ಶಾಸ್ತ್ರಜ್ಞನಾಗಿದ್ದ. ಆಫ್ರಿಕಾದ ಬಗ್ಗೆ ಆತ ಬರೆದ ಪುಸ್ತಕಗಳೆಲ್ಲ ವೈಜ್ಞಾನಿಕ ನಿಷ್ಕೃಷ್ಟತೆಯಿಂದ ಕೂಡಿವೆ. ಆಫ್ರಿಕದ ನೈಲ್‌ನದಿ ಮೂಲವನ್ನು ಅನ್ವೇಷಿಸುವ ಮೊದಲೇ ಆತ ಅಬಿಸೀನಿಯ, ಅರೇಬಿಯ ಮತ್ತು ಭಾರತಗಳಲ್ಲಿ ಅನೇಕ ವೈಜ್ಞಾನಿಕ ಅನ್ವೇಷಣೆಯ ತಂಡಗಳ ನಾಯಕತ್ವವಹಿಸಿದ್ದ ಮನುಷ್ಯ. ಆದರೆ ಸ್ಪೀಕೇ ಮಾತ್ರ ಶಿಕಾರಿಯ ಹಂಬಲವುಳ್ಳ ಸಾಹಸಪ್ರಿಯನಾಗಿದ್ದ. ಆಫ್ರಿಕಾ ದಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸುವುದಕ್ಕಿಂತ ಮಿಗಿಲಾಗಿ ಆತನಿಗೆ ಸಾಹಸ ದಲ್ಲಿ ತೊಡಗುವ ಮಹತ್ವಾಕಾಂಕ್ಷೆ ಹೆಚ್ಚಾಗಿತ್ತು. ಇವರಿಬ್ಬರಲ್ಲೂ ಇರುವ ಈ ಮೂಲತಃ ವ್ಯತ್ಯಾಸವೇ ಕೊನೆಗೆ ನೈಲ್‌ನದಿ ಮೂಲದ ಬಗ್ಗೆ ಎರಡು ಭಿನ್ನ ವಾದದ ಸರಣಿಗಳೇಳಲು ಕಾರಣವಾಯಿತು. ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯಗಳ

This PDF was created using the Sonic PDF Creator.
To remove this watermark, please license this product at www.investintech.com

ಕೊನೆಗೆ ಹಲವಾರು ಅನ್ವೇಷಕ ತಂಡಗಳನ್ನು ಜಿಯಾಗ್ರಾಫಿಕಲ್ ಸೊಸೈಟಿ ಆಫ್ರಿಕಾಕ್ಕೆ ಕಳಿಸಲು ಕಾರಣವಾಯ್ತು.

1857 ಜೂನ್ 16 ರಂದು ಈ ಇಬ್ಬರೂ ತಮ್ಮ ತಂಡವನ್ನು ಕರೆದು ಕೊಂಡು ಜಾಂಜಿಬಾರ್‌ನಿಂದ ಮಧ್ಯ ಆಫ್ರಿಕಾದತ್ತ ಪ್ರಯಾಣ ಮಾಡಿದರು. ಅವರ ಉದ್ದೇಶ ಮಧ್ಯ ಆಫ್ರಿಕಾದ ತಬೋರಾ ಪಟ್ಟಣಕ್ಕೆ ಹೋಗುವುದು. ಆನಂತರ ಟಾಂಗನೀಕಾ ಸರೋವರದ ಬಳಿ ಇರುವ ಉಜಿಜಿ ಊರಿಗೆ ಹೋಗಿ ತಮ್ಮ ನೆಲೆ ಸ್ಥಾಪಿಸಿ ಅದರ ಸುತ್ತಮುತ್ತಲ ಭೌಗೋಳಿಕ ಲಕ್ಷಣಗಳನ್ನು ದಾಖಲೆ ಮಾಡಿ ಕೊಂಡು ವರದಿ ಮಾಡುವುದು. ಮತ್ತು ಟಾಂಗನೀಕಾ ಸರೋವರದಿಂದ ನೈಲ್‌ನದಿ ಉತ್ತರಾಭಿಮುಖವಾಗಿ ಹೊರಡುತ್ತದೆಯೋ ಇಲ್ಲವೋ ಪರೀಕ್ಷಿಸುವುದು. ಇವರು ತಮ್ಮ ಅನ್ವೇಷಣಾ ಯಾನದಲ್ಲಿ ಸಾಧಾರಣವಾಗಿ ಗುಲಾಮ ವ್ಯಾಪಾರಿಗಳು ಬಳಸು ತ್ತಿದ್ದ ದಾರಿಗಳನ್ನೇ ಬಳಸುತ್ತಿದ್ದರು. ಬೆಳಗಿನ ಝಾವ ಎದ್ದು ಬಿಸಿಲೇರುವವರೆಗೆ ಸಾಲಾಗಿ ಮೆರವಣಿಗೆ ಹೋದಂತೆ ಪ್ರಯಾಣ ಮಾಡುತ್ತಿದ್ದರು. ದಿನಕ್ಕೆ 20 ಮೈಲು ಗಳಿಗಿಂತ ಹೆಚ್ಚಿಗೆ ನಡೆಯಲಾಗುತ್ತಿರಲಿಲ್ಲ. ಜಾಂಜಿಬಾರ್‌ನಿಂದ ತಬೋರಾ 500 ಮೈಲುಗಳಷ್ಟು ದೂರದಲ್ಲಿತ್ತು. ದಾರಿಯುದ್ದಕ್ಕೂ ಇವರು ಆಫ್ರಿಕಾದ ಕಾಡು ಜನರ ಸರಹದ್ದಿನೊಳಗೆ ಹಾದು ಹೋಗುವಾಗ ಅವರ ನಾಯಕನಿಗೆ ಬಟ್ಟೆ, ಚಾಕು, ಕತ್ತರಿ ಇತ್ಯಾದಿ ಬಹುಮಾನಗಳನ್ನು ಕೊಟ್ಟು ಅವರ ಪ್ರಾಂತ್ಯಗಳಲ್ಲಿ ಪ್ರಯಾಣ ಮಾಡಲು ಅನುಮತಿ ಪಡೆದುಕೊಳ್ಳಬೇಕಾಗಿತ್ತು.

ಜಾಂಜಿಬಾರಿನಿಂದ ಹೊರಟ ಅನ್ವೇಷಕರ ತಂಡ ತಬೋರಾ ತಲುಪಲು ಸುಮಾರು ಏಳು ತಿಂಗಳ ಕಾಲ ಹಿಡಿಯಿತು. ಇವರ ಕೂಲಿಗಳಲ್ಲಿ ಅನೇಕರು ಕಾಯಿಲೆಯಿಂದ ಸತ್ತುಹೋಗಿದ್ದರು. ಕೆಲವರು ಅವರ ತಂಡವನ್ನು ತ್ಯಜಿಸಿ ಓಡಿ ಹೋಗಿದ್ದರು. ಬರ್ಟನ್ ಮತ್ತು ಸ್ಪೀಕೇ ಸಹ ಮಲೇರಿಯಾ ಮುಂತಾದ ರೋಗ ಗಳಿಗೆ ತುತ್ತಾಗಿದ್ದರು. ಅಂತೂ ಏಳು ತಿಂಗಳ ದುರ್ಗಮ ಯಾನದ ಆನಂತರ ಇಬ್ಬರೂ ಅನ್ವೇಷಕರೂ ತಬೋರಾ ಊರನ್ನು ತಲುಪಿದರು. ಅಲ್ಲಿದ್ದ ಅರಬ್ ವ್ಯಾಪಾರಿಗಳು ಈ ಬಿಳಿಯರನ್ನೂ ವಿಶ್ವಾಸದಿಂದ ಆದರಗಳಿಂದ ಬರಮಾಡಿ ಕೊಂಡರು. ಇದು ಇವರ ಯಾನದ ಮೊದಲ ಹಂತವಷ್ಟೆ. ಅಲ್ಲಿಂದ ಮುಂದೆ ಅವರು ಇನ್ನೂ ಹಲವಾರು ತಿಂಗಳು ಪ್ರಯಾಣ ಮಾಡಿ ಟಾಂಗನೀಕ ಸರೋವರದ ಬಳಿಯ ಉಜಿಜಿ ಊರನ್ನು ಸೇರಬೇಕಾಗಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ತಬೋರಾದಲ್ಲಿ ಬರ್ಟನ್ ಮತ್ತು ಸ್ಪೀಕೇ ತಮಗೆ ಅಗತ್ಯವಿದ್ದ ದವಸ ಧಾನ್ಯಗಳನ್ನು ಭರ್ತಿಮಾಡಿಕೊಂಡು ಇನ್ನಷ್ಟು ಕೂಲಿಯಾಳುಗಳನ್ನು ಒದಗಿಸಿ ಕೊಂಡರು. ತಬೋರದಲ್ಲಿ ಕೆಲಕಾಲ ವಿಶ್ರಮಿಸಿಕೊಂಡು ಅನಂತರ ಫೆಬ್ರವರಿ 13, 1858ರಲ್ಲಿ ಅಲ್ಲಿಂದ ಉಜಿಜಿ ಕಡೆಗೆ ಮುಂದುವರಿದರು. ಉಜಿಜಿ ತಲುಪಿದಾಗ ಸ್ಪೀಕೇ ದೃಷ್ಟಿಮಾಂದ್ಯದಿಂದ ತೊಂದರೆಗೊಳಗಾಗಿದ್ದ. ಬರ್ಟನನ ದವಡೆಯಲ್ಲಿ ವ್ರಣವಾಗಿ ಆತ ಬರಿಯ ನೀರಾಹಾರವನ್ನು ಮಾತ್ರ ಸೇವಿಸಬೇಕಾದ ಸ್ಥಿತಿಯಲ್ಲಿದ್ದ. ಆದರೂ ಟಾಂಗನೀಕಾ ಮಹಾಸರೋವರದ ಅಂಚನ್ನು ತಲುಪಿದಾಗ ಅವರಿಗಾದ ಆನಂದಕ್ಕೆ ಪಾರವೇ ಇರಲಿಲ್ಲ. ತಮ್ಮ ಗುರಿ ತಲುಪಿದ ಸಂತೋಷ ಅವರ ಅನಾರೋಗ್ಯವನ್ನು ಮರೆಸಿತ್ತು.

ಆದರೆ ಮುಂದೆ ಈ ಸರೋವರ ನೈಲ್‌ನದಿಯ ಉಗಮ ಸ್ಥಾನವೇ? ಎನ್ನುವ ಪ್ರಶ್ನೆ ಅವರ ಮುಂದೆ ಇತ್ತು. ಸ್ಪೀಕೇ ತನ್ನ ದೃಷ್ಟಿಮಾಂದ್ಯ ಸರಿಯಾ ಕೂಡನೆ ಅಲ್ಲಿನ ಕಾಡು ಜನರೊಡನೆ ಸಂಧಾನ ನಡೆಸಿ ಎರಡು ತೋಡು ದೋಣಿಗಳನ್ನು ತೆಗೆದುಕೊಂಡ. ಅದರಲ್ಲಿ ಇಬ್ಬರೂ ಟಾಂಗನೀಕಾ ಮಹಾ ಸರೋವರವನ್ನು ಅನ್ವೇಷಿಸಲು ಹೊರಟರು. ಆ ಸರೋವರದಿಂದ ಉತ್ತರ ದಿಕ್ಕಿನ ಕಡೆಗೆ ಹರಿಯುವ ಯಾವುದಾದರೊಂದು ನದಿ ಇದ್ದರೆ ಅದೇ ನೈಲ್‌ನದಿ ಇರಬಹು ದೆಂದು ಬರ್ಟನ್ ಯೋಚಿಸಿದ್ದ. ಆದರೆ ಅವರಿಗೆ ತೀರಾ ನಿರಾಸೆಯಾಯ್ತು. ಅವರು ದಕ್ಷಿಣದಲ್ಲಿ ನದಿಯೊಂದನ್ನು ಕಂಡರು. ಆದರೆ ಇದು ಸರೋವರದಿಂದ ಹರಿಯದೆ ಸರೋವರದೊಳಕ್ಕೇ ಹರಿದು ಬರುತ್ತಿತ್ತು. ಈ ನದಿಯ ಹೆಸರು "ರುಸೂಜಿ'' ಎಂದು. ಅಷ್ಟಲ್ಲದೆ ಇದು ಸಮುದ್ರಮಟ್ಟದಿಂದ 2535 ಅಡಿ ಎತ್ತರದಲ್ಲಿದೆ ಎಂದು ಬರ್ಟನ್ ಕಂಡುಕೊಂಡ.

ನೈಲ್‌ನದಿ 4125 ಮೈಲುಗಳಷ್ಟು ದೂರ ಮೆಡಿಟರೇನಿಯನ್ ಸಮುದ್ರ ದತ್ತ ಹರಿಯುತ್ತದೆ. ಸಮುದ್ರ ಮಟ್ಟದಿಂದ ಕೇವಲ 2535 ಅಡಿ ಎತ್ತರ ದಲ್ಲಿರುವ ಸರೋವರ ಒಂದರಿಂದ 4000 ಮೈಲುಗಳವರೆಗೆ ಹರಿಯುವ ನದಿ ಹುಟ್ಟುವುದು ಅಸಾಧ್ಯ ಎನ್ನಿಸಿತು ಬರ್ಟನ್‌ಗೆ. ಇಬ್ಬರೂ ತುಂಬ ಹತಾಶರಾದರು. ಮತ್ತೆ ಆ ತೋಡು ದೋಣಿಗಳಲ್ಲಿಯೇ ಅವರು ಉಜಿಜಿಗೆ ಹಿಂದಿರುಗಿದರು. ಜೂನ್ 1858 ರಲ್ಲಿ ಅವರು ಮತ್ತೆ ತಬೋರಾಗೆ ಹಿಂದಿರುಗಿದರು. ಈ ವೇಳೆಗಾಗಲೇ ಬರ್ಟನ್ ಜಿಯಾಗ್ರಾಫಿಕಲ್ ಸೊಸೈಟಿಗೆ ಬೇಕಾದ ಎಲ್ಲಾ ಭೂ ವಿವರಣೆಗಳನ್ನೂ

This PDF was created using the Sonic PDF Creator.
To remove this watermark, please license this product at www.investintech.com

ಟಾಂಗನೀಕಾ ಸರೋವರದ ಬಳಿ ತೆಗೆದುಕೊಂಡಿದ್ದ. ಅದನ್ನು ತಬೋರಾದಲ್ಲಿ ಪೂರ್ಣಗೊಳಿಸುತ್ತಾ ಇರಬೇಕಾದರೆ ಅವರೊಂದು ಸಮಾಚಾರ ಕೇಳಿದರು.

ತಬೋರಾಕ್ಕೆ ಉತ್ತರದಲ್ಲಿ ಸುಮಾರು 500 ಮೈಲುಗಳ ದೂರದಲ್ಲಿ ಇನ್ನೊಂದು ಟಾಂಗನೀಕಾಕ್ಕಿಂತಲೂ ವಿಸ್ತಾರವಾದ ಸರೋವರ ಇದೆ. ಇದನ್ನು "ನ್ಯಾನ್ಸಾ'' ಸರೋವರ ಎಂದು ಕರೆಯುತ್ತಾರೆ ಎಂದು ಅರಬ್ ವ್ಯಾಪಾರಿಗಳು ಈ ವಿಷಯವನ್ನು ಅನ್ವೇಷಕರಿಗೆ ತಿಳಿಸಿದರು. ಸ್ಪೀಕೆ ಕೂಡಲೇ ಇದನ್ನು ಅನ್ವೇಷಿಸ ಬೇಕೆಂದು ಪಟ್ಟುಹಿಡಿದ. ಆದರೆ ಬರ್ಟನ್ ತನ್ನ ವರದಿಗಳನ್ನು ಪೂರ್ಣಗೊಳಿಸ ಬೇಕಾದ್ದರಿಂದ ಸ್ಪೀಕೆಯೊಬ್ಬನೇ ಹೋಗಲು ಸೂಚಿಸಿದ. ಸ್ಪೀಕೆ ಹಿಂದಿರುಗುವ ವರೆಗೂ ತಾನು ತಬೋರಾದಲ್ಲೇ ಕಾಯುವುದಾಗಿ ತಿಳಿಸಿದ. ಸ್ಪೀಕೆ ಹಲವರು ಕೂಲಿಗಳನ್ನು ತನ್ನೊಡನಿದ್ದ ಬಾಂಬೆಯನ್ನೂ ಕರೆದುಕೊಂಡು ನ್ಯಾನ್ಸಾ ಸರೋವರದ ಕಡೆಗೆ ಪ್ರಯಾಣ ಬೆಳೆಸಿಯೇ ಬಿಟ್ಟ.

ತಬೋರಾದಿಂದ ಉತ್ತರಕ್ಕೆ ನೂರಾರು ಮೈಲುಗಳವರೆಗೆ ಬರೇ ಕುರುಚಲು ಕಾಡು. ಮೈಲು ಮೈಲುಗಳು ಸವೆಸಿದಂತೆ ಒಂದೇ ರೀತಿಯ ಕುರುಚಲು ಕಾಡು ದಿಗಂತದವರೆಗೆ ಹಬ್ಬಿರುತ್ತದೆ. ಸ್ಪೀಕೆ ತನ್ನ ತಂಡದೊಡನೆ ಒಂದೇಸಮ ಮುಂದುವರಿದ. ನೂರಾರು ಮೈಲು ಕ್ರಮಿಸಿದ ನಂತರ ಇದ್ದಕ್ಕಿದ್ದಂತೆ ಸುತ್ತಲಿನ ಭೂ ಲಕ್ಷಣ ಬದಲಾಗತೊಡಗಿತು. ಹಸುರಾದ ಹುಲ್ಲುಗಾವಲುಗಳೂ ಚಿಕ್ಕ ಪುಟ್ಟ ಗುಡ್ಡಗಳೂ ಕಾಣತೊಡಗಿದವು. ಜೊತೆಗೆ ಸಮುದ್ರಮಟ್ಟದಿಂದ ಮೇಲೇರ ತೊಡಗಿದ್ದರಿಂದ ಹವೆ ತಂಪಾಗತೊಡಗಿತು. ನ್ಯಾನ್ಸಾ ಸರೋವರ ಹತ್ತಿರ ಹತ್ತಿರ ವಾಗುತ್ತಿದ್ದಂತೆಯೆ ಕುರುಚಲು ಕಾಡು ದಟ್ಟವಾಗುತ್ತ ದಟ್ಟವಾಗುತ್ತಾ ನಿತ್ಯಹರಿದ್ವರ್ಣದ ದಟ್ಟಡವಿಗೆ ಎಡೆ ಮಾಡಿಕೊಟ್ಟಿತು. ಕೊನೆಗೊಮ್ಮೆ ನ್ಯಾನ್ಸಾ ಸರೋವರವೇ ಸ್ಪೀಕೇಗೆ ದೃಗ್ಗೋಚರವಾಯ್ತು.

ಹಳದಿಯ ಮರಳಿನ ತೀರಗಳಿಂದ ಸುತ್ತಲ್ಲ ಕವಿದಿದ್ದ ದಟ್ಟಡವಿ ಗಳಿಂದ ನ್ಯಾನ್ಸಾ ಸರೋವರ ಕಗ್ಗತ್ತಲೆಯ ಖಂಡ ಆಫ್ರಿಕದ ಗಾಢ ರಹಸ್ಯಗಳಿಗೆ ಪ್ರತಿಮೆಯಾಗಿ ಕಂಡಿತು. ಅದನ್ನು ಸರೋವರವೆಂದು ಕರೆಯುವುದು ಸಾಧ್ಯವೇ ಇರಲಿಲ್ಲ. ಒಳನಾಡಿನ ಸಮುದ್ರದಂತಿತ್ತು. ಸಮುದ್ರದಂತೆಯೆ ಅಲೆಗಳು ಬಂದು ತೀರಕ್ಕೆ ಅಪ್ಪಳಿಸುತ್ತಿತ್ತು. ಸ್ಪೀಕೆ ನೂರಾರು ಮೈಲಿ ನಡೆನಡೆದು ಬಂದು ಈ ಮಹಾಸರೋವರದ ದಡದಲ್ಲಿ ನಿಂತಾಗ ತನ್ನ ದಣಿವನ್ನೆಲ್ಲಾ ಮರೆಸುವಂಥ ದಿವ್ಯಸ್ಫೂರ್ತಿ ಅವನಿಗೆ ಉಂಟಾಯ್ತು. ಅವನ ಮಾತಿನಲ್ಲೆ ಹೇಳುವುದಾದರೆ—

This PDF was created using the Sonic PDF Creator.
To remove this watermark, please license this product at www.investintech.com

"ನೈಲ್‌ನಂಥ ಮಹಾನದಿಯೊಂದಕ್ಕೆ ಜನ್ಮ ನೀಯಲು ಇಂಥದ್ದೊಂದು ಸರೋವರದಿಂದ ಮಾತ್ರ ಸಾಧ್ಯ. ಇದೇ ನೈಲ್ ನದಿಯ ಉಗಮ ಸ್ಥಾನ ಎಂದು ನನಗೆ ನಿಸ್ಸಂಶಯವಾಗಿ ಅನ್ನಿಸತೊಡಗಿತು. ಅರಬರು ಹೇಳಿದ್ದ ವದಂತಿಗಳು ಕೊನೆಗೂ ನನ್ನ ಕಣ್ಣೆದುರಿಗೇ ಸತ್ಯವಾಯ್ತು. ಆಚೆ ದಡಗಳು ಕಣ್ಣಿಗೇ ಕಾಣದ ಈ ಸರೋವರದ ಅನಂತ ವಿಸ್ತಾರವೇ ನೈಲ್ ನದಿಯ ಮೂಲ. ನೈಲ್ ನದೀ ಮೂಲದ ವಾಗ್ವಾದ ಇನ್ನು ಮುಗಿದಂತೆಯೇ" ಎಂದು ಸ್ಪೀಕೇ ಯೋಚಿಸಿದ.

ಸ್ಪೀಕೇ ನ್ಯಾನ್ಸಾ ಸರೋವರದ ಬಳಿ ತೆಗೆದುಕೊಂಡ ತೀರ್ಮಾನ ಅವಸರದ, ಅಜಾಗರೂಕತೆಯ, ಭಾವೋದ್ವೇಗದ ತೀರ್ಮಾನವಾಗಿತ್ತು. ಸ್ಪೀಕೆಯ ಈ ಅವಸರದ ಹೆಜ್ಜೆಯಿಂದಾಗಿ ಮುಂದೆ ಅನೇಕ ದಶಕಗಳವರೆಗೆ ನೈಲ್‌ನದಿ ಒಂದು ಮುಗಿಯದ ಚರ್ಚೆಯ ವಸ್ತುವಾಗಿ ಹೋಯ್ತು.

ಅಲ್ಲಿಂದ ಸ್ಪೀಕೆ ನೇರವಾಗಿ ತಬೋರಾ ಕಡೆಗೆ ಹಿಮ್ಮರಳಿದ. ನೈಲ್ ನದೀಮೂಲವನ್ನು ತಾನು ಕಂಡು ಹಿಡಿದನೆಂದು ಅವನು ಬರ್ಟನ್‌ಗೆ ತಿಳಿಸ ಬೇಕಿತ್ತು. ಮೂರೇ ವಾರಗಳಲ್ಲಿ ಆತ ತಬೋರಾಗೆ ಹಿಂದಿರುಗಿ, ಬರ್ಟನ್‌ಗೆ ತಾನು ನೈಲ್ ನದಿಯ ಮೂಲವನ್ನು ಕಂಡುಹಿಡಿದೆನೆಂದು ಹೇಳಿಕೊಂಡ.

ಬರ್ಟನ್ ಸ್ಪೀಕೇ ಹೇಳಿದುದನ್ನೆಲ್ಲಾ ತಾಳ್ಮೆಯಿಂದ ಕೇಳಿದ. ವಿದ್ವಾಂಸನಾದ ಬರ್ಟನ್‌ಗೆ ಸ್ಪೀಕೆಯ ವರದಿಯು ಕೇವಲ ಹುಡುಗಾಟಿಕೆಯಂತೆ ಕಂಡಿತು. ಮೊದಲನೆಯದಾಗಿ ಸ್ಪೀಕೆ ಆ ಸರೋವರಕ್ಕೆ ನದಿಗಳಿವೆಯೇ, ಪರೀಕ್ಷಿಸಿರಲಿಲ್ಲ. ಆ ಸರೋವರ ಸಮುದ್ರ ಮಟ್ಟದಿಂದ ಎಷ್ಟು ಎತ್ತರದಲ್ಲಿದೆ ಎಂದು ತಾಳೆ ನೋಡಿರಲಿಲ್ಲ. ಆ ಸರೋವರಕ್ಕೆ ಎಲ್ಲಿಂದ ನೀರು ಬರುತ್ತದೆಂದು ತಿಳಿದುಕೊಂಡಿರಲಿಲ್ಲ. ಸ್ಪೀಕೆ ತಬೋರಾದಿಂದ ಉತ್ತರಕ್ಕೆ ಅಗಾಧವಾದ ಸರೋವರ ಇದೆ ಎನ್ನುವುದನ್ನು ಮಾತ್ರ ಕಂಡುಕೊಂಡಿದ್ದ ಅಷ್ಟೆ! ಬರ್ಟನ್ ಸ್ಪೀಕೆಯ ತೀರ್ಮಾನಗಳನ್ನು ನೇರವಾಗಿ ವಿರೋಧಿಸಿದ. ಜೊತೆಗೆ ನೈಲ್‌ನದಿಯ ಮೂಲ ಆದಾಗಲು ಸಾಧ್ಯವೇ ಇಲ್ಲವೆಂದೂ, ಅದು ಟಾಂಗನೀಕಾ ಸರೋವರದ ಬಳಿಯೇ ಎಲ್ಲೋ ಇರಬಹುದಾದ ಚಂದ್ರ ಪರ್ವತಗಳೆಂದು ಕರೆಯಲ್ಪಡುವ ಕೆನ್ಯಾ ಮತ್ತು ಕಿಲಿಮಂಜಾರೋ ಪರ್ವತಗಳ ಬಳಿ ಇರಬೇಕೆಂದೂ ಆತ ಟಾಂಗನೀಕಾ ಸರೋವರದ ಜಲಾನಯನ ಪ್ರದೇಶವನ್ನೇ ಪ್ರತಿಪಾದಿಸಿದ.

ಇಬ್ಬರೂ ಭಿನ್ನಾಭಿಪ್ರಾಯಗಳೊಡನೆ ಯೂರೋಪಿನ ಕಡೆಗೆ ಹೊರಟರು. ಜಾಂಜಿಬಾರಿನಿಂದ 25 ದಿನಗಳ ತರುವಾಯ ಇಬ್ಬರೂ ಏಡನ್ ತಲುಪಿದರು.

This PDF was created using the Sonic PDF Creator.
To remove this watermark, please license this product at www.investintech.com

ಬರ್ಟನ್ ಏಡನ್ನಿನಲ್ಲಿ ವಿಶ್ರಾಂತಿ ತಗೊಳ್ಳುತ್ತಿರಬೇಕಾದರೆ HMS ಫ್ಯೂರಿಯಸ್ ಎನ್ನುವ ಹಡಗೊಂದು ಇಂಗ್ಲೆಂಡಿನತ್ತ ಹೊರಟಿತ್ತು. ಸ್ಪೀಕೇ ಈ ಹಡಗಿನಲ್ಲಿ ಇಂಗ್ಲೆಂಡಿಗೆ ಹೋಗುವುದೆಂದೂ ಬರ್ಟನ್ ತನ್ನ ಕಾಯಿಲೆಗಳಿಂದ ಕೊಂಚ ಚೇತರಿಸಿಕೊಂಡ ನಂತರ ಬರುವುದೆಂದೂ ತೀರ್ಮಾನಿಸಲಾಯಿತ್ತು. ಸ್ಪೀಕೆ ಇಂಗ್ಲೆಂಡಿನ ಹಡಗು ಹತ್ತಿದ.

ಸ್ಪೀಕೇ ಇಂಗ್ಲೆಂಡಿಗೆ ಹೊರಟು ನಿಂತಿರಬೇಕಾದರೆ ಬರ್ಟನ್ ಸ್ಪೀಕೇಗೆ ತಾನು ಬರುವವರೆಗೂ ಸ್ಪೀಕೇ ಇಂಗ್ಲೆಂಡಿನಲ್ಲಿ ತಮ್ಮ ಅನ್ವೇಷಣೆಯ ಬಗ್ಗೆ ಏನನ್ನೂ ಹೇಳಬಾರದೆಂದೂ, ತಮ್ಮ ಅಭಿಪ್ರಾಯಗಳನ್ನೆಲ್ಲಾ ತಾವು ಚರ್ಚಿಸಿ ತೀರ್ಮಾನಿಸಿದನಂತರ ಅದನ್ನು ಬಹಿರಂಗಪಡಿಸುವುದೆಂದೂ ಹೇಳಿ ಸ್ಪೀಕೆಯಿಂದ ಭಾಷೆ ತೆಗೆದುಕೊಂಡ.

ಸ್ಪೀಕೆ ಹಡಗು ಹತ್ತುವಾಗ ಇದಕ್ಕೆ ಸಮ್ಮತಿಸಿ ತಾನೇನೂ ಹೇಳಿಕೆ ಕೊಡುವುದಿಲ್ಲೆಂದು ಭಾಷೆ ಕೊಟ್ಟ, ಆದರೆ ಸ್ಪೀಕೇ ಹಾಗೇ ನಡೆದುಕೊಂಡಿದ್ದರೆ ಚೆನ್ನಾಗಿತ್ತು. ಸ್ಪೀಕೇ ತನ್ನ ಮಾತಿಗೆ ತಪ್ಪಿದ. ಆದರಿಂದಲೇ ನೈಲ್‌ನದಿ ಮುಂದೆ ವಿವಾದಗಳ ಸುಳಿಗೆ ಸಿಕ್ಕಿಕೊಂಡಿತು.

This PDF was created using the Sonic PDF Creator.
To remove this watermark, please license this product at www.investintech.com

# 3. ಕಗ್ಗತ್ತಲ ರಾಜ್ಯಗಳಲ್ಲಿ
## (ಖರಾಗ್ವೆ, ಬುಗಾಂಡಾ, ಬೊನ್ಯೋರೋ)

ಸ್ಪೀಕೆ, ಬರ್ಟನ್ ಇಂಗ್ಲೆಂಡ್ ತಲುಪುವುದಕ್ಕಿಂತ 15 ದಿನ ಮೊದಲು ಇಂಗ್ಲೆಂಡ್ ತಲುಪಿದ. ಇವರ ಅನ್ವೇಷಣ ಕಥನ ಕೇಳಲು ಜನ ಇಂಗ್ಲೆಂಡಿನಲ್ಲಿ ಕುತೂಹಲದಿಂದ ಕಾದಿದ್ದರು. ಲಂಡನ್ ಜಿಯೋಗ್ರಾಫಿಕಲ್ ಸೊಸೈಟಿ ಬರ್ಟನ್‌ಗೆ ಟಾಂಗನೀಕ ಸರೋವರದ ಭೂವಿವರಣೆಯನ್ನು ಅನ್ವೇಷಿಸಿ ವರದಿ ಮಾಡಲು ಮಾತ್ರ ತಿಳಿಸಿದ್ದರೇ ಹೊರತು ನೈಲ್ ನದೀ ಮೂಲದ ಬಗ್ಗೆ ಏನನ್ನೂ ಪ್ರಸ್ತಾಪಿಸಿರಲಿಲ್ಲ. ಆದ್ದರಿಂದ ಸ್ಪೀಕೆ ತಾನು ಟಾಂಗನೀಕ ಸರೋವರದ ಬಗ್ಗೆ ಏನೂ ಪ್ರಸ್ತಾಪಿಸದಿದ್ದರೆ ಸಾಕು ಎಂದು ಯೋಚಿಸಿ ತಾನು ನೈಲ್‌ನದೀ ಮೂಲವೆಂದು ಭಾವಿಸಿರುವ ಒಂದು ಮಹಾ ಸರೋವರವನ್ನು ನೋಡಿದ್ದೇನೆಂದು ಪ್ರಕಟಿಸಿದ. ಇದು ಕೇವಲ ತನ್ನ ವೈಯಕ್ತಿಕ ವಿಷಯವೇ ಹೊರತು ತಮ್ಮ ಅಧಿಕೃತ ಅನ್ವೇಷಣೆಗೂ ಇದಕ್ಕೂ ಏನೂ ಸಂಬಂಧವಿಲ್ಲ ಎಂದು ಸ್ಪೀಕೆ ತಿಳಿದ.

ಸ್ಪೀಕೇ ನೇರವಾಗಿ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿಯ ಅಧ್ಯಕ್ಷರಾದ ಸರ್ ರಾಡ್ರಿಕ್ ಮರ್ಕಿಸನ್‌ರವರ ಬಳಿಗೆ ಹೋಗಿ ತಾನು ನೈಲ್‌ನದಿ ಮೂಲವನ್ನು ಕಂಡುಹಿಡಿದಿರುವುದಾಗಿ ತಿಳಿಸಿದ. ಸ್ಪೀಕೆ ಜಿಯೋಗ್ರಾಫಿಕಲ್ ಸೊಸೈಟಿಯ ಸದಸ್ಯರುಗಳಿಗೆ ಒಂದು ಉಪನ್ಯಾಸ ಕೊಡಬೇಕೆಂದು ಅಧ್ಯಕ್ಷರಿಂದ ಆಹ್ವಾನ ಬಂತು. ಬರ್ಲಿಂಗ್‌ಟನ್ ಹೌಸಿನಲ್ಲಿ ನೆರೆದಿದ್ದ ಅಧಿವೇಶನಕ್ಕೆ ಸ್ಪೀಕೆ ತಾನು ಕಂಡ ಮಹಾ ಸರೋವರವನ್ನೂ ಅದೇ ನೈಲ್ ನದೀ ಮೂಲವಿರಬೇಕೆಂಬ ತನ್ನ

This PDF was created using the Sonic PDF Creator.
To remove this watermark, please license this product at www.investintech.com

ನಂಬಿಕೆಯನ್ನೂ ವಿವರಿಸಿದ. ಈ ತರುಣ ಅನ್ವೇಷಕ ಒಂದು ಅತ್ಯಂತ ಮುಖ್ಯವಾದ ಸಂಶೋಧನೆ ಮಾಡಿದ್ದಾನೆಂದೂ, ಇದನ್ನು ಕೂಡಲೇ ಸವಿವರವಾಗಿ ಅನ್ವೇಷಿಸಲು ಮತ್ತೊಂದು ತಂಡವನ್ನು ಆಫ್ರಿಕಕ್ಕೆ ಕಳಿಸಬೇಕೆಂದೂ ಸೊಸೈಟಿ ತೀರ್ಮಾನಿಸಿತು. ಇಡೀ ಇಂಗ್ಲೆಂಡಿನ ಪತ್ರಿಕೆಗಳೆಲ್ಲ ದಪ್ಪಕ್ಷರದಲ್ಲಿ ಸ್ಪೀಕೆಯ ಅನ್ವೇಷಣೆಯನ್ನು ಪ್ರಧಾನವಾಗಿ ಪ್ರಕಟಿಸಿದವು. ಯೂರೋಪಿನಲ್ಲಿ ಇದ್ದಕ್ಕಿದಂತೆ ಸ್ಪೀಕೆ ಹೆಸರುವಾಸಿಯಾದ.

ಜಿಯೋಗ್ರಾಫಿಕಲ್ ಸೊಸೈಟಿ ಸ್ಪೀಕೆಗೆ 2500 ಪೌಂಡುಗಳನ್ನು ಮಂಜೂರು ಮಾಡಿ ಇನ್ನೊಂದು ಅನ್ವೇಷಕ ತಂಡ ಕರೆದೊಯ್ಯುವಂತೆ ಕೇಳಿತು. ಸ್ಪೀಕೆ ಕೂಡಲೇ ಇನ್ನೊಮ್ಮೆ ಆಫ್ರಿಕಕ್ಕೆ ಅನ್ವೇಷಣಾ ಯಾನ ಕೈಗೊಳ್ಳಲು ತುರಾತುರಿಯ ಸಿದ್ಧತೆ ಆರಂಭಿಸಿದ. ನ್ಯಾನ್ಸಾ ಸರೋವರದ ಉತ್ತರ ತೀರದಲ್ಲೆಲ್ಲೋ ಈ ಸರೋವರಕ್ಕೆ ಹೊರದಾರಿಗಳಿರಬೇಕೆಂದೂ ಆದ್ದರಿಂದ ಪಶ್ಚಿಮದ ಕಡೆಯಿಂದ ಸುತ್ತಿ ಬಂದರೆ ಇದು ಸಿಗುತ್ತದೆಂದೂ ಸ್ಪೀಕೆ ಯೋಚಿಸಿದ. ಅಲ್ಲಿಂದ ಮುಂದೆ ಅದೇ ನದಿಯನ್ನು ಹಿಂಬಾಲಿಸಿ ಅವನು ಈಜಿಪ್ಟಿಗೆ ಬಂದು ಬಿಡಬಹುದೆಂದು ಯೋಚಿಸಿದ.

ಕಗ್ಗತ್ತಲೆಯ ಖಂಡದ ಈ ರಹಸ್ಯಮಯ ಮಧ್ಯ ಭಾಗವನ್ನು ಈ ಸಾರಿ ಸಂಪೂರ್ಣ ಅನ್ವೇಷಿಸಿ ಬಹಿರಂಗಗೊಳಿಸುವುದಾಗಿ ಹೇಳಿಕೊಂಡ ಸ್ಪೀಕೆ ಬಗ್ಗೆ ಇಂಗ್ಲೆಂಡಿನಲ್ಲಿ ಕೋಲಾಹಲವೇ ಉಂಟಾಯ್ತು.

ಈ ನಡುವೆ ಬರ್ಟನ್ ಖಾಯಿಲೆಯಿಂದ ಸುಸ್ತಾಗಿ 15 ದಿನಗಳ ತರುವಾಯ ಇಂಗ್ಲೆಂಡಿನ ತೀರದಲ್ಲಿ ಇಳಿದಾಗ ಅವನನ್ನು ಯಾರೂ ಕೇಳುವವರೇ ಇರಲಿಲ್ಲ. ಆತನ ಅಮೂಲ್ಯವಾದ ಮತ್ತು ಕರಾರುವಕ್ಕಾದ ಟಾಂಗನೀಕಿಯ ಸರೋವರದ ವರದಿಯ ಬಗ್ಗೆ ಯಾರೂ ಯಾವುದೇ ತರದ ಕುತೂಹಲವನ್ನು ವ್ಯಕ್ತಪಡಿಸಲಿಲ್ಲ. ಸ್ಪೀಕೆ ಹೊರಟಿದ್ದ ಎರಡನೆಯ ಅನ್ವೇಷಣಾ ಯಾನಕ್ಕೆ ಅವನನ್ನು ಆಮಂತ್ರಿಸಲೂ ಇಲ್ಲ. ಸ್ಪೀಕೇ ಈ ಸಾರಿ ತನ್ನ ಸಂಗಾತಿಯಾಗಿ ಕ್ಯಾಪ್ಟನ್ ಜೇಮ್ಸ್ ಗ್ರಾಂಟ್ ಎನ್ನುವ ತನ್ನ ಒಡನಾಡಿಯಾದ ಇನ್ನೊಬ್ಬ ಮಿಲಿಟರಿ ಅಧಿಕಾರಿಯನ್ನು ಆಯ್ಕಮಾಡಿದ.

ಎರಡನೆಯ ಅನ್ವೇಷಣೆಯ ತಂಡವನ್ನು ಸ್ಪೀಕೆ ಮತ್ತು ಗ್ರಾಂಟ್ ತಮ್ಮ ನಾಯಕತ್ವದಲ್ಲಿ ನಿರ್ವಹಿಸಿದರು. ಬರ್ಟನ್ ಸ್ಪೀಕೇ ವಿಶ್ವಾಸದ್ರೋಹಿ ಎಂದು ಪತ್ರಿಕೆಗಳಲ್ಲಿ ಜರೆದು ಸ್ಪೀಕೆ ಕಂಡ ಸರೋವರ ನೈಲ್‌ನದೀ ಮೂಲವಾಗಲು

This PDF was created using the Sonic PDF Creator.
To remove this watermark, please license this product at www.investintech.com

ಸಾಧ್ಯವೇ ಇಲ್ಲವೆಂದೂ ವಿವಾದವನ್ನೆಬ್ಬಿಸಿದ. ಇಂಗ್ಲೆಂಡಿನ ವಿದ್ವಾಂಸರ ವಲಯಗಳಲ್ಲಿ ಟಾಂಗನೀಕಿಯ ಸರೋವರದ ಪರವಾಗಿ ಒಂದಷ್ಟು ಜನ, ನ್ಯಾನ್ಸಾ ಸರೋವರದ ಪರವಾಗಿ ಒಂದಷ್ಟು ಜನ ವಕಾಲತ್ತು ವಹಿಸಿ ಜಗಳವಾಡ ತೊಡಗಿದರು.

ಸ್ಪೀಕ ಮತ್ತು ಗ್ರಾಂಟ್ ಇಬ್ಬರೂ ಹಿಂದಿನಂತೆಯೆ ಜಾಂಜಿಬಾರಿಗೆ ಬಂದಿಳಿದರು. ಅವರ ಹಳೆಯ ಹಿಂಬಾಲಕರಾದ ಮುಬಾರಕಿ ಮತ್ತು ಬಾಂಬೇ ಜಾಂಜಿಬಾರಿನಲ್ಲೇ ಇದ್ದರು. ಅವರನ್ನೂ ಅಗತ್ಯವಿದ್ದ ಕೂಲಿಗಳನ್ನೂ ತೆಗೆದುಕೊಂಡು ಇಬ್ಬರೂ ತಡಮಾಡದೆ ತಬೋರಾ ದಾರಿ ಹಿಡಿದು ತಬೋರಾ ತಲುಪಿದರು. ತಬೋರಾದಿಂದ ಪಶ್ಚಿಮಕ್ಕೆ ಅವರು ಈ ಬಾರಿ ಹೋಗಬೇಕಾಗಿತ್ತು. ಹೋದಬಾರಿ ಸ್ಪೀಕ ತಬೋರಾದಿಂದ ಉತ್ತರಕ್ಕೆ ಹೋಗಿ ನ್ಯಾನ್ಸಾ ಸರೋವರದ ದಕ್ಷಿಣ ಭಾಗವನ್ನು ತಲುಪಿದ್ದ. ಆದರೆ ಈ ಸಾರಿ ಅವರು ಪಶ್ಚಿಮದಿಂದ ಆ ಸರೋವರವನ್ನು ಬಳಸಿ ಉತ್ತರಕ್ಕೆ ಹೋಗಿ ಆ ಸರೋವರದಿಂದ ಹೊರಕ್ಕೆ ಹರಿಯುವ ನದಿಗಳು ಯಾವುವಾದರೂ ಇವೆಯೆ ನೋಡಬೇಕಿತ್ತು.

ಸ್ಪೀಕ ಮತ್ತು ಗ್ರಾಂಟ್ ಹೋಗಲಿದ್ದ ಪ್ರದೇಶನ್ನು ಈಗ ಉಗಾಂಡ ಎಂದು ಕರೆಯುತ್ತಾರೆ. ಆಫ್ರಿಕಾದ ಈ ಭಾಗದ ಬಗ್ಗೆ ಆಗ ಹೊರಜಗತ್ತಿಗೆ ಏನೂ ತಿಳಿದಿರಲಿಲ್ಲ. ಸ್ಪೀಕ ನ್ಯಾನ್ಸಾ ಸರೋವರವನ್ನು ಸುತ್ತುವರಿದು ಈ ಭಾಗಕ್ಕೆ ಹೋದಾಗ ಅಲ್ಲಿ ಮೂರು ಪುಟ್ಟ ಪುಟ್ಟ ರಾಜ್ಯಗಳಿದ್ದವು. ಬುನ್ಯೋರೋ, ಬುಗಾಂಡಾ ಮತ್ತು ಖರಾಗ್ವೆ ಇವು ಮೂರೂ ಈ ರಾಜ್ಯಗಳ ಹೆಸರು. ಈ ರಾಜ್ಯಗಳನ್ನು ಅಲ್ಲಿ ಸ್ಥಾಪಿಸಿದ ಜನ ಅಲ್ಲಿನ ಆಫ್ರಿಕಾದ ಕಾಡು ಮನುಷ್ಯರಲ್ಲ. ಬೇರೆಲ್ಲಿಂದಲೋ ಬಂದ ಪಶುಪಾಲಕರಾಗಿದ್ದ ಜನಾಂಗ ಬಂದು ಅಲ್ಲಿ ನೆಲೆಸಿ ಈ ರಾಜ್ಯಗಳನ್ನು ಸ್ಥಾಪಿಸಿದ್ದರು.

ಈ ಮೂರು ರಾಜ್ಯಗಳಲ್ಲಿಯೂ ಜನ ಆಫ್ರಿಕದ ಮಿಕ್ಕೆಡೆಯಲ್ಲಿ ಇದ್ದಷ್ಟು ಅನಾಗರಿಕರಾಗಿರದೆ ಅನೇಕ ವಿಷಯಗಳಲ್ಲಿ ಕೊಂಚ ನಾಗರಿಕರೇ ಆಗಿದ್ದರು. ಅವರು ಸುಂದರವಾದ ಹುಲ್ಲಿನ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು. ಮರದ ತೊಗಟೆಯ ನೂಲಿನಿಂದ ಬಟ್ಟೆಗಳನ್ನು ನೇಯ್ದು ಧರಿಸುತ್ತಿದ್ದರು. ಚಾಪೆಗಳನ್ನೂ, ಚೀಲಗಳನ್ನೂ ನೇಯುತ್ತಿದ್ದರು. ಪಶುಪಾಲನೆ ಮತ್ತು ವ್ಯವಸಾಯ ಇವರಿಗೆ ಗೊತ್ತಿತ್ತು. ಆದ್ದರಿಂದ ಈ ಮೂರು ರಾಜ್ಯಗಳನ್ನೂ ಅರೆನಾಗರಿಕ ರಾಜ್ಯಗಳೆಂದು ಕರೆಯಬಹುದಾಗಿತ್ತು. ಇಷ್ಟಾದರೂ ಇವರಿಗೆ ಹೊರಗಿನ ನಾಗರಿಕ

This PDF was created using the Sonic PDF Creator.
To remove this watermark, please license this product at www.investintech.com

ಜಗತ್ತಿನ ಸಂಪರ್ಕ ಇರಲೇ ಇಲ್ಲ. ಸ್ಪೀಕ ಮತ್ತು ಗ್ರ್ಯಾಂಟ್ ಇಬ್ಬರೂ ಇಲ್ಲಿಗೆ ಕಾಲಿರಿಸಿದ ಮೊದಲ ನಾಗರಿಕ ಜನಗಳಾಗಿದ್ದರು.

ಈ ಮೂರು ರಾಜ್ಯಗಳಲ್ಲಿ ಬುಗಾಂಡ ರಾಜ್ಯವೇ ಹೆಚ್ಚು ಸಮೃದ್ಧವಾಗಿದ್ದುದು. ಈ ರಾಜ್ಯವನ್ನು ಮಟೂಸಾ ಎನ್ನುವ ದೊರೆ ಆಳುತ್ತಿದ್ದ. ಮಟೂಸಾನಿಗೆ ಒಂದು ರಾಜಧಾನಿ ಇತ್ತು. ಅವನಿಗೆ ಮಂತ್ರಿಗಳು ದಂಡನಾಯಕರು ಇತ್ಯಾದಿ ಅಧಿಕಾರಿಗಳಿರುತ್ತಿದ್ದರು. ಹೆಚ್ಚುಕಡಿಮೆ ಕೆಲವು ಶತಮಾನಗಳ ಹಿಂದಿನ ಯೂರೋಪಿನ ಆಡಳಿತ ವ್ಯವಸ್ಥೆಯನ್ನು ಈ ರಾಜ್ಯ ಸ್ಥೂಲವಾಗಿ ಹೋಲುತ್ತಿತ್ತು. ಸ್ಪೀಕ ಮತ್ತು ಗ್ರ್ಯಾಂಟ್ ಇಲ್ಲಿಗೆ ಬರುವುದಕ್ಕೆ ಮೊದಲು ಖರಾಗ್ವೆ ರಾಜ್ಯಕ್ಕೆ ಹೋದರು. ಇಲ್ಲಿ ರುಮಾನೀಕ ಎನ್ನುವ ದೊರೆ ಆಳುತ್ತಿದ್ದ.

ಈ ಇಬ್ಬರು ಬಿಳಿಯ ಮನುಷ್ಯರನ್ನು ಕಂಡ ರುಮಾನೀಕ ಆಶ್ಚರ್ಯಗೊಂಡ. ಅವರನ್ನು ಗೌರವ ಆದರಗಳಿಂದ ಬರಮಾಡಿಕೊಂಡ. ಅವರಿಗೆ ಬೇಕಾದ ಎಲ್ಲ ದವಸಧಾನ್ಯಗಳನ್ನೂ ಒದಗಿಸಿದ. ಸ್ಪೀಕ ಇದಕ್ಕೆ ಪ್ರತಿಯಾಗಿ ಅನೇಕ ಉಡುಗೊರೆಗಳನ್ನು ನೀಡಿದ. ಅವನ ಜೊತೆ ಪೋಂಬೆ ಎನ್ನುವ ಸಾರಾಯಿ ಯನ್ನು ಪಾನ ಮಾಡಿದ. ಅವನೊಡನೆ ಶಿಕಾರಿಗೆ ಹೋಗಿ ಸರೋವರಗಳಲ್ಲಿನ ದೊಡ್ಡ ದೊಡ್ಡ ನೀರಾನೆಗಳನ್ನು ತನ್ನ ಬಂದೂಕಿನಿಂದ ಹೊಡೆದುರುಳಿಸಿ ಅಲ್ಲಿನ ಜನರಿಗೆಲ್ಲಾ ಮಾಂಸದ ಔತಣ ದೊರೆಯುವಂತೆ ಮಾಡಿದ. ಅಂತೂ ಹಲವಾರು ತಿಂಗಳುಗಳವರೆಗೆ ರುಮಾನೀಕನ ಆಸ್ಥಾನದಲ್ಲಿ ಆರಾಮಾಗಿ ಕಾಲಹಾಕಿದ.

ಈ ನಡುವೆ ಗ್ರ್ಯಾಂಟ್‌ಗೆ ಕಾಲಿನಲ್ಲಿ ಒಂದು ವ್ರಣವಾಗಿ ಅದು ಬಾತುಕೊಂಡು ಗ್ರ್ಯಾಂಟ್ ಮುಂದೆ ನಡೆಯಲಾರದಷ್ಟು ತೊಂದರೆ ಕೊಡಲಾರಂಭಿಸಿತು. ಸ್ಪೀಕ ರುಮಾನೀಕನ ಧಡೂತಿ ಹೆಂಡಿರುಗಳ ಬಗ್ಗೆ ಸ್ವಾರಸ್ಯಕರವಾಗಿ ಹೇಳಿದ್ದಾನೆ. ದೊರೆಯ ಹೆಂಡಿರನ್ನು ಬೇಕೆಂದೇ ಹಾಲಿನಲ್ಲಿ ಮಾಡಿದ ಯಾವುದೋ ಒಂದು ಪಾನೀಯವನ್ನು ಕುಡಿಸಿ ಕುಡಿಸಿ ಕೊಬ್ಬಿಸಲಾಗುತ್ತಿತ್ತಂತೆ. ಕೋಳಿಮೊಟ್ಟೆಗಿಂತ ಗೋಲಾಕಾರವಾಗಿರುವ ಈ ಸ್ತ್ರೀ ದೇಹಗಳು ಇತರರ ಸಹಾಯವಿಲ್ಲದೆ ಮುಂದುವರಿಯುವುದು ಸಾಧ್ಯವೇ ಇರಲಿಲ್ಲ. ಸಾಧಾರಣವಾಗಿ ಈ ಚೆಲುವೆಯರೆಲ್ಲ ಸರೀಸೃಪಗಳಂತೆ ನೆಲದ ಮೇಲೆ ತೆವಳಿಕೊಂಡೇ ಓಡಾಡಬೇಕಿತ್ತು. ಸ್ಪೀಕ ಅಳೆಯುವ ಟೇಪ್ ಹಿಡಿದು ಈ ಧಡೂತಿ ಹೆಂಗಸರ ಪ್ರತಿಯೊಂದು ಅಂಗಾಂಗದ ಅಳತೆ ತೆಗೆದುಕೊಂಡು ಅದನ್ನು ದಾಖಲು ಮಾಡಿಕೊಂಡಿದ್ದಾನೆ.

This PDF was created using the Sonic PDF Creator.
To remove this watermark, please license this product at www.investintech.com

ಸ್ಪೀಕೆ ಮತ್ತು ಗ್ರ್ಯಾಂಟ್ ರುಮಾನೀಕನ ಆಸ್ಥಾನದಲ್ಲಿ ಕಾಲಕಳೆಯಲು ಇನ್ನೊಂದು ಕಾರಣವೆಂದರೆ ಮುಂದೆ ಅವರು ಬುಗಾಂಡ ರಾಜ್ಯಕ್ಕೆ ಹೋಗಬೇಕಿತ್ತು. ಆ ರಾಜ್ಯದ ಅಧಿಪತಿಯಾದ ಮಟೂಸಾನಿಂದ ಅನುಮತಿ ಮತ್ತು ಅವನ ಆಸ್ಥಾನಕ್ಕೆ ಹಾಕಿಕೊಂಡು ಹೋಗಬೇಕಾದ ನಿಲುವಂಗಿ ದೊರೆಯುವವರೆಗೂ ಸ್ಪೀಕೆ ಖರಾಗ್ವೆಯಲ್ಲಿಯೇ ಉಳಿಯಬೇಕಾದ ಅನಿವಾರ್ಯತೆ ಇತ್ತು. ಅಂತೂ ಕೊನೆಗೂ ಅನುಮತಿ ಮತ್ತು ನಿಲುವಂಗಿಗಳು ಮಟೂಸಾನ ಆಸ್ಥಾನದಿಂದ ಬಂದವು. ಸ್ಪೀಕೆ ತಾನು ಮೊದಲು ಬುಗಾಂಡಕ್ಕೆ ಹೋಗಿರುತ್ತೇನೆಂದೂ, ಗ್ರ್ಯಾಂಟ್ ತನ್ನ ಕಾಲಿನ ಗಾಯ ಗುಣವಾದ ಕೂಡಲೆ ಬರಬೇಕೆಂದೂ ಹೇಳಿ ಮಟೂಸಾನ ಆಸ್ಥಾನಕ್ಕೆ ಹೋದ.

ಈ ದೊರೆಗಳ ಕುತೂಹಲಕರ ನಡವಳಿಕೆಗಳನ್ನೆಲ್ಲಾ ಗಮನಿಸುತ್ತಾ ಸ್ಪೀಕೆ ತುಂಬಾ ದಿನ ಕಳೆದ. ಇವನ ಈ ನಡವಳಿಕೆಯನ್ನು ಮುಂದೆ ಲಂಡನ್ನಿನಲ್ಲಿನ ಇವನ ಪ್ರತಿವಾದಿಗಳು ಚೆನ್ನಾಗಿ ಉಪಯೋಗಿಸಿಕೊಂಡು ಸ್ಪೀಕೆಯ ಕೀರ್ತಿ ಪ್ರತಿಷ್ಠೆ ಗಳನ್ನು ಸಾಕಷ್ಟು ಕುಗ್ಗಿಸಿದರು. ಅದೇನೇ ಇರಲಿ ನೈಲ್ ನದೀ ಮೂಲದ ಅನ್ವೇಷಣೆಯೊಂದಿಗೆ ಮಿಳಿತವಾಗಿರುವ ಈ ಚರಿತ್ರೆಯನ್ನು ನಾವಂತೂ ಕುತೂಹಲದಿಂದಲೇ ಕೇಳಬಹುದು.

ಮಟೂಸಾ ಆಸ್ಥಾನದಲ್ಲಿ ದೊರೆಯ ಎದುರು ಯಾರೂ ಕುಳಿತುಕೊಳ್ಳುವಂತೆಯೇ ಇರಲಿಲ್ಲ. ಆದರೆ ಸ್ಪೀಕೇ ಮಾತ್ರ ನಿರ್ಭೀತಿಯಿಂದ ತನ್ನ ಸೇವಕನ ಕೈಯಲ್ಲಿ ಒಂದು ಕುರ್ಚಿಯನ್ನೂ, ಒಂದು ಛತ್ರಿಯನ್ನೂ ಹೊರಿಸಿಕೊಂಡು ಹೋಗಿ ಕುರ್ಚಿ ಅವನೆದುರೇ ಹಾಕಿಕೊಂಡು ಸೇವಕನಿಂದ ಛತ್ರಿ ಹಿಡಿಸಿಕೊಂಡು ಕುಳಿತುಕೊಳ್ಳುತ್ತಾನೆ. ಮಟೂಸಾ ಇವನೊಡನೆ ಒಂದೂ ಮಾತನಾಡದೆ ಇವನೆದುರು ಒಂದು ಗಂಟೆಯವರೆಗೆ ಕುಳಿತುಕೊಂಡು ಅಕ್ಕಪಕ್ಕದವರಿಗೆ ಛತ್ರಿ ತೋರಿಸುತ್ತಾ ಮಾತನಾಡುತ್ತಿರುತ್ತಾನೆ. ಒಂದು ಗಂಟೆಯ ನಂತರ ಆತ ಒಬ್ಬನೇ ಊಟ ತರಿಸಿಕೊಂಡು ಸ್ಪೀಕೆ ಎದುರು ಊಟ ಮಾಡುತ್ತಾನೆ. ಇದು ದೊರೆ ಸುಪ್ರೀತನಾಗಿದ್ದಾನೆ ಎಂದರ್ಥ ಎಂದು ಸೇವಕನೊಬ್ಬ ಬಂದು ಸ್ವಾಹಿಲಿಯಲ್ಲಿ ಸ್ಪೀಕೆಗೆ ವಿವರಿಸುತ್ತಾನೆ.

ಎಲ್ಲಕ್ಕಿಂತ ಮಟೂಸಾ ತನ್ನ ಆಸ್ಥಾನದಲ್ಲಿ ಮನರಂಜನೆಗಾಗಿ ತನ್ನ ಅಂತಃಪುರದಿಂದ ದಿನವೂ ನಾಲ್ಕು ಜನ ಹುಡುಗಿಯರನ್ನು ಎಳೆತರಿಸಿ ಅವರಿಗೆ ಚಿತ್ರಹಿಂಸೆ ಕೊಟ್ಟು ಸಾಯಿಸುತ್ತಿದ್ದುದು ಸ್ಪೀಕೆ ಅಸಹ್ಯ ಪಡುವಂತೆ ಮಾಡಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ನಿಷ್ಕಾರಣವಾಗಿ ಯಾರನ್ನಾದರೂ ಎಳೆತಂದು ಕೊಲ್ಲದಿದ್ದ ದಿನವೇ ಇಲ್ಲ. ಇಡೀ ಆಸ್ಥಾನಿಕರೆಲ್ಲ ಚಿಕ್ಕಮಕ್ಕಳಂತೆ ಇದನ್ನು ನೋಡಿ ನಗುತ್ತಾ ಆನಂದಿಸುತ್ತಿದ್ದರೆಂದು ಸ್ಪೀಕೆ ವಿವರಿಸುತ್ತಾನೆ. ಸ್ಪೀಕೆ, ಗ್ರಾಂಟ್ ಕಾಲು ಗುಣಪಡಿಸಿಕೊಂಡು ಬರುವವರೆಗೆ ಕಾಯಲೇಬೇಕಿತ್ತು. ಹಾಗಾಗಿ ಮಟೂಸಾನ ಆಸ್ಥಾನದ ವಿನೋದಗಳನ್ನೆಲ್ಲಾ ಅನಿವಾರ್ಯವಾಗಿ ನೋಡುತ್ತಾ ಕಾಲ ಕಳೆಯಲೇಬೇಕಾಗಿತ್ತು.

ಸ್ಪೀಕೆ ಒಮ್ಮೆ ಮಟೂಸಾನಿಗೆ ತನ್ನ ಬಂದೂಕಿನ ಶಕ್ತಿ ಪ್ರದರ್ಶನ ಮಾಡಿದ. ಅದನ್ನು ಕಂಡು ಪರಮಾಶ್ಚರ್ಯಗೊಂಡ. ಮಟೂಸಾ ನಾಲ್ಕು ದನಗಳನ್ನು ತೋರಿಸಿ ಅವುಗಳತ್ತ ಗುಂಡುಹಾರಿಸು ಎಂದ. ಸ್ಪೀಕೆಯ ಬಂದೂಕು ಆಸ್ಫೋಟನೆಯಾಗುತ್ತಿದ್ದಂತೆಯೆ ಆ ನಾಲ್ಕು ದನಗಳೂ ಸತ್ತು ಬಿದ್ದವು. ಈ ಪುಟ್ಟ ಕಬ್ಬಿಣದ ಕೋಲಿನ ಶಕ್ತಿಯನ್ನು ನೋಡಿ ಮಟೂಸಾನಿಗೆ ಆಶ್ಚರ್ಯವಾಯ್ತು. ತಾನೂ ಅದರಲ್ಲಿ ಹೊಡೆಯುತ್ತೇನೆಂದು ಸ್ಪೀಕೆಯಿಂದ ಬಂದೂಕನ್ನು ತೆಗೆದುಕೊಂಡು ತನ್ನ ಆಸ್ಥಾನಿಕರಲ್ಲಿ ಒಬ್ಬನತ್ತ ಗುಂಡು ಹಾರಿಸಿದ. ಆಸ್ಥಾನಿಕ ಕೂಡಲೆ ರಕ್ತದ ಮಡುವಿನಲ್ಲಿ ಉರುಳಿಬಿದ್ದ. ಸುತ್ತಲಿದ್ದವರೆಲ್ಲಾ ಪರಮಾನಂದದಿಂದ ಆ ಬಂದೂಕಿನ ಶಕ್ತಿ ಸಾಮರ್ಥ್ಯಗಳನ್ನು ಪ್ರಶಂಶಿಸಿದರೆ ಹೊರತೂ ರಕ್ತಕಾರಿಕೊಂಡು ಸತ್ತ ತಮ್ಮ ಸಹೋದ್ಯೋಗಿಯತ್ತ ಒಂದು ಅನುಕಂಪದ ನೋಟವನ್ನೂ ಬೀರಲಿಲ್ಲ.

ಮಟೂಸಾನಿಗೆ ದಿನವೂ ಬೆತ್ತಲು ಹುಡುಗಿಯರನ್ನು ಅವರ ತಂದೆತಾಯಿಗಳು ಹಿಂಡು ಹಿಂಡಾಗಿ ತಂದು ಅವನ ಅಂತಃಪುರಕ್ಕೆ ಅರ್ಪಿಸುತ್ತಿದ್ದರು. ಮಟೂಸಾ ಸಹ ಈ ಬಿಳಿಯ ಮನುಷ್ಯ ಕೊಡುತ್ತಿದ್ದ ಉಡುಗೊರೆಗಳಿಗೆ ಬದಲಾಗಿ ದಿನಾ ನಾಲ್ಕು ಜನ ಹುಡುಗಿಯರನ್ನು ಸ್ಪೀಕೆ ಬಳಿಗೆ ಕಳಿಸುತ್ತಿದ್ದ. ಮೈಗೆಲ್ಲ ಎಣ್ಣೆ ಬಳಿದುಕೊಂಡು ಮಿಂಚುತ್ತಿದ್ದ ಈ ಕೃಷ್ಣ ಸುಂದರಿಯರನ್ನು ಸ್ಪೀಕೆ ತನ್ನ ಕೂಲಿಗಳಿಗೆ ಉಡುಗೊರೆಯಾಗಿ ಕೊಡುತ್ತಿದ್ದ.

ಈ ರೀತಿ ಮಟೂಸಾನ ಆಸ್ಥಾನದ ಕ್ರೂರ ವಿನೋದಗಳನ್ನೆಲ್ಲಾ ನೋಡುತ್ತಾ ಸ್ಪೀಕೆ ಮೂರು ತಿಂಗಳುಗಳ ಕಾಲ ಗ್ರಾಂಟ್ ಬರವಿಗಾಗಿ ಕಾದ. ಕೊನೆಗೊಮ್ಮೆ ತನ್ನ ಅರ್ಧಬಂರ್ಧ ವಾಸಿಯಾದ ಗಾಯದೊಡನೆ ಗ್ರಾಂಟ್ ಮಟೂಸಾನ ಆಸ್ಥಾನಕ್ಕೆ ಬಂದ.

This PDF was created using the Sonic PDF Creator.
To remove this watermark, please license this product at www.investintech.com

ಸ್ಪೀಕೆ ಮತ್ತು ಗ್ರಾಂಟ್ ತಮ್ಮ ಅನ್ವೇಷಣೆ ಮುಂದುವರಿಸುವುದು ಮಟೂಸಾನಿಗೆ ಕೊಂಚವೂ ಇಷ್ಟವಿರಲಿಲ್ಲ. ಆದರೂ ಮತ್ತೆ ಹಿಂದಿರುಗಿ ಬರುತ್ತೇವೆಂದು ಹೇಳಿ ಈ ಇಬ್ಬರು ಅನ್ವೇಷಕರೂ ತಮ್ಮ ಯಾತ್ರೆ ಮುಂದುವರಿಸಿದರು.

ನ್ಯಾನ್ಸಾ ಸರೋವರದ ಕಡೆಗೆ ಹೋಗುತ್ತ ಸ್ಪೀಕೆ ಮತ್ತು ಗ್ರಾಂಟ್ ಒಂದು ದೊಡ್ಡ ನದಿಯನ್ನು ಕಂಡರು. ಆ ನದಿಯ ಹೆಸರು ಖಗೇರಾ ಎಂದು. ಆದರೆ ಇದು ನ್ಯಾನ್ಸಾ ಸರೋವರದ ಕಡೆಗೆ ಹರಿಯುತ್ತಿದ್ದುದರಿಂದ ಅದನ್ನು ಅವರು ಪರಿಗಣಿಸದೆ ದಾಟಿಕೊಂಡು ಮುನ್ನಡೆದರು. ಅವರು ಬೊನ್ಯೋರೋ ರಾಜ್ಯದೊಳಕ್ಕೆ ಪ್ರವೇಶ ಮಾಡಿದರು. 1862 ಜುಲೈ 7ನೆಯ ತಾರೀಖಿನಂದು ಅವರಿಗೆ ಇನ್ನೊಂದು ದೊಡ್ಡ ನದಿ ಅಡ್ಡ ಸಿಕ್ಕಿತು. ವಿಸ್ತಾರವಾದ ಈ ನದಿ ನ್ಯಾನ್ಸಾ ಸರೋವರದಿಂದ ಹೊರಕ್ಕೆ ಉತ್ತರಕ್ಕೆ ಹರಿಯುತ್ತಿತ್ತು. ಆದನ್ನು ನೋಡಿ ಸ್ಪೀಕೆ ಮತ್ತು ಗ್ರಾಂಟ್‌ರ ಆನಂದಕ್ಕೆ ಪಾರವೇ ಇಲ್ಲ. ಕೊನೆಗೂ ಈ ಮಹಾ ಸರೋವರದಿಂದ ಹೊರ ಹರಿಯುವ ನದಿಯೊಂದನ್ನು ಕಂಡೆವೆಂದು ಸಂತೋಷಪಟ್ಟರು. ಅದೇ ನೈಲ್‌ನದಿ.

ಈ ನದಿ ನ್ಯಾನ್ಸಾ ಸರೋವರದಿಂದ ಹೊರಕ್ಕೆ ಹರಿಯುತ್ತದೆಂದೂ ಸರೋವರದ ಬಳಿಯಲ್ಲಿ ಇದೊಂದು ಮಹಾಜಲಪಾತವಾಗಿ ಧುಮ್ಮಿಕ್ಕಿ ಮುಂದುವರಿಯುತ್ತದೆಂದೂ ಮಟೂಸಾನ ಆಸ್ಥಾನದಲ್ಲಿ ಕೇಳಿದ್ದರು. ಆದ್ದರಿಂದ ಸ್ಪೀಕೆ, ಒಡನಾಡಿ ಗ್ರಾಂಟನಿಗೆ ಮುಂದುವರಿದು ಬೊನ್ಯೋರೋ ದೊರೆ ಕಮುರಾಸಿಯ ಆಸ್ಥಾನಕ್ಕೆ ಹೋಗಲು ಹೇಳಿ ತಾನು ನೈಲ್‌ನದಿಯ ಉಗಮ ಸ್ಥಾನದ ಜಲಪಾತವನ್ನು ನೋಡಿಬರುತ್ತೇನೆಂದು ಬಾಂಬೆಯೊಡನೆ ಹೊರಟ. ತಮ್ಮ ಅನ್ವೇಷಣೆಯ ಕೊನೆಯ ಹಂತದಲ್ಲಿ ಗ್ರಾಂಟ್ ಯಾಕೆ ಸ್ಪೀಕೆಯೊಡನೆ ನೈಲ್‌ನದಿ ಮೂಲವನ್ನು ಕಣ್ಣಾರೆ ಕಾಣಲು ಹೋಗಲಿಲ್ಲವೆಂಬುದು ಒಂದು ಸೋಜಿಗದ ಸಂಗತಿಯಾಗಿದೆ.

ಸ್ಪೀಕೆ ಬಾಂಬೆಯೊಡನೆ ದಿನಕ್ಕೆ 20 ಮೈಲಿಯಷ್ಟು ಪ್ರಯಾಣ ಮಾಡುತ್ತಾ ನೈಲ್‌ನದಿಯ ಮೂಲವಾದ ಜಲಪಾತದ ಕಡೆಗೆ ದೌಡಾಯಿಸಿದ. ಜುಲೈ 21, 1862ನೆಯ ದಿನಾಂಕ ಸ್ಪೀಕೆಯ ಜೀವನದ ಅವಿಸ್ಮರಣೀಯ ದಿನ. ಸ್ಪೀಕೆಗೂ ಜಲಪಾತಕ್ಕೂ ನಡುವೆ ಒಂದು ಬೆಟ್ಟ ಅಡ್ಡವಾಗಿತ್ತು. ಅದನ್ನು ಹತ್ತಿ ಆಚೆಗೆ ಇಣುಕಿದ ಕೂಡಲೇ ಭಯಂಕರವಾಗಿ ಭೋರ್ಗರೆಯುತ್ತ ನೈಲ್‌ನದಿ ಜಲಪಾತದಲ್ಲಿ ಧುಮ್ಮಿಕ್ಕುವುದು ಕಂಡಿತು. ಜಲಪಾತದ ಕೆಳಗೆ ಲೆಕ್ಕವಿಲ್ಲದಷ್ಟು ನೀರಾನೆಗಳೂ, ಆಫ್ರಿಕಾದ ಭಾರಿ ಭಾರಿ ಮೊಸಳೆಗಳೂ ಮಂದಗತಿಯಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಚಲಿಸುತ್ತಾ ಇದ್ದವು. ನೀರು ಧುಮ್ಮಿಕ್ಕುವುದರಿಂದ ಎದ್ದ ಹೊಗೆಯಲ್ಲಿ ಸೂರ್ಯನ ಬಿಸಿಲಿಗೆ ಹಲವಾರು ಕಾಮನಬಿಲ್ಲುಗಳು ಮೂಡಿದ್ದವು.

ಸ್ಪೀಕೆ ಆ ಜಲಪಾತಕ್ಕೆ "ರಿಪ್ಪನ್ ಜಲಪಾತ'' ಎಂದು ಹೆಸರಿಟ್ಟ. ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿಯ ಮೂಲ ಪುರುಷರಲ್ಲೊಬ್ಬನಾದ ರಿಪ್ಪನ್ ಸ್ಮರಣೆಗಾಗಿ ಸ್ಪೀಕೆ ಆ ಜಲಪಾತಕ್ಕೆ ಹಾಗೆ ನಾಮಕರಣ ಮಾಡಿದ.

ಅಲ್ಲಿಗೆ ಸ್ಪೀಕೆ ಮಟ್ಟಿಗೆ ಕೃತಾರ್ಥನಾದಂತೆನಿಸಿತು. ಸಾವಿರಾರು ಮೈಲಿ ಆಫ್ರಿಕದ ಅಗಮ್ಯ ಅರಣ್ಯಗಳಲ್ಲಿ ನಡೆದು ಅನೇಕ ತೊಂದರೆಗಳನ್ನನುಭವಿಸಿ ಕೊನೆಗೂ ನೈಲ್‌ನದಿಗೆ ನ್ಯಾನ್ಸಾ ಸರೋವರವೇ ಮೂಲ ಎಂದು ಸ್ಪೀಕೆ ಕಂಡುಹಿಡಿದಿದ್ದ. ಈಗ ಸ್ಪೀಕೆ ಗ್ರಾಂಟ್ ಇಬ್ಬರಿಗೂ ಒಂದೇ ಒಂದು ಸಮಸ್ಯೆ ಇತ್ತು. ಮಧ್ಯ ಆಫ್ರಿಕದ ಅಗಮ್ಯ ಪ್ರದೇಶಗಳಿಗೆ ಬಂದುದಾಗಿತ್ತು. ಈಗ ಇಲ್ಲಿಂದ ಜೀವಸಮೇತ ಹೋಗುವುದು ಹೇಗೆ? ಯಾವ ದಾರಿಯಲ್ಲಿ?

ಸ್ಪೀಕೆ ಮತ್ತು ಗ್ರಾಂಟ್ ಇಬ್ಬರೂ ಬೊನ್ಯೋರೋದಲ್ಲಿರಬೇಕಾದರೆ ಅಲ್ಲಿಂದ ಪಶ್ಚಿಮಕ್ಕೆ ಇನ್ನೊಂದು ಮಹಾ ಸರೋವರ ಇದೆಯೆಂದೂ ಅದ ರಿಂದಲೂ ನದಿಯೊಂದು ಹುಟ್ಟಿ ಉತ್ತರಕ್ಕೆ ಹರಿಯುತ್ತದೆಂದೂ ಕೇಳಿದರು. ಆದರೆ ಸಾವಿರಾರು ಮೈಲಿಯ ಪ್ರಯಾಣದಿಂದ ಜರ್ಝರಿತರಾಗಿದ್ದ ಅವರಿಗೆ ಮತ್ತೆ ಇನ್ನೊಂದು ಹೊಸ ಅನ್ವೇಷಣೆ ಕೈಗೊಳ್ಳಲು ಚೈತನ್ಯವೇ ಇರಲಿಲ್ಲ. ತಮ್ಮ ಪ್ರಾಣ ಉಳಿಸಿಕೊಂಡು ನಾಗರಿಕ ಜಗತ್ತಿಗೆ ಹಿಂದಿರುಗುವುದೇ ಅವರಿಗೆ ದುಸ್ಸಾಧ್ಯ ವಾಗಿ ಕಾಣತೊಡಗಿತ್ತು. ಅವರಿಬ್ಬರೂ ಅಲ್ಲಿಂದ ಮುಂದೆ ಉತ್ತರದ ಕಡೆಗೆ ಈಜಿಪ್ಟಿನತ್ತ ಮುಂದುವರಿಯತೊಡಗಿದರು.

1963 ಫೆಬ್ರವರಿ 13 ರಂದು ತಾವು ಜಾಂಜಿಬಾರಿನಿಂದ ಆಫ್ರಿಕ ಪ್ರವೇಶಿಸಿ 2 ವರ್ಷಗಳ ತರುವಾಯ ಸ್ಪೀಕೆ ಮತ್ತು ಗ್ರಾಂಟ್ ಸುಡಾನಿನ ಬಳಿಯ ಗೊಂಡೋ ಕೋರೋ ಎನ್ನುವ ಊರನ್ನು ತಲುಪಿದರು. ಅಲ್ಲಿ ಅವರಿಗೆ ಆಶ್ಚರ್ಯಗೊಳ್ಳು ವಂತೆ ಬೇಕರ್ ಎನ್ನುವ ಯೂರೋಪಿಯನ್ ಸಿಕ್ಕ. ಬೇಕರ್ ಸ್ಪೀಕೆಯ ಚಿಕ್ಕಂದಿನ ಒಡನಾಡಿಯಾಗಿ ಅವನೊಡನೆ ಭಾರತದಲ್ಲಿ ಸೇನೆಯಲ್ಲಿ ಕೆಲಸಕ್ಕಿದ್ದಾತ. ಆತನೂ ಅವನ ಹೆಂಡತಿಯೂ ಈಜಿಪ್ಟಿನ ಕಡೆಯಿಂದ ನೈಲ್ ನದಿಯ ಮೂಲ ಹುಡುಕಲು ಹೊರಟಿದ್ದರು. ಅವರು ಸ್ಪೀಕೆ ಮತ್ತು ಗ್ರಾಂಟರನ್ನು ನೋಡಿ ಆಶ್ಚರ್ಯಾನಂದ ಗಳಿಂದ ತಬ್ಬಿಕೊಂಡರು. ಸ್ಪೀಕೆ ತನ್ನ ಸಾಹಸಗಳನ್ನೆಲ್ಲಾ ಅವರಿಗೆ ವರದಿ ಮಾಡಿ

This PDF was created using the Sonic PDF Creator.
To remove this watermark, please license this product at www.investintech.com

ನದೀ ಮೂಲವನ್ನು ಕೊನೆಗೂ ಆಖೈರಾಗಿ ತೀರ್ಮಾನಿಸಿದೆ ಎಂದು ಹೇಳಿ
ತ.

ಆದರೆ ವಾಸ್ತವವಾಗಿ ಸ್ಪೀಕೆ ಅನ್ವೇಷಣ ಯಾತ್ರೆ ಯೂರೋಪಿನಲ್ಲಿ
ಟ್ಟ ಹೊಸ ಹೊಸ ಸಮಸ್ಯೆಗಳಿಗೆ ಎಡೆಮಾಡಿ ನೈಲ್ ಮೂಲವನ್ನು
ಟ್ಟ ವಿವಾದಗ್ರಸ್ತವನ್ನಾಗಿ ಮಾಡಿತು. ಉದಾಹರಣೆಗೆ ನ್ಯಾನ್ಸಾ ಸರೋ
ಹರಿಯುವ ಖಗೇರಾ ನದಿ ಯಾವುದು? ಅದರ ಉಗಮಸ್ಥಾನವೇ ನೈಲ್
ು ನಿಜವಾದ ಮೂಲವಲ್ಲವೆ? ಬೊನ್ಯೋರೋ ಬಳಿಯ ಇನ್ನೊಂದು ಮಹಾ
ೀವರ ಯಾವುದು? ಅಲ್ಲಿಂದ ಹೊರಡುವ ನದಿಯೇ ನಿಜವಾದ ನೈಲ್
ವೆಂದು ಹೇಳಲು ಸ್ಪೀಕೆ ತನ್ನ ಬಳಿ ಏನು ಸಾಕ್ಷ್ಯ ಇದೆ! ಇತ್ಯಾದಿಗಳು.

ಸ್ಪೀಕೆ ಮತ್ತು ಗ್ರಾಂಟರಿಗೇನೋ ಇಂಗ್ಲೆಂಡಿನಲ್ಲಿ ವೀರೋಚಿತ ಸ್ವಾಗತ
ತ್ತು ಸನ್ಮಾನಗಳು ನಡೆದವು. ಆದರೆ ವಾದ ವಿವಾದಗಳು ಮಾತ್ರ ಕಡಿಮೆ
ಾಗದೆ ಇನ್ನಷ್ಟು ಉಲ್ಬಣಗೊಂಡವು. ರಾಯಲ್ ಜಿಯೋಗ್ರಾಫಿಕಲ್ ಸೋಸೈಟಿ
ವರು ಇನ್ನೊಂದು ಅನ್ವೇಷಣೆಯ ತಂಡ ಕಳಿಸಬೇಕಾದ ಅನಿವಾರ್ಯತೆಗೆ
ಕೊಂಡರು. ಈ ಬಾರಿ ಅವರು ಆಫ್ರಿಕಾದ ಅಗ್ರಮಾನ್ಯ ಸಂಶೋಧಕ ಡಾ.
ವಿಡ್ ಲಿವಿಂಗ್ ಸ್ಟೋನ್‌ರವರನ್ನು ಕೇಳಿಕೊಂಡರು.

This PDF was created using the Sonic PDF Creator.
To remove this watermark, please license this product at www.investintech.com

# 4. ಚಂದ್ರ ಪರ್ವತ ಮತ್ತು ಬೇಕರ್ ದಂಪತಿಗಳು

ಸ್ಪೀಕ್ ಮತ್ತು ಗ್ರ್ಯಾಂಟ್ ನ್ಯಾನ್ಸಾ ಸರೋವರವನ್ನು ತಲುಪಿ ಅಲ್ಲಿ ಭಯಂಕರ ಜಲಪಾತವಾಗಿ ಆವಿರ್ಭವಿಸುವ ನೈಲ್ ನದಿಯ ಒಂದು ಮೂಲವನ್ನು ನೋಡಿ ತಮ್ಮ ಮೊದಲಿನ ಊಹೆ ಸರಿಯೆಂದು ಸಮರ್ಥಿಸಿಕೊಂಡ ಆನಂತರ ನೈಲ್ ನದಿ ಬಗ್ಗೆ ಮತ್ತಷ್ಟು ವಾದ ವಿವಾದಗಳೆದ್ದವು. ಇದಕ್ಕೆ ಮುಖ್ಯ ಕಾರಣ ಆಫ್ರಿಕದ ಮಧ್ಯಭಾಗದಲ್ಲಿದ್ದ ಅನೇಕ ಸರೋವರಗಳು ಮತ್ತು ಅವುಗಳಿಂದ ಹೊರಟು ನೈಲ್‌ನದಿಯನ್ನು ಸೇರುತ್ತಿದ್ದ ಅನೇಕ ನದಿಗಳು. ಇದರೊಡನೆ ಆಫ್ರಿಕದ ಅನ್ವೇಷಣೆಗೆ ಯೂರೋಪಿನಲ್ಲಿ ಅಂದು ದೊರೆಯುತ್ತಿದ್ದ ಪ್ರಾಮುಖ್ಯತೆ. ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿ ಇನ್ನೊಂದು ತಂಡವನ್ನು ಡಾ। ಲಿವಿಂಗ್ ಸ್ಟೋನ್‌ರ ನೇತೃತ್ವದಲ್ಲಿ ಕಳಿಸುವುದಕ್ಕೆ ಮೊದಲೇ ಇನ್ನೊಬ್ಬ ಪ್ರಖ್ಯಾತ ಅನ್ವೇಷಕ ಆಫ್ರಿಕಾದ ಕಗ್ಗತ್ತಲ ನಾಡಿನ ರಂಗಸ್ಥಳದಲ್ಲಿ ಇದ್ದ. ಆತನೇ ಬೇಕರ್.

ಬೇಕರ್ ಜೊತೆ ಆತನ ಸುಂದರ ಮಡದಿ ಶ್ರೀಮತಿ ಬೇಕರ್ ಸಹ ಆಫ್ರಿಕದ ಅನ್ವೇಷಣೆಗೆ ಹೊರಟಿದ್ದಳು. ಇವರನ್ನು ಯಾವ ಸರಕಾರವಾಗಲೀ ಸಂಸ್ಥೆಯಾಗಲೀ ಕಳಿಸಿರಲಿಲ್ಲ. ಶ್ರೀಮಂತನಾದ ಬೇಕರ್ ತನ್ನ ಹಣದಿಂದಲೇ ತನಗೆ ಬೇಕಾದುದನ್ನೆಲ್ಲಾ ಒದಗಿಸಿಕೊಂಡು ನೈಲ್‌ನದಿಯ ಅನ್ವೇಷಣೆಗೆ ತನ್ನ ಹೆಂಡತಿಯೊಡನೆ ಹೊರಟಿದ್ದ. ಬೇಕರ್ ಸ್ಪೀಕೆಯಂತೆ ಅವಸರವಸರವಾಗಿ ಏನನ್ನೋ ಸಾಧಿಸಲು ಮುನ್ನುಗ್ಗುವ ಸ್ವಭಾವದವನಾಗಿರಲಿಲ್ಲ. ಆತ ಸಾವಧಾನವಾಗಿ ಆಫ್ರಿಕದ ಜನಜೀವನವನ್ನು ಅಭ್ಯಾಸ ಮಾಡುತ್ತಾ ನಿಧಾನವಾಗಿ ಅನ್ವೇಷಣ

This PDF was created using the Sonic PDF Creator.
To remove this watermark, please license this product at www.investintech.com

ಯಾತ್ರೆ ಮುಂದುವರಿಸಿದ್ದ. ಆತ ಬರೆದ ಆಫ್ರಿಕದ ಬಗೆಗಿನ ಗ್ರಂಥಗಳು ಇವತ್ತಿಗೂ ಆಫ್ರಿಕದ ಬಗ್ಗೆಯ ನಿರ್ಣಾಯಕ ಗ್ರಂಥಗಳಾಗಿವೆ.

ಸುಡಾನಿನ ಸುಡ್ ಜವುಗುಪ್ರದೇಶವನ್ನು ಅಪಾರ ಕಷ್ಟದಿಂದ ಇಬ್ಬರೂ ದಾಟಿಕೊಂಡು ಗೊಂಡೋ ಕೋರೋ ಊರನ್ನು ತಲುಪಿ ವಿಶ್ರಮಿಸುತ್ತಿರಬೇಕಾದರೆ ಅವರಿಗೆ ದಕ್ಷಿಣದ ಜಾಂಜಿಬಾರಿನಿಂದ ಹೊರಟು ಇಡೀ ನ್ಯಾನ್ಸಾ ಸರೋವರವನ್ನು ಬಳಸಿಕೊಂಡು ರಿಪ್ಪನ್ ಜಲಪಾತವನ್ನು ನೋಡಿ ಬಂದ ಸ್ಪೀಕೆ ಮತ್ತು ಗ್ರಾಂಟ್ ಸಿಕ್ಕರು. ಬೇಕರ್‌ಗೆ ಸ್ಪೀಕೆ ತಾನು ನೈಲ್‌ನದೀ ಮೂಲವನ್ನು ನೋಡಿ ಬಂದುದಾಗಿ ಹೇಳಿ ದಾಗ ಬೇಕರ್‌ಗೆ ಕೊಂಚ ಆಶಾಭಂಗವಾಯ್ತು. ತಾನಿನ್ನು ಹಿಂದಿರುಗುವುದೇ ಒಳಿತೆಂದು ಅನ್ನಿಸಿತು.

ಆದರೆ ಸ್ಪೀಕೆ ಉದಾರ ಮನೋಭಾವದಿಂದ ತಾನು ರಚಿಸಿರುವ ಭೂಪಟ ವನ್ನೂ, ತಾನು ಬಂದ ದಾರಿಯನ್ನೂ ತಿಳಿಸಿಕೊಟ್ಟ. ಇದರೊಡನೆ ತಾನು ಬಂದ ದಾರಿಗೆ ಉತ್ತರ ದಿಕ್ಕಿನಲ್ಲಿರುವ ಇನ್ನೊಂದು ಮಹಾಸರೋವರವನ್ನೂ ಅದ ರಿಂದಲೂ ಉದ್ಭವಿಸಿ ಉತ್ತರಕ್ಕೆ ಹರಿಯುವ ಇನ್ನೊಂದು ನದಿಯ ವಿಷಯವನ್ನೂ ಬೇಕರ್‌ಗೆ ತಿಳಿಸಿ ಅದನ್ನು ತನ್ನಿಂದ ಅನ್ವೇಷಿಸಲಾಗದಷ್ಟು ತಾನು ಸುಸ್ತಾಗಿದ್ದೆ ನೆಂದೂ ತಿಳಿಸಿದ. ಇದರಿಂದ ಬೇಕರ್‌ಗೆ ಮತ್ತೆ ಉತ್ಸಾಹ ತುಂಬಿತು. ಹಾಗಾದರೆ ಇವುಗಳಲ್ಲಿ ಯಾವುದು ನದೀ ಮೂಲವೆಂದು ತಾನು ನಿರ್ಧರಿಸಬಹುದೆಂದು ಬಗೆದ.

ಈ ವೇಳೆಗೆ ಇಂಗ್ಲೆಂಡಿನಲ್ಲಿ ಚಂದ್ರ ಪರ್ವತ ಅಥವಾ ಮೂನ್ ಮೌಂಟನ್ ಬಗ್ಗೆ ಚರ್ಚೆಗಳಾಗುತ್ತಿದ್ದವು. ಬರ್ಟನ್, ಸ್ಪೀಕೆ, ಗ್ರಾಂಟ್ ಈ ಯಾರ ವರದಿಗಳಲ್ಲೂ ಚಂದ್ರ ಪರ್ವತದ ಹೆಸರೇ ಇರಲಿಲ್ಲ. ಹಾಗಾದರೆ ಟೋಲೆಮಿಯಿಂದ ಹಿಡಿದು ಬ್ರೂಸ್ ಮತ್ತು ಡೋಗೇನಸ್‌ವರೆಗೆ ನೈಲ್‌ನದಿಗೆ ಮೂಲವೆಂದು ಹೇಳಿರುವ ಚಂದ್ರಪರ್ವತ ಯಾವುದು? ಕಿಲಿಮಂಜಾರೋ ಮತ್ತು ಕೆನ್ಯಾ ಪರ್ವತಗಳು ನೈಲ್‌ನದಿಗೆ ಉಗಮ ಎಂದು ಹೇಳಲಾಗದಷ್ಟು ದಕ್ಷಿಣ ದಲ್ಲಿವೆ. ಹಾಗಾದರೆ ಚಂದ್ರ ಪರ್ವತ ಒಂದು ಕಟ್ಟುಕಥೆಯೆ? ಅಥವಾ ಸ್ಪೀಕೆ ಮತ್ತು ಗ್ರಾಂಟರು ನೈಲ್‌ನದಿಯ ಯಾವುದೋ ಉಪನದಿಗಳ ಮೂಲವನ್ನು ನೋಡಿ ನೈಲ್ ನದೀ ಮೂಲ ನೋಡಿದೆವೆಂದು ಭ್ರಮಿಸಿದ್ದಾರೆಯೆ?

ಅತ್ತ ಬೇಕರ್ ತನ್ನ ಅನ್ವೇಷಣ ಯಾನ ಮುಂದುವರಿಸುತ್ತಿರಬೇಕಾದರೆ ಇತ್ತ ಇಂಗ್ಲೆಂಡಿನಲ್ಲಿ ವಾದ ವಿವಾದಗಳ ಬಿಸಿ ಏರತೊಡಗಿತ್ತು. . ಸ್ಪೀಕೆಯ

This PDF was created using the Sonic PDF Creator.
To remove this watermark, please license this product at www.investintech.com

ವೈರಿಗಳೆಲ್ಲಾ ಬರ್ಟನ್ ಮುಂದಾಳತ್ವದಲ್ಲಿ ಅವನನ್ನು ಹೀಗಳೆಯತೊಡಗಿದರು. ಕೊನೆಗೊಮ್ಮೆ ಈ ವಿವಾದ ಪರಿಹರಿಸಲು ಇವರೆಲ್ಲರನ್ನೊಳಗೊಂಡ ಒಂದು ದೊಡ್ಡ ಸಮಾವೇಶವನ್ನು ಜಿಯೋಗ್ರಾಫಿಕಲ್ ಸೊಸೈಟಿ ಕರೆಯಿತು. ಆದರೆ ಗೋಷ್ಠಿಯ ಹಿಂದಿನ ದಿನ ಈ ಅವಮಾನ ತಾಳಲಾರದ ಸ್ಪೀಕೆ ತನ್ನ ಬಂದೂಕಿನಿಂದ ತಾನೆ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಕೆಲವರು ಇದನ್ನು ಆಕಸ್ಮಿಕ ಎಂದೂ ಹೇಳುತ್ತಾರೆ. ಒಟ್ಟಿನಲ್ಲಿ ಈ ವಿವಾದ ಪರಿಹಾರವಾಗುವ ಮೊದಲೆ ಸ್ಪೀಕೆ ದಿವಂಗತನಾದ.

ಬೇಕರ್ ತನ್ನ ಅನ್ವೇಷಣೆಯನ್ನು ಮುಗಿಸಿ ಹಿಂದಿರುಗುವವರೆಗೂ ಸ್ಪೀಕೆ ಕೊಂಚ ತಾಳ್ಮೆಯಿಂದ ಇದ್ದಿದ್ದರೆ ಪರಿಸ್ಥಿತಿ ಖಂಡಿತ ಬೇರೆಯೇ ಆಗಿರುತ್ತಿತ್ತು. ಏಕೆಂದರೆ ಬೇಕರ್ ತನ್ನ ಅನ್ವೇಷಣೆಯಿಂದ ನೈಲ್‌ನದೀ ಮೂಲದ ಬಗ್ಗೆಯ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದಿದ್ದ. ಇದರಲ್ಲಿ ಚಂದ್ರ ಪರ್ವತವೂ ಸಹ ಒಂದು.

ಸ್ಪೀಕೆಯನ್ನೂ ಗ್ರಾಂಟನನ್ನೂ ಬೀಳ್ಕೊಟ್ಟನಂತರ ಬೇಕರ್ ದಂಪತಿಗಳು ತಮ್ಮ ಯಾನವನ್ನು ದಕ್ಷಿಣದ ಕಡೆಗೆ ಮುಂದುವರಿಸಿದರು. ಇಲ್ಲಿಯವರೆಗಿನ ಎಲ್ಲ ಅನ್ವೇಷಕರೂ ದಕ್ಷಿಣದ ಜಾಂಜಿಬಾರಿನಿಂದ ಉತ್ತರಕ್ಕೆ ಯಾನ ಮಾಡಿದ್ದರೇ ಹೊರತು ಈಜಿಪ್ಟಿನ ಕಡೆಯಿಂದ ದಕ್ಷಿಣಕ್ಕೆ ಯಾನ ಮಾಡಿರಲಿಲ್ಲ. ಬೇಕರ್ ದಂಪತಿಗಳೇ ಇದರಲ್ಲಿ ಮೊದಲನೆಯವರಾಗಿದ್ದರು. ಬೇಕರ್ ದಂಪತಿಗಳ ಯಾತ್ರೆ ಹೆಚ್ಚು ಕಡಿಮೆ ಮಿಕ್ಕೆಲ್ಲ ಅನ್ವೇಷಕರ ಯಾತ್ರೆಯಂತೆಯೇ ಕಷ್ಟ ಕಾರ್ಪಣ್ಯಗಳಿಂದ, ಮಲೇರಿಯ ಮತ್ತಿತರೆ ರೋಗರುಜಿನಗಳಿಂದ ಕೂಡಿತ್ತು. ಅದನ್ನು ಇಲ್ಲಿ ವಿಶೇಷವಾಗಿ ಪ್ರಸ್ತಾಪಿಸುವ ಅಗತ್ಯ ಇಲ್ಲಎಂದು ತೋರುತ್ತದೆ.

ಬೇಕರ್ ಬಳಿ ಸ್ಪೀಕೆ ಕೊಟ್ಟಿದ್ದ ಭೂಪಟ ಮತ್ತು ಅವನು ಒದಗಿಸಿದ್ದ ಮಾಹಿತಿಗಳು ಆತನಿಗೆ ಸಹಾಯಕ್ಕೆ ಬಂದವು. ಬೇಕರ್ ತನ್ನ ಹೆಂಡತಿಯೊಡನೆ ರಿಪ್ಪನ್ ಜಲಪಾತದಿಂದ ಮುಂದುವರಿದು ಹರಿಯುವ ನೈಲ್ ನದಿಯತ್ತ ಹೊರಟ. ನೈಲ್‌ನದಿ ರಿಪ್ಪನ್ ಜಲಪಾತದಲ್ಲಿನೆಗೆದು ಮುಂದುವರಿದ ನಂತರ ಇನ್ನೊಂದು ಜಲಪಾತದಲ್ಲಿ ನೆಗೆಯುತ್ತದೆ. ಆ ಜಲಪಾತದ ಹೆಸರು "ಕರುಮ್ಮ" ಜಲಪಾತ ಎಂದು. ಈ ಜಲಪಾತದ ಬಳಿ ಬೇಕರ್ ದಂಪತಿಗಳು ನೈಲ್‌ನದಿಯನ್ನು ಸಂಧಿಸಿದರು. ಆದರೆ ಇಲ್ಲಿ ಇನ್ನೊಂದು ಆಶ್ಚರ್ಯ ಕಾದಿತ್ತು ಅವರಿಗೆ. ನೈಲ್ ಅಲ್ಲಿಂದ ಮುಂದೆ ಉತ್ತರಕ್ಕೆ ಈಜಿಪ್ಟಿನ ಕಡೆಗೆ ಹರಿಯದೆ ಸಂಪೂರ್ಣವಾಗಿ

This PDF was created using the Sonic PDF Creator.
To remove this watermark, please license this product at www.investintech.com

ಪಶ್ಚಿಮಕ್ಕೆ ತಿರುಗಿ ವಿರುದ್ಧ ದಿಕ್ಕಿಗೆ ಹರಿಯುತ್ತಿತ್ತು. ಬೇಕರ್ ಅದನ್ನು ನೋಡಿ ಸ್ಪೀಕೆ ನೋಡಿದ್ದು ನೈಲ್ ನದಿಯ ಮೂಲ ಅಲ್ಲವೇನೋ ಎಂದು ಶಂಕಿಸ ತೊಡಗಿದ.

ಆ ನದಿಯ ಆಚೆಕಡೆಗೆ ಬೊನ್ಯೋರೋ ಬುಡಕಟ್ಟು ಜನಾಂಗದವರಿದ್ದರು. ಅವರು ಬೇಕರ್ ತಂಡವನ್ನು ನೋಡಿ ಇವರು ಅರಬ್ ಗುಲಾಮ ವ್ಯಾಪಾರಿಗಳೆಂದು ತಿಳಿದು ಆಚೆದಡದಲ್ಲಿ ಈಟಿ, ಭರ್ಜಿಗಳೊಂದಿಗೆ ಯುದ್ಧಕ್ಕೆ ಸನ್ನದ್ಧರಾಗಿ ನಿಂತರು. ಇತ್ತ ಬೇಕರ್ ದಂಪತಿಗಳಿಗೆ ಮಲೇರಿಯ ಜ್ವರ ಆರಂಭವಾಗಿ ನಿತ್ರಾಣರಾಗಿದ್ದರು. ಕೊನೆಗೂ ಅವರಲ್ಲೊಬ್ಬ ಹೇಗೋ ಮಾಡಿ ನದಿ ದಾಟಿಹೋಗಿ ತಾವು ಅರಬ್ ವ್ಯಾಪಾರಿಗಳಲ್ಲವೆಂದೂ ಅವರ ದೊರೆ ಖಮರಾಸಿಗೆ ಸ್ಪೀಕೆ ಕಳಿಸಿರುವ ಉಡುಗೊರೆಗಳನ್ನು ತಲುಪಿಸಲು ಬಂದಿರುವವರೆಂದೂ ತಿಳಿಸಿ ಅದನ್ನು ತಂದಿರುವ ಬೇಕರ್ ಸ್ಪೀಕೆಯ ತಮ್ಮನೆಂದೂ ಹೇಳಿದ ನಂತರ ಅವರಿಗೆ ನದಿ ದಾಟಲು ಅನುಮತಿ ದೊರೆಯಿತು. ಸ್ಪೀಕೆಯಂತೆಯೇ ಮೈಬಣ್ಣ ಮುಖ ಲಕ್ಷಣಗಳಿದ್ದ ಬೇಕರ್‌ನನ್ನು ಅವರು ಸ್ಪೀಕೆಯ ತಮ್ಮನೆಂದೇ ನಂಬಿ ಆನಂದದಿಂದ ಅವನ ಸುತ್ತ ನೃತ್ಯ ಮಾಡತೊಡಗಿದರು.

ಖಮರಾಸಿಯ ಊರು ತಲುಪಿದಾಗ ದಂಪತಿಗಳನ್ನು ಹೊತ್ತುಕೊಂಡು ಆತನ ಆಸ್ಥಾನಕ್ಕೆ ಒಯ್ಯಬೇಕಾಗಿ ಬಂತು. ಇಬ್ಬರೂ ದಂಪತಿಗಳು ಖಾಯಿಲೆಯಿಂದ ತುಂಬಾ ನಿತ್ರಾಣವಾಗಿದ್ದರು. ಬೇಕರ್ ದಂಪತಿಗಳಿಗೆ ಬೇಕಾದ ಅಗತ್ಯ ದವಸ ಧಾನ್ಯಗಳನ್ನು ಖಮರಾಸಿ ಒದಗಿಸಿದನಾದರೂ ಅವರನ್ನು ಮುಂದುವರಿಯಲು ಬಿಡಲಿಲ್ಲ. ಅವರಿಗೆ ಬೇಕಾದ ಕೂಲಿಯಾಳುಗಳನ್ನೂ ಮತ್ತು ದಾರಿ ತೋರಿಸುವವನನ್ನು ಕೊಡಲಿಲ್ಲ.

ಶ್ರೀಮತಿ ಬೇಕರ್ ಇಡೀ ಬೊನ್ಯೋರೋದ ಜನರಿಗೆಲ್ಲಾ ಅತ್ಯಾಶ್ಚರ್ಯದ ವಸ್ತುವಾಗಿ ಹೋದಳು. ಸುಂದರಿಯಾದ ಇವಳನ್ನು ನೋಡಿ ಎಲ್ಲರೂ ಇವಳು ದೇವತೆಯೇ ಎಂದು ತಿಳಿದುಬಿಟ್ಟರು. ಆಕೆ ತನ್ನ ಕೂದಲನ್ನು ತೊಳೆದುಕೊಳ್ಳಲು ನೀಳವಾದ ಹೊಂಬಣ್ಣದ ಕೂದಲಿನ ಮುಡಿ ಬಿಚ್ಚಿದಾಗಲಂತೂ ಅದರ ಚಿನ್ನದ ಬಣ್ಣವನ್ನು ನೋಡಿ ಬೊನ್ಯೋರೋದ ಕಾಡುಜನರು ಮೂಕವಿಸ್ಮಿತರಾದರು.

ಕೊನೆಗೊಮ್ಮೆ ಖಮರಾಸಿ ಬೇಕರ್‌ಗೆ ಕೂಲಿಗಳನ್ನೂ ದಾರಿತೋರುವವನನ್ನೂ ಕಳಿಸಿಕೊಡುವುದಾಗಿ ಒಪ್ಪಿಕೊಂಡ. ಆದರೆ ಒಂದು ಕರಾರು ಹಾಕಿದ. ಬೇಕರ್ ತನ್ನ ಹೆಂಡತಿಯನ್ನು ಅವನಿಗೆ ಕೊಡಬೇಕು. ಅದಕ್ಕೆ ಬದಲಾಗಿ ಅವನು

This PDF was created using the Sonic PDF Creator.
To remove this watermark, please license this product at www.investintech.com

ಎಷ್ಟು ಜನ ಬೊನ್ಯೋರೋ ಸುಂದರಿಯರನ್ನು ಬೇಕಾದರೂ ತೆಗೆದುಕೊಳ್ಳಬಹುದು ಎಂದು.

ಬೇಕರ್‌ಗೆ ಕೋಪ ಎಲ್ಲೆ ಮೀರಿತು. ತನ್ನ ಬಂದೂಕನ್ನು ಖಮರಾಸಿಯ ತಲೆಗೆ ಗುರಿಹಿಡಿದು ಕೊಂದೇ ಹಾಕುತ್ತೇನೆಂದು ಹೇಳಿದ. ಸ್ಪೀಕೆ ಬಂದಾಗ ಬಂದೂಕಿನ ಪ್ರಚಂಡ ಶಕ್ತಿಯ ಪರಿಚಯ ಖಮರಾಸಿಗೆ ಆಗಿತ್ತು. ಕರಿಯ ಕೋಲಿನ ಶಕ್ತಿ ಎದುರು ಅವನು ಅಂಜಿದ. ತನ್ನ ಕರಾರುಗಳನ್ನು ಬಿಟ್ಟುಕೊಟ್ಟು ತೆಪ್ಪಗೆ ಆಳುಗಳನ್ನೂ ದಾರಿತೋರಿಸುವವನನ್ನೂ ಮಾರನೆದಿನ ಕಳಿಸಿದ.

ಬೇಕರ್ ದಂಪತಿಗಳು ಈಗ ಸ್ಪೀಕೆ ನೋಡಿದ್ದಕ್ಕಿಂತ ಭಿನ್ನವಾದ ಇನ್ನೊಂದು ಮಹಾ ಸರೋವರದತ್ತ ಹೊರಟರು. ಬೇಕರ್ ದಂಪತಿಗಳು ಇನ್ನೂ ಮಲೇರಿಯ ರೋಗದಿಂದ ನರಳುತ್ತಿದ್ದರು. ದಾರಿಯಲ್ಲಿ ಅವರಿಗೆ ಕಾಫೂ ಎನ್ನುವ ನದಿಯೊಂದು ಅಡ್ಡವಾಯ್ತು. ಈ ನದಿಯ ಜೌಗುಗಳನ್ನು ದಾಟುತ್ತಿರಬೇಕಾದರೊಂದು ಕಡೆ ಶ್ರೀಮತಿ ಬೇಕರ್ ನಿಂತಿದ್ದ ನೆಲ ನಿಧಾನವಾಗಿ ಕುಸಿಯತೊಡಗಿ ಆಕೆ ಮುಳುಗತೊಡಗಿದಳು. ಅಷ್ಟರಲ್ಲಿ ಮುಂದಿದ್ದ ಬೇಕರ್ ಇದನ್ನು ಕಂಡು ಓಡಿಬಂದು ಆಕೆ ಮುಳುಗದಂತೆ ಹಿಡಿದುಕೊಂಡ. ಅಷ್ಟರಲ್ಲಿ ಆಕೆ ಪ್ರಜ್ಞಾಹೀನಳಾಗಿ ಹೋದಳು.

ಸತ್ತ ಶವವನ್ನು ಸಾಗಿಸುವಂತೆ ಪ್ರಜ್ಞಾಹೀನಳಾದ ಆಕೆಯನ್ನು ಅನೇಕ ದಿನಗಳವರೆಗೆ ಬೇಕರ್ ಜೋಳಿಗೆಯಲ್ಲಿ ಮಲಗಿಸಿ ಸಾಗಿಸಿದ. ಈ ಪ್ರಯಾಣದಾದ್ಯಂತ ಬಿರುಗಾಳಿಯಿಂದ ಕೂಡಿದ ಮಳೆ ಹಿಡಿದುಕೊಂಡಿದ್ದರಿಂದ ಬೇಕರನ ಪ್ರಯಾಣ ಇನ್ನಷ್ಟು ಕಷ್ಟಕರವಾಗಿ ಪರಿಣಮಿಸಿತು. ಸುಮಾರು ಒಂದು ವಾರದವರೆಗೆ ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ಇದ್ದ ಬೇಕರನ ಹೆಂಡತಿಗೆ ಆನಂತರ ಪ್ರಜ್ಞೆ ಬಂತು. ಮಾರ್ಚ್ 13, 1864ನೇ ದಿನ ಭೂಮಧ್ಯ ರೇಖೆಯಿಂದ 31 ಡಿಗ್ರಿ ಅಕ್ಷಾಂಶದಲ್ಲಿ ಅವರಿದ್ದರು. ಅವರ ಭೂಪಟದ ಲೆಕ್ಕಾಚಾರದ ಪ್ರಕಾರ ಅವರು ಈಗ ಮಹಾಸರೋವರದ ಬಳಿ ಇರಬೇಕಿತ್ತು. ಅವರ ಮಾರ್ಗದರ್ಶಿ ಅವರಿಗೆ ನಾಳೆ ನಾವು ಸರೋವರದ ಬಳಿ ಇರುತ್ತೇವೆಂದು ಹೇಳಿದ.

ಬೇಕರನಿಗೆ ರಾತ್ರಿಯೆಲ್ಲ ನಿದ್ದೆಯೇ ಬರಲಿಲ್ಲ. ಎಷ್ಟು ಹೊತ್ತಿಗೆ ಬೆಳಗಾದೀತೋ! ಎಷ್ಟು ಹೊತ್ತಿಗೆ ಸರೋವರದತ್ತ ಯಾನ ಮುಂದುವರಿಸುತ್ತೇವೆಯೋ ಎಂದು ಕಾಯುತ್ತಿದ್ದ.

This PDF was created using the Sonic PDF Creator.
To remove this watermark, please license this product at www.investintech.com

ಮಾರ್ಗದರ್ಶಿ ಹೇಳಿದಂತೆ ಮಾರ್ಚ್ 14ನೆಯ ತಾರೀಖು ಅವರು ಆ ಸರೋವರದ ಬಳಿಗೆ ಬಂದರು. ಅನಂತ ಸಾಗರದಂತೆ ಕಾಣುತ್ತಿತ್ತು ಆ ಸರೋವರ. ಅದನ್ನು ಆಲ್ಬರ್ಟ್ ಸರೋವರ ಎಂದು ಬೇಕರ್ ನಾಮಕರಣ ಮಾಡಿದ. ಕಾಯಿಲೆ ಕಷ್ಟಗಳಿಂದ ಜರ್ಝರಿತವಾದ ಶರೀರವನ್ನು ಎಳೆದುಕೊಂಡು ದಂಪತಿಗಳಿಬ್ಬರೂ ಸರೋವರದ ತಡಿಯಲ್ಲಿ ನೀರು ಕುಡಿದು ಸ್ನಾನ ಮಾಡಿದರು. ಅವರ ಯಾತ್ರೆ ಸಾರ್ಥಕವಾಗಿತ್ತು.

ಅಷ್ಟರಲ್ಲಿ ಬೇಕರ್‌ಗೆ ದೂರದಲ್ಲಿ ಆಕಾಶದ ನೀಲಿಯಲ್ಲಿ ನೀಲಿಯಾಗಿ ಮಹಾಪರ್ವತಗಳ ಶ್ರೇಣಿಯೊಂದು ಕಾಣಿಸಿತು. ಅದರ ಶಿಖರಗಳು ಹಿಮಾಚ್ಛಾದಿತವಾಗಿ ಬಿಸಿಲಿಗೆ ಹೊಳೆಯುತ್ತಿದ್ದವು. ಟೋಲೆಮಿ ಮತ್ತು ಡೋಗೇನಸ್ ಹೇಳುತ್ತಿದ್ದ ಚಂದ್ರಪರ್ವತ ಅಥವಾ ಮೂನ್‌ಮೌಂಟನ್ ಇದೇ ಎಂದು ಬೇಕರನಿಗೆ ಅರಿವಾಗತೊಡಗಿತು. ಹಾಗಿದ್ದರೆ ಇದೇ ಸರೋವರವೇ ನೈಲ್‌ನದೀ ಮೂಲವಾಗಿದ್ದರೆ ಸ್ಪೀಕೆ ನೋಡಿದ ನ್ಯಾನ್ಸಾದಿಂದ ಹೊರಡುವ ನದಿ ಯಾವುದು?

ಬೇಕರ್ ನೋಡಿದ ಚಂದ್ರಪರ್ವತ ಶ್ರೇಣಿಗಳು ಸರೋವರದ ಮಟ್ಟದಿಂದ ಸುಮಾರು 7000 ಅಡಿ ಎತ್ತರಕ್ಕಿದ್ದವು. ಬೇಕರ್ ಅದನ್ನೆಲ್ಲಾ ಸರಿಯಾಗಿ ತನ್ನ ನಕ್ಷೆಯಲ್ಲಿ ಗುರುತುಮಾಡಿಕೊಂಡ. ಸರಿ ಬೇಕರ್ ತನ್ನ ಗುರಿ ತಲುಪಿಯಾಗಿತ್ತು! ಈಗ ಅವನಿಗೆ ಎಲ್ಲ ಅನ್ವೇಷಕರಿಗೂ ಉದ್ಭವಿಸುವ ಹಳೆಯ ಸಮಸ್ಯೆಯೇ ಇದಿರಾಗಿತ್ತು. ಮತ್ತೆ ನಾಗರಿಕ ಜಗತ್ತಿಗೆ ಹಿಂದಿರುಗುವ ಬಗೆ ಹೇಗೆ?

ಬೇಕರ್ ದಂಪತಿಗಳು ಬಂದ ದಾರಿಯಲ್ಲೇ ಹಿಂದಿರುಗಿದ್ದರೆ ಮುಗಿಯದ ವಾದವಿವಾದ ಒಂದು ಆರಂಭವಾಗುತ್ತಿತ್ತು. ನೈಲ್ ನದೀ ಮೂಲ ಸ್ಪೀಕೆ ನೋಡಿದ ಸರೋವರವೋ ಅಥವಾ ಬೇಕರ್ ನೋಡಿದ ಸರೋವರವೋ ಎಂದು.

ಬೇಕರ್ ಕೆಲವು ನಾಡು ದೋಣಿಗಳನ್ನು ತೆಗೆದುಕೊಂಡು ಆ ಸರೋವರಕ್ಕೆ ಹೊರದಾರಿಗಳಿವೆಯೇ ಎಂದು ಉತ್ತರಕ್ಕೆ ಹುಡುಕುತ್ತಾ ಹೊರಟ, ಏಕೆಂದರೆ ಈ ಸರೋವರದಿಂದ ಒಂದು ನದಿ ಉತ್ತರಕ್ಕೆ ಹರಿಯುತ್ತದೆಂದು ಖಮರಾಸಿಯ ಆಸ್ಥಾನದಲ್ಲಿ ಅವನು ಕೇಳಿದ್ದ. ಬೇಕರ್ ದೋಣಿಯಲ್ಲಿ ಹೋಗುತ್ತಿರಬೇಕಾದರೆ ಆತನಿಗೆ ಇನ್ನೊಂದು ಆಶ್ಚರ್ಯ ಕಾದಿತ್ತು.

ನ್ಯಾನ್ಸಾ ಸರೋವರದಿಂದ ಹೊರಟು ರಿಪ್ಪನ್ ಜಲಪಾತದಲ್ಲಿ ಧುಮುಕಿ ಮುಂದುವರಿಯುವ ನೈಲ್ ನದಿ ಕರುಮ್ಮ ಜಲಪಾತದಿಂದ ಮುಂದೆ ಸಂಪೂರ್ಣ ತನ್ನ ದಿಕ್ಕನ್ನು ಬದಲಾಯಿಸಿ ಪಶ್ಚಿಮಕ್ಕೆ ಹರಿಯುತ್ತಿದ್ದುದನ್ನು ಬೇಕರ್

This PDF was created using the Sonic PDF Creator.
To remove this watermark, please license this product at www.investintech.com

ನೋಡಿದ್ದ. ಅದು ಬಂದು ಆಲ್ಬರ್ಟ್ ಸರೋವರಕ್ಕೆ ಸೇರುತ್ತಿದ್ದುದನ್ನು ನೋಡಿದ. ಅಲ್ಲಿಗೆ ರಿಪ್ಪನ್ ಜಲಪಾತದಿಂದ ಹೊರಡುವ ನದಿಯೇ ನೈಲ್ ಎಂದು ಬೇಕರ್‌ಗೆ ಖಾತರಿಯಾಯ್ತು. ಆ ಜಾಗದಿಂದ ಮುಂದೆ ಹಲವಾರು ಮೈಲುಗಳು ಹೋಗುವುದರೊಳಗೆ ಮತ್ತೆ ನೈಲ್‌ನದಿ ಆಲ್ಬರ್ಟ್ ಸರೋವರದಿಂದ ಹೊರಕ್ಕೆ ಹೊಮ್ಮುವ ಜಲಪಾತ ಬೇಕರ್‌ಗೆ ಕಂಡಿತು. ಇದಕ್ಕೆ ಬೇಕರ್ ಮರ್ಕಿಸನ್ ಜಲಪಾತ ಎಂದು ಜಿಯೋಗ್ರಾಫಿಕಲ್ ಸೊಸೈಟಿಯ ಹಾಲಿ ಅಧ್ಯಕ್ಷರ ಹೆಸರಿಟ್ಟು ನಾಮಕರಣ ಮಾಡಿದ. ಕೇವಲ 20 ಅಡಿಯಷ್ಟು ಕಿರಿದಾದ ಕೊರಕಲಿನಲ್ಲಿ ಇಡೀ ನೈಲ್‌ನದಿಯ ನೀರು ಆಸ್ಫೋಟನೆಯಂತೆ ಹೊರ ಹೊಮ್ಮುತ್ತಿತ್ತು.

ಇಲ್ಲಿ ಬೇಕರ್‌ನ ದೋಣಿಯನ್ನು ನೀರಾನೆಯೊಂದು ಅಪ್ಪಳಿಸಿ ತಲೆ ಕೆಳಗು ಮಾಡಿತು. ಇಬ್ಬರೂ ದಂಪತಿಗಳೂ ತುಂಬ ಕಷ್ಟದಿಂದ ದಡ ಸೇರಬೇಕಾಯ್ತು. ಅಲ್ಲಿಂದ ಮುಂದೆ ಅವರು ದೋಣಿಯ ಪ್ರಯಾಣ ಕೈಬಿಟ್ಟು ಮತ್ತೆ ಕಾಲ್ನಡಿಗೆಯಲ್ಲಿಯೇ ಈಜಿಪ್ಟಿನ ದಿಕ್ಕಿನಲ್ಲಿ ಗೊಂಡೋಕೋರೋ ಊರಿನ ಕಡೆಗೆ ಪ್ರಯಾಣ ಆರಂಭಿಸಿದರು. ಆಲ್ಬರ್ಟ್ ಸರೋವರಕ್ಕೆ ಹೋಗುವಾಗಿಗಿಂತ ಹೆಚ್ಚಿನ ಕಷ್ಟ ತೊಂದರೆಗಳನ್ನು ಅನುಭವಿಸಿ ಅವರು ಹಿಂದಿರುಗಬೇಕಾಯ್ತು. ಅದೃಷ್ಟವಶಾತ್ ಅವರಿಗೆ ಗುಲಾಮ ವ್ಯಾಪಾರಿಗಳ ಕಾರವಾನೊಂದು ಎದುರು ಗೊಂಡಿದ್ದರಿಂದ ಹೇಗೋ ಖಾರ್ಟೂಂ ತಲುಪಿದರು. ಆಗ ಅಕ್ಟೋಬರ್ 1865. ಅವರು ಅನ್ವೇಷಣ ಯಾತ್ರೆ ಹೊರಟು ಸರಿಯಾಗಿ ಐದುವರ್ಷ ಕಳೆದಿದ್ದವು.

ಆದರೆ ಬೇಕರ್‌ನ ಈ ಸುದೀರ್ಘಯಾತ್ರೆಯಿಂದ ಅನೇಕ ಸಮಸ್ಯೆಗಳಿಗೆ ಉತ್ತರ ಲಭಿಸಿತ್ತು. ಚಂದ್ರ ಪರ್ವತಗಳಿರುವುದು ಸತ್ಯವಾಗಿತ್ತು. ಅಲ್ಲೊಂದು ಬತ್ತದ ಚಿಲುಮೆಯಿಂದ ಈ ನದಿ ಹುಟ್ಟುತ್ತದೆಂಬ ವದಂತಿಯೂ ಹೆಚ್ಚು ಕಮ್ಮಿ ನಿಜವಾಗಿತ್ತು. ಆಲ್ಬರ್ಟ್ ಸರೋವರದಿಂದ ಈ ನದಿ ಚಿಕ್ಕ ಕೊರಕಲಿನಲ್ಲಿ ಚಿಲುಮೆಯಂತೆಯೇ ಆಸ್ಫೋಟಿಸಿ ನುಗ್ಗುತ್ತಿತ್ತು. ಸ್ಪೀಕೆ ನೋಡಿದ ನೈಲ್‌ನದಿ ನ್ಯಾನ್ಸಾ ಮಹಾಸರೋವರದಿಂದ ಹುಟ್ಟಿದರೂ ಅದು ಮತ್ತೆ ಆಲ್ಬರ್ಟ್ ಸರೋವರ ದೊಳಕ್ಕೆ ಪ್ರವಹಿಸಿ ಅಲ್ಲಿಂದ ಮರ್ಕಿಸನ್ ಜಲಪಾತದಲ್ಲಿ ಮರುಹುಟ್ಟು ಪಡೆಯುತ್ತಿತ್ತು.

ಬೇಕರ್ ದಂಪತಿಗಳ ಐದು ವರ್ಷದ ಮಹಾ ಸಾಹಸಕ್ಕೆ ಇಂಗ್ಲೆಂಡಿ ನಲ್ಲಿ ವೀರೋಚಿತ ಮರ್ಯಾದೆ ಸಿಕ್ಕಿತು. ಇಬ್ಬರಿಗೂ ಚಿನ್ನದ ಪದಕಗಳನ್ನು ನೀಡಿ ರಾಜಮರ್ಯಾದೆ ನೀಡಲಾಯ್ತು. ಬೇಕರ್ ಬರೆದ "ಆಲ್ಬರ್ಟ್ ಸರೋವರ",

This PDF was created using the Sonic PDF Creator.
To remove this watermark, please license this product at www.investintech.com

"ನೈಲ್ ಉಪನದಿಗಳು'' ಪುಸ್ತಕಗಳು ಲಕ್ಷಗಟ್ಟಲೆ ಪ್ರತಿಗಳು ಖರ್ಚಾದವು. ಒಂದೇ ವರ್ಷದೊಳಗೆ ಹಲವಾರು ಬಾರಿ ಪುನರ್ ಮುದ್ರಣ ಕಂಡವು. ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟರೂ ಈ ದಂಪತಿಗಳು ಕೊನೆಗೆ ಕೃತಾರ್ಥರಾದರು.

This PDF was created using the Sonic PDF Creator.
To remove this watermark, please license this product at www.investintech.com

# 5. ಮಹಾನ್ ಅನ್ವೇಷಕ 'ಲಿವಿಂಗ್ ಸ್ಟೋನ್'

ಆದೊಂದು ಉರಿಬಿಸಿಲಿನ ದಿನ. ನಾನು ಸಂತೆ ನಡೆಯುವ ಮೈದಾನದತ್ತ ಹೋದೆ. ಆಫ್ರಿಕದ ಅನೇಕ ಜನಾಂಗಗಳ ಜನರು ಪ್ರತಿವಾರ ಅಲ್ಲಿ ಬಂದು ವ್ಯಾಪಾರ ಮಾಡುತ್ತಿದ್ದರು. ಅಲ್ಲಿ ನಾನು ಆಡೇ ಮತ್ತು ಮನಿಲ್ಲಾನನ್ನೂ ಮತ್ತು ಈಚೆಗೆ ಹೊಸದಾಗಿ ದುಗುಂಬೇ ಜೊತೆ ಬಂದಿದ್ದ ಮೂವರು ಅಪರಿಚಿತರನ್ನು ಕಂಡೆ. ನನಗೆ ಆಶ್ಚರ್ಯವಾದುದೆಂದರೆ ಇವರೆಲ್ಲ ಬಂದೂಕುಗಳನ್ನು ನೇತುಹಾಕಿಕೊಂಡು ಸಂತೆ ಮೈದಾನದಲ್ಲಿ ರಳಾಯಿಸುತ್ತಿದ್ದರು. ಯಾರೂ ಆಯುಧಗಳೊಡನೆ ಸಂತೆಗೆ ಬರುತ್ತಿರಲಿಲ್ಲ. ಬಹುಶಃ ತಿಳಿಯದೆ ಇವರು ಬಂದೂಕಿನೊಡನೆ ಇಲ್ಲಿಗೆ ಬಂದಿದ್ದಾರೆಂದು ತಿಳಿದೆ.

ನಾನು ಅಲ್ಲಿಂದ ಹೋಗುತ್ತಿರಬೇಕಾದರೆ ಆ ಅಪರಿಚಿತರಲ್ಲೊಬ್ಬ ಒಬ್ಬ ಆಫ್ರಿಕನ್‌ನ ಕೋಳಿಯನ್ನು ಕಿತ್ತುಕೊಳ್ಳುತ್ತಿದ್ದ. ನಾನು ಅಲ್ಲಿಂದ ಸುಮಾರು ಮೂವತ್ತು ಗಜ ದೂರ ನಡೆದಿರಬಹುದಷ್ಟೆ. ಅಷ್ಟರೊಳಗೆ ಆ ಸಂತಯ ಗುಂಪಿನೊಳಗೆ ಢಮಾರ್ ಢಮಾರ್ ಎಂದು ಮೂರ್ನಾಲ್ಕು ಗುಂಡು ಹಾರಿದ ಶಬ್ದ ಕೇಳಿತು. ಹಿಂದಿರುಗಿ ನೋಡಿದಾಗ ಆಫ್ರಿಕನ್ನರು ತಾವು ತಂದಿದ್ದ ಸಾಮಾನುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದು ದಿಕ್ಕುದಿಕ್ಕುಗಳತ್ತ ಓಡುತ್ತಿರುವುದು ಕಂಡಿತು. ಅನೇಕರು ಪಕ್ಕದಲ್ಲೇ ಹರಿಯುತ್ತಿದ್ದ ನದಿಯತ್ತ ಓಡಿದರು. ಅಷ್ಟರಲ್ಲಿ ಒಂದರ ಹಿಂದೆ ಒಂದರಂತೆ ಗುಂಡಿನ ಸುರಿಮಳೆಯಾಗತೊಡಗಿತ್ತು. ಅನೇಕ ಹೆಂಗಸರೂ ಮಕ್ಕಳೂ ನೆಲಕ್ಕುರುಳಿ ಒದ್ದಾಡತೊಡಗಿದರು. ನದಿಯ

This PDF was created using the Sonic PDF Creator.
To remove this watermark, please license this product at www.investintech.com

ದಡದಲ್ಲಿ ಸಾಲಾಗಿ ನಿಲ್ಲಿಸಿದ ದೋಣಿಗಳಲ್ಲಿ ಕಿಕ್ಕಿರಿದು ಜನ ತುಂಬಿಕೊಂಡು ನದಿಯ ಆಚೆ ದಡದ ಕಡೆಗೆ ಪಲಾಯನ ಮಾಡತೊಡಗಿದರು.

ಒಂದಾದ ಮೇಲೊಂದರಂತೆ ದೋಣಿಗಳು ಮುಳುಗತೊಡಗಿದವು. ದಡದಿಂದ ದೋಣಿಗಳಲ್ಲಿದ್ದ ಜನರತ್ತಲೂ ಗುಂಡಿನ ಸುರಿಮಳೆಯಾಗತೊಡಗಿತು. ಸುಮಾರು ಒಂದು ಮೈಲಿಯಷ್ಟು ವಿಸ್ತಾರವಾಗಿದ್ದ ಆ ನದಿಯ ಅಗಲಕ್ಕೂ ಮುಳುಗುವ, ಆಕ್ರಂದನ ಮಾಡುವ ಸತ್ತು ತೇಲುವ ಮಾನವ ದೇಹಗಳೇ ಕಾಣ ತೊಡಗಿದವು. ನದಿಯ ಪ್ರವಾಹದಲ್ಲಿ ಅವರೆಲ್ಲಾ ತೀವ್ರಗತಿಯಲ್ಲಿ ಕೊಚ್ಚಿ ಹೋಗತೊಡಗಿದರು.

ಒಂದಾದ ಮೇಲೊಂದರಂತೆ ಈ ಅಮಾಯಕರ ಮೇಲೆ ಗುಂಡಿನ ಮಳೆ ಸುರಿಮಳೆಯಾಗತೊಡಗಿತು. ನನ್ನ ಸಹಾಯಕ ದುಗುಂಬೆ ಖಾಲಿ ನಿಂತಿದ್ದ ದೋಣಿ ಯೊಂದನ್ನು ತೆಗೆದುಕೊಂಡು ನದಿಯಲ್ಲಿ ಮುಳುಗುತ್ತಿದ್ದ ಹಲವರನ್ನು ರಕ್ಷಿಸಿದ. ಆದರೆ ಅನೇಕ ಹೆಂಗಸರು ಇವನೂ ಗುಲಾಮ ವ್ಯಾಪಾರಿ ಎಂದೇ ತಿಳಿದು ಏನು ಮಾಡಿದರೂ ದೋಣಿ ಹತ್ತದೆ ಮುಳುಗಿ ಸಾಯುವುದನ್ನೇ ಆರಿಸಿಕೊಂಡರು. ಸಂತೆಯ ಬಳಿ ಇದ್ದ ಅರಬ್ ಗುಲಾಮ ವ್ಯಾಪಾರಿಗಳು ಎಂಥ ರಕ್ತಪಿಪಾಸು ಗಳಾಗಿದ್ದರೆಂದರೆ ಗುಂಡು ಹಾರಿಸಿ ಆಫ್ರಿಕನ್ನರನ್ನು ಕೊಲ್ಲುವ ಭರದಲ್ಲಿ ಅವರು ತಮ್ಮ ಕಡೆಯವರನ್ನೇ ಅನೇಕರನ್ನು ಕೊಂದುಹಾಕಿದರು.

ಈ ಕೊಲೆಗಡುಕರನ್ನು ಕೂಡಲೇ ಗುಂಡುಹೊಡೆದು ಕೊಲ್ಲಬೇಕೆನ್ನು ವುದು ನನಗನ್ನಿಸಿದ್ದು. ಆದರೆ ದುಗುಂಬೆ ಇದಕ್ಕೆ ತೀವ್ರವಾಗಿ ಆಕ್ಷೇಪಿಸಿದ. ಏಕೆಂದರೆ ಆಫ್ರಿಕನ್ನರು ಈ ಬಿಳಿಯನೂ ರಕ್ತಪಾತದಲ್ಲಿ ಭಾಗಿಯಾಗಿ ಗುಂಡು ಹಾರಿಸುತ್ತಿದ್ದ ಎಂದು ತಿಳಿಯುತ್ತಾರೆಯೇ ಹೊರತು ಈತ ಯಾರ ಪರ ಗುಂಡು ಹಾರಿಸಿದ ಎಂದು ಅವರಿಗೆ ಗೊತ್ತಾಗುವುದಿಲ್ಲ ಎಂದು. ನನಗೂ ಅದು ಸರಿ ಎಂದೆನ್ನಿಸಿ ನನ್ನ ಭಾವೋದ್ವೇಗವನ್ನು ತಡೆದುಕೊಂಡೆ.

ಇದಾದನಂತರ ಈ ಅರಬ್ ಗುಲಾಮ ವ್ಯಾಪಾರಿ ಧೂರ್ತರು ಹಳ್ಳಿಗಳ ಮೇಲೆರಗಿ ಗುಂಡು ಹಾರಿಸುತ್ತ ಕೈಗೆ ಸಿಕ್ಕಿದವರನ್ನು ಹೆಡೆಮುರಿ ಕಟ್ಟಿ ಎಳೆ ದೊಯ್ಯುತ್ತಿದ್ದಾರೆ. ಈ ವರದಿಯನ್ನು ನಾನಿಲ್ಲಿ ಬರೆಯುತ್ತಾ ಇರಬೇಕಾದರೂ ನನಗೆ ದೂರದ ಹಳ್ಳಿಗಳ ಬಳಿ ಈ ಗುಲಾಮ ವ್ಯಾಪಾರಿಗಳು ಹಾರಿಸುತ್ತಿರುವ ಬಂದೂಕಿನ ಸದ್ದು, ಹಳ್ಳಿಗರ ಚೀತ್ಕಾರ ಕೇಳುತ್ತಿದೆ. ಈ ಕಗ್ಗತ್ತಲ ನಾಡೊ

This PDF was created using the Sonic PDF Creator.
To remove this watermark, please license this product at www.investintech.com

ಳಗಿನ ಕರಾಳ ಕೃತ್ಯಗಳನ್ನೆಂದು ಕೊನೆ ಮಾಡುವಿ ದೇವರೆ! ಲುಲಾಬಾ ನದಿಯ ತೀರದ ಈ ಮುಗ್ಧ ಆಫ್ರಿಕನ್ನರ ಆತ್ಮಗೌರವವನ್ನು ಏಕೆ ಕಾಪಾಡಲಾರೆ?

ಇಲ್ಲಿ ಇಷ್ಟೆಲ್ಲಾ ಸಂಭವಿಸುತ್ತಿರಬೇಕಾದರೆ ನನಗಿನ್ನು ಸಹಾಯಕ್ಕೆ ಮತ್ತು ಅನ್ವೇಷಣೆ ಮುಂದುವರಿಸಲು ಜನ ಮತ್ತು ದೋಣಿಗಳು ದೊರೆಯುವುದು ದುರ್ಲಭವೇ ಸರಿ.

ಈ ಮೇಲಿನ ಪ್ರತ್ಯಕ್ಷ ವರದಿ ಬರೆದಿರುವವನು ಇನ್ಯಾರೂ ಅಲ್ಲ. ಡಾ। ಡೇವಿಡ್ ಲಿವಿಂಗ್ ಸ್ಟೋನ್. ಆಫ್ರಿಕದ ಕಗ್ಗಾಡುಗಳ ನಡುವೆ ಈತ ಪದೇ ಪದೇ ಕಂಡ ಕರಾಳ ದೃಶ್ಯಗಳಲ್ಲಿ ಇದೊಂದು. ಲುಲಾಬಾ ಎನ್ನುವ ದೊಡ್ಡ ನದಿಯ ತೀರದ ಶಗಮೋಯೋ ಎನ್ನುವ ಊರಿನಲ್ಲಿ ಅರಬ್ ಗುಲಾಮ ವ್ಯಾಪಾರಿಗಳು ನಡೆಸಿದ ಕರಾಳ ಕೃತ್ಯ ಇದು. ಇದು ನಡೆದುದು 1871ನೇ ಇಸ್ವಿ ಜುಲೈ 15 ರಂದು.

ಲಿವಿಂಗ್ ಸ್ಟೋನ್‌ನ ನೈತಿಕ ಮತ್ತು ಮಾನವೀಯ ಕಾಳಜಿಗಳಿಗೆ ಈತನ ಈ ದಿನಚರಿಯ ಒಂದು ಪುಟ ಕನ್ನಡಿ ಹಿಡಿದಂತಿದೆ. ಲಿವಿಂಗ್ ಸ್ಟೋನ್ ಕೇವಲ ಸಾಹಸಿ ಅನ್ವೇಷಕ ಎನ್ನುವುದು ತುಂಬಾ ಕಷ್ಟ. ಎಷ್ಟೋ ಸಾರಿ ಲಿವಿಂಗ್ ಸ್ಟೋನ್ ಅನ್ವೇಷಿಸುತ್ತಿರುವುದು ನೈಲ್ ನದೀ ಮೂಲವನ್ನೋ, ಮನುಷ್ಯನ ಆತ್ಮವನ್ನೋ, ದೇವರನ್ನೋ, ಮಾನವನ ಜೀವನದ ಪರಮಗಂತವ್ಯವನ್ನೋ ಹೇಳುವುದೇ ಕಷ್ಟವಾಗುತ್ತದೆ. ಇದರಿಂದಾಗಿ ಈತ ಆಫ್ರಿಕದ ಅನ್ವೇಷಕರಲ್ಲಿ ಅಸಾಧಾರಣ ವ್ಯಕ್ತಿಯಾಗಿದ್ದಾನೆ.

ಬೇಕರ್ ಆಲ್ಬರ್ಟ್ ಸರೋವರವನ್ನು ಅನ್ವೇಷಿಸಿ ಸ್ಪೀಕೆ ನೋಡಿದ ನೈಲ್ ನದಿ ಆ ಸರೋವರಕ್ಕೆ ಬಂದು ಸೇರಿ ಅಲ್ಲಿಂದ ಮರುಹುಟ್ಟು ಪಡೆಯುತ್ತದೆ ಎಂದು ವರದಿ ಮಾಡಿದ ನಂತರ ಬೇಕರ್ ದಿಗಂತದಾಚೆ ಅತ್ಯಂತ ದೂರದಲ್ಲಿ ಕಂಡ ಚಂದ್ರಪರ್ವತಗಳು ಈ ಆಲ್ಬರ್ಟ್ ಸರೋವರಕ್ಕೆ ಯಾವುದಾದರೊಂದು ನದಿಯ ಮುಖಾಂತರ ನೀರೊದಗಿಸುತ್ತಿರಬಹುದು.

ಈ ಚಂದ್ರ ಪರ್ವತಗಳು ಟಾಂಗನೀಕಾ ಜಲಾನಯನ ಪ್ರದೇಶದಲ್ಲಿ ಇರುವುದರಿಂದ ಟಾಂಗನೀಕಿಯ ಸರೋವರದಿಂದ ಪಶ್ಚಿಮದಲ್ಲಿ ಉತ್ತರಕ್ಕೆ ಹರಿಯುವ ಲುಲಾಬಾ ನದಿಯೇ ನೈಲ್ ಮೂಲನದಿ ಇರಬಹುದು ಎಂದು ಬಲವಾದ ವಾಗ್ವಾದಗಳೆದ್ದು ಜಿಯೋಗ್ರಾಫಿಕಲ್ ಸೊಸೈಟಿ ಕೊನೆಗೆ ಡೇವಿಡ್ ಲಿವಿಂಗ್ ಸ್ಟೋನರನ್ನು ಇದನ್ನು ಅನ್ವೇಷಿಸಿ ತೀರ್ಮಾನ ಮಾಡುವಂತೆ ಕೇಳಿತು. ಲಿವಿಂಗ್

This PDF was created using the Sonic PDF Creator.
To remove this watermark, please license this product at www.investintech.com

ಸ್ಟೋನ್ ಆಗತಾನೆ ಜಾಂಬೇಜೀ ನದಿಯ ಮೂಲವನ್ನು ಅನ್ವೇಷಿಸಿ ಇಂಗ್ಲೆಂಡಿಗೆ ಹಿಂದಿರುಗಿದ್ದರು. ಮತ್ತೆ ಆಫ್ರಿಕಾಕ್ಕೆ ಹಿಂದಿರುಗುವ ಪ್ರಮೇಯ ಅವರಿಗೆ ಒದಗಿಬಂತು.

ಲಿವಿಂಗ್ ಸ್ಟೋನರೊಡನೆ ಜಾಂಬೇಜೀ ನದೀ ಮೂಲಕ್ಕೆ ಹೋಗಿದ್ದ ಕಿರ್ಕ್ ಎನ್ನುವವನೊಡನೆ ಈ ಸಾರಿ ಲಿವಿಂಗ್‌ಸ್ಟೋನ್ ಆಫ್ರಿಕದತ್ತ ಯಾನ ಮಾಡಿದರು. ಕಿರ್ಕ್ ಜಾಂಜಿಬಾರಿನಲ್ಲೇ ಉಳಿದು ಆಗಿಂದಾಗ್ಗೆ ಅಂಚೆ ಪತ್ರಗಳನ್ನೂ ದಿನಸಿ ಮುಂತಾದ ಅಗತ್ಯ ವಸ್ತುಗಳನ್ನೂ ಸಾಮಾನು ಹೊರುವ ಕೂಲಿಗಳನ್ನೂ ಕಳಿಸುತ್ತಾ ಲಿವಿಂಗ್ ಸ್ಟೋನರ ಅನ್ವೇಷಣೆ ನಿರಂತರವಾಗಿ ಸಾಗುವಂತೆ ನೋಡಿಕೊಳ್ಳಬೇಕೆಂದು ಏರ್ಪಾಟಾಗಿ ಲಿವಿಂಗ್ ಸ್ಟೋನ್ ಜಾಂಜಿಬಾರಿನಿಂದ ಹೊರಟು 1866ರಲ್ಲಿ ಟಾಂಗನೀಕಿಯಾ ಸರೋವರವನ್ನು ತಲುಪಿದರು.

ಇಲ್ಲಿಂದ ಮುಂದೆ ಲಿವಿಂಗ್ ಸ್ಟೋನರ ಅವಿರತ ಅನ್ವೇಷಣೆ ಸುಮಾರು ಏಳು ವರ್ಷಗಳ ಕಾಲ ಮುಂದುವರಿಯಿತು. ಲಿವಿಂಗ್ ಸ್ಟೋನರು ಸತತ ಅನ್ವೇಷಣೆಯಲ್ಲಿ ಕೊನೆಗೂ ನೈಲ್‌ನದಿಯ ವಾಗ್ವಾದವನ್ನು ಪರಿಹರಿಸುವಲ್ಲಿ ವಿಫಲರಾದರೂ ಅವರ ಅನ್ವೇಷಣೆ ಮನುಷ್ಯನ ಅದಮ್ಯ ಚೇತನದ ಅಭಿವ್ಯಕ್ತಿಯಾಗಿದೆ. ಈ ಅನ್ವೇಷಣೆ ಕೈಗೊಂಡಾಗಲೇ ಲಿವಿಂಗ್ ಸ್ಟೋನ್‌ರಿಗೆ 54 ವರ್ಷ ವಯಸ್ಸಾಗಿತ್ತು. ಹೆಂಡತಿಯೂ ಮಗನೂ ಅಕಾಲ ಮರಣದಿಂದ ಆಗಲೇ ಅವರನ್ನಗಲಿದ್ದರು. ಯಾವ ಜೊತೆಗಾರನ ಸಹಾಯವೂ ಇಲ್ಲದೆ ನಾಗರಿಕ ಜಗತ್ತು ನೋಡೇ ಇಲ್ಲದ ಅಪರಿಚಿತ ಆಫ್ರಿಕದಲ್ಲಿ ತಮ್ಮ ಬದುಕಿನ ಇಳಿಗಾಲದಲ್ಲಿ ಅವರು ಕೈಗೊಂಡ ಏಕಾಂಗಿ ಪರ್ಯಟನ ಕೊನೆಕೊನೆಗೆ ಅವರಿಗೆ ಒಂದು ತಪಸ್ಸೆಯಾಗಿ ಧ್ಯಾನವಾಗಿ ರೂಪಾಂತರಗೊಂಡಿತು.

ಆಫ್ರಿಕದ ಅಂತರಾಳದಲ್ಲಿ ನಡೆಯುತ್ತಿದ್ದ ಕ್ರೂರ ಗುಲಾಮರ ಬೇಟೆ ನರಹತ್ಯೆಗಳ ನಿಸ್ಸಹಾಯಕ ವೀಕ್ಷಕನಾಗಿ ಅವರು ವಹಿಸಿದ ಪಾತ್ರ ಇಡೀ ಹೊರಜಗತ್ತಿನ ಅಂತಃಕರಣವನ್ನೇ ಕಲಕಿತು. ನೈಲ್ ನದೀ ಮೂಲದ ವಾಗ್ವಾದವನ್ನು ಅಂತಿಮವಾಗಿ ಇತ್ಯರ್ಥ ಮಾಡಲು ಅವರಿಂದ ನೇರವಾಗಿ ಸಾಧ್ಯವಾಗದಿದ್ದರೂ ಅದನ್ನು ಸಾಧಿಸಿದ ವ್ಯಕ್ತಿಗೆ ಮುಂದೆ ಅವರೇ ನೇರವಾಗಿ ಸ್ಫೂರ್ತಿ ನೀಡಿದರು. ಅವರು ಈ ಮಧ್ಯ ಆಫ್ರಿಕದಲ್ಲಿ ಕೂಡಲೇ ಸಾಯದೆ ಹೇಗೆ ಬದುಕಿ ಉಳಿದರೆಂಬುದೇ ಪವಾಡ ಸದೃಶವಾಗಿದೆ.

This PDF was created using the Sonic PDF Creator.
To remove this watermark, please license this product at www.investintech.com

ಅವರ ಕೂಲಿಗಳೆಲ್ಲ ಓಡಿಹೋಗಿ ಅವರ ಉಗ್ರಾಣವನ್ನೆಲ್ಲಾ ಯಾರೋ ಕದ್ದು ಅವರ ಔಷಧ ಸಾಮಗ್ರಿಗಳನ್ನೆಲ್ಲಾ ಲೂಟಿ ಮಾಡಿದರು. ಜಾಯಿಲೆಯಿಂದ ನೆಲ ಹಿಡಿದ ಅವರ ಕಾಗದ ಪತ್ರಗಳನ್ನೂ ಟಪಾಲನ್ನೂ ಅರಬ್ ಗುಲಾಮ ವ್ಯಾಪಾರಿಗಳು ಉದ್ದೇಶಪೂರ್ವಕವಾಗಿಯೇ ನಾಶ ಮಾಡಿದರು. ಕಿರ್ಕ್ ಕಳಿಸಿದ ದವಸಧಾನ್ಯ ಮತ್ತಿತರ ವಸ್ತುಗಳೊಂದೂ ಅವರಿಗೆ ತಲುಪಲೇ ಇಲ್ಲ. ಅವರು ಹೇಗೋ ಸ್ವಪ್ರಯತ್ನದಿಂದ ಕೈಲಾದುದನ್ನು ದೊರಕಿಸಿಕೊಂಡು ಕೇವಲ ಮನಃಶಕ್ತಿಯಿಂದಲೇ ಲುಲಾಬಾ ನದಿಯನ್ನು ತಲುಪಿದಾಗ ಅವರ ಕೈಯ್ಯಲ್ಲಿ ಇದ್ದುದು ಬೈಬಲ್ ಒಂದೇ. ವರ್ಷಾನುಗಟ್ಟಲೆ ಈ ಅನ್ವೇಷಕನ ವರ್ತಮಾನ ವಾಗಲಿ, ಇರವಾಗಲೀ ತಿಳಿಯದೆ ಜಗತ್ತು ಈತ ಮಧ್ಯ ಆಫ್ರಿಕಾದಲ್ಲೆಲ್ಲೋ ಸತ್ತುಹೋಗಿರಬೇಕೆಂದು ಊಹಿಸಿತು. ಎಲ್ಲ ಈತನ ಆಸೆಯನ್ನು ತೊರೆದು ಮರೆತೇಬಿಟ್ಟರು.

ಈ ಲೇಖನದ ಮೊದಲಲ್ಲಿ ಕೊಟ್ಟಿರುವ ಚಿತ್ರಣ ಲಿವಿಂಗ್ ಸ್ಟೋನ್ ಇಂಥ ದಾರುಣ ಸನ್ನಿವೇಶದಲ್ಲಿ ಲುಲಾಬಾ ನದೀ ದಡದ ತಗಮೋಯೋ ಊರಿನಲ್ಲಿರಬೇಕಾದರ ಕಂಡದ್ದು. ಆಗ ಆತನೊಡನೆ ಆಪ್ತರಾಗಿ ಇದ್ದವರೆಂದರೆ ದುಗುಂಬೆ ಮತ್ತು ಕುಮಾ ಎನ್ನುವ ಆಫ್ರಿಕನ್ ಯುವಕರು ಹಾಗೂ ಸೂಸಿ ಎನ್ನುವ ನೀಗ್ರೋ ಹುಡುಗಿ.

ಲಿವಿಂಗ್ ಸ್ಟೋನ್‌ಗೆ ಏಕೆ ಸ್ಪೀಕೆ ನೋಡಿದ ನದಿ ನೈಲ್ ಮೂಲವಲ್ಲ ಎಂದು ಎನ್ನಿಸಿತೋ ಏನೋ! ಆತ ಒಟ್ಟಿನಲ್ಲಿ ಟಾಂಗನೀಕಿಯ ಸರೋವರದ ಬಳಿಯೆ ನೈಲ್ ಮೂಲ ಇದೆ ಎಂಬ ಬಲವಾದ ಪೂರ್ವಗ್ರಹದಿಂದ ಕೂಡಿದ್ದರು. ಎಲ್ಲಕ್ಕಿಂತ ಆಫ್ರಿಕದ ನಟ್ಟ ನಡುವಿನಿಂದ ಉತ್ತರಕ್ಕೆ ಹರಿಯುತ್ತಿದ್ದ ಲುಲಾಬಾ ನದಿಯೇ ನೈಲ್ ಮೂಲವೆಂದು ಆತ ಬಲವಾಗಿ ಶಂಕಿಸಿದ. ಇದೆಲ್ಲಾಕ್ಕಿಂತ ಮಿಗಿಲಾಗಿ ಪ್ರಾಚೀನ ಇತಿಹಾಸಕಾರ ಹಿರೋಡೋಟಸ್ ನೈಲ್ ನದಿಯು ಮಧ್ಯ ಆಫ್ರಿಕದ ಅಕ್ಷಯ ಚಿಲುಮೆಯೊಂದರಿಂದ ಚಿಮ್ಮಿ ಈಜಿಪ್ಟಿನ ಕಡೆಗೆ ಹರಿಯುತ್ತದೆ ಎಂದು ಹೇಳಿದ್ದು ಲಿವಿಂಗ್ ಸ್ಟೋನ್ ಮನಸ್ಸಿನ ಮೇಲೆ ಅಳಿಸಲಾರದ ಪರಿಣಾಮ ಬೀರಿತ್ತು. ಲುಲಾಬಾ ನದೀ ದಡದ ತಗಮೋಯೋ ಹಳ್ಳಿಯಲ್ಲಿ ಮಲೇರಿಯಾ ರೋಗಪೀಡಿತರಾದ ಲಿವಿಂಗ್ ಸ್ಟೋನ್ ಹಲ್ಲುಗಳನ್ನೆಲ್ಲಾ ಕಳೆದುಕೊಂಡು ಕೋಲೂರಿ ನಡೆಯಬೇಕಾದ ಸ್ಥಿತಿಗೆ ಬಂದಿದ್ದರು. ನಿರಾಸೆ ಮೆಲ್ಲಗೆ ಕವಿಯತೊಡಗಿತು..

This PDF was created using the Sonic PDF Creator.
To remove this watermark, please license this product at www.investintech.com

ಆಗ ಅವರು ಅನ್ವೇಷಣೆಗೆ ಹೊರಟು ಆರುವರ್ಷಗಳ ತರುವಾಯ ಪವಾಡ ದಂತೆ ಅವರೆದುರು ಇನ್ನೊಬ್ಬ ಯೂರೋಪಿಯನ್ ಅನ್ವೇಷಕ ಹಠಾತ್ತಾಗಿ ಪ್ರತ್ಯಕ್ಷನಾದ. ಅವನ ಕಾರವಾನಿನ ಎದುರಿನಲ್ಲಿ ಅಮೆರಿಕಾದ ಧ್ವಜ ಹಾರಾಡು ತ್ತಿತ್ತು. ಮೂಟೆಗಟ್ಟಲೆ ದವಸಧಾನ್ಯಗಳು. ಟೆಂಟುಗಳು, ಪಾತ್ರೆ ಪರಡಿಗಳು, ಔಷಧ ಸಾಮಗ್ರಿಗಳು ಹೇರಳವಾಗಿದ್ದವು. ಶೋಚನೀಯ ಅವಸ್ಥೆಯಲ್ಲಿದ್ದರೂ ಗಂಭೀರವಾಗಿ ಅವನನ್ನು ಲಿವಿಂಗ್ ಸ್ಟೋನ್ ವೀಕ್ಷಿಸಿದರು. ಬಂದ ವ್ಯಕ್ತಿ ಲಿವಿಂಗ್ ಸ್ಟೋನ್‌ರ ಎದುರು ನಿಂತು ಗೌರವದಿಂದ ತನ್ನ ಟೋಪಿಯನ್ನು ತೆಗೆದು ತಲೆಬಾಗಿ "ತಾವು ಡಾ। ಲಿವಿಂಗ್ ಸ್ಟೋನ್ ಎಂದು ಭಾವಿಸುತ್ತೇನೆ।" ಎಂದ. ಲಿವಿಂಗ್ ಸ್ಟೋನ್ ನಸುನಗುತ್ತ "ಹೌದು" ಎಂದರು. ಬಂದಾತ ಲಿವಿಂಗ್ ಸ್ಟೋನ್‌ರ ಕೈ ಕುಲುಕುತ್ತ "ನಿಮ್ಮನ್ನು ಜೀವಂತವಾಗಿ ನೋಡಲಾದುದಕ್ಕೆ ದೇವರಿಗೆ ವಂದನೆಗಳು" ಎಂದ. "ನಿಮ್ಮನ್ನು ಇಲ್ಲಿ ಸ್ವಾಗತಿಸಲು ನಾನು ಜೀಂತವಾಗಿರುವುದಕ್ಕೆ ನಾನು ದೇವರಿಗೆ ಕೃತಜ್ಞ" ಎಂದರು ಲಿವಿಂಗ್ ಸ್ಟೋನ್.

ಇಂಥ ದುರ್ದಮ್ಯ ಪರಿಸ್ಥಿತಿಯಲ್ಲಿ ಲಿವಿಂಗ್ ಸ್ಟೋನ್‌ರಿಗೆ ಆಶಾಕಿರಣ ದಂತೆ ಬಂದು ಸಂಧಿಸಿದವನ ಹೆಸರು ಸ್ಟಾನ್ಲಿ ಎಂದು. ಕಳೆದ ಶತಮಾನದ ಅತ್ಯಂತ ಅಸಾಧಾರಣ ಪತ್ರಕರ್ತನೆಂದು ಹೆಸರಾಂತ ಈ ವಿಲಕ್ಷಣ ವ್ಯಕ್ತಿ ಆ ಶತಮಾನದ ಪ್ರಮುಖ ಚಾರಿತ್ರಿಕ ಸಂದರ್ಭಗಳಲ್ಲೆಲ್ಲ ಕಾಕತಾಳ ನ್ಯಾಯವೋ ಎನ್ನುವಂತೆ ಅಲ್ಲಿರುತ್ತಿದ್ದ. ನೈಲ್‌ನದಿಯ ಮೂಲವನ್ನು ಅಂತಿಮವಾಗಿ ಕೊನೆ ಗೊಳಿಸಿದ ಈ ಅಮೆರಿಕನ್ ಪತ್ರಕರ್ತ ವಾಸ್ತವವಾಗಿ ಲಿವಿಂಗ್ ಸ್ಟೋನ್‌ರನ್ನು ಹುಡುಕಿಕೊಂಡು ಬಂದವನಲ್ಲ. ಆತನ ಜೀವನದ ಪ್ರಮುಖ ಕಾಕತಾಳ ನ್ಯಾಯ ಘಟನೆಗಳಲ್ಲಿ ಇದೊಂದಾಗಿತ್ತಷ್ಟೆ.

ಈ ಸ್ಟಾನ್ಲಿ ಯಾರು? ಇದ್ದಕ್ಕಿದಂತೆ ಆಫ್ರಿಕದ ಕಗ್ಗಾಡಿನ ನಡುವೆ ಲಿವಿಂಗ್ ಸ್ಟೋನರೆದುರು ಹೇಗೆ ಪ್ರತ್ಯಕ್ಷನಾದ?

ಸ್ಟಾನ್ಲಿ ಅಮೆರಿಕದ ನ್ಯೂ ಆರ್ಲಿಯನ್ಸ್‌ನಲ್ಲಿ ಹುಟ್ಟಿ ತೀರಾ ಬಡತನ ದಲ್ಲಿ ಬೆಳೆದು ಬಂದವ. ಸೈನಿಕನಾಗಿ ಅಮೆರಿಕ ಅಂತರ್ಯುದ್ಧದಲ್ಲಿ ಭಾಗಿ ಯಾಗಿದ್ದ. ಆಮೇಲೆ ಅಮೆರಿಕದಲ್ಲಿ ರೆಡಿಂಡಿಯನ್ನರ ಜೊತೆ ನಡೆದ ಯುದ್ಧ ದಲ್ಲಿ ಭಾಗಿಯಾಗಿ ಗಾಯಗೊಂಡು ಸೈನ್ಯದಿಂದ ನಿವೃತ್ತನಾದ. ಆಮೇಲೆ ಬ್ರಿಟಿಷ್ ಪತ್ರಕರ್ತನಾಗಿ ಅಬಿಸೀನಿಯಾದಲ್ಲಿ ಕೆಲಸ ಮಾಡಿದ. ಅಲ್ಲಿನ ಯುದ್ಧಗಳಲ್ಲಿ

This PDF was created using the Sonic PDF Creator.
To remove this watermark, please license this product at www.investintech.com

ಬರಿಯ ವರದಿ ಮಾಡುವುದಷ್ಟೇ ಅಲ್ಲದ ಭಾಗಿಯೂ ಆಗಿದ್ದ. ಒಟ್ಟಿನಲ್ಲಿ ಸ್ಟ್ಯಾನ್ಲಿ ಬಲವಾದ ನಿರ್ಧಾರದ ಉಕ್ಕಿನ ಮನಃಶಕ್ತಿಯ ಮನುಷ್ಯನಾಗಿದ್ದ.

'ನ್ಯೂಯಾರ್ಕ್ ಹೆರಾಲ್ಡ್' ಪತ್ರಿಕೆ ಆತನಿಗೆ ಸೂಯೆಜ್ ಕಾಲುವೆಯ ಆರಂಭೋತ್ಸವಕ್ಕೆ ಹಾಜರಾಗಿ ಅಲ್ಲಿನ ಸಂಗತಿಗಳನ್ನು ವರದಿ ಮಾಡಿ, ಅನಂತರ ಜೆರೂಸಲೆಂಗೆ ಹೋಗಿ ಅಲ್ಲಿಂದ ಕಾನ್‌ಸ್ಟ್ಯಾಂಟಿನೋಪಲ್ ಮತ್ತು ಕ್ರಿಮಿಯಾಗಳಿಗೆ ಹೋಗಿ ಅನಂತರ ಕ್ಯಾಸ್ಪಿಯನ್ ಸಮುದ್ರ, ಪರ್ಶಿಯಾ. ಇಂಡಿಯಾಗಳಿಗೆ ಹೋಗಿ ಅಮೆರಿಕದ ಜನರಿಗೆ ಕುತೂಹಲ ಕಾಣಬಹುದಾದುದೆಲ್ಲವನ್ನೂ ವರದಿ ಮಾಡು. ಇವೆಲ್ಲ ಮುಗಿದ ನಂತರ ಪ್ರಖ್ಯಾತ ಯೂರೋಪಿನ ಅನ್ವೇಷಕ ಲಿವಿಂಗ್ ಸ್ಟೋನ್ ಬಗ್ಗೆ ಏನಾದರೂ ತಿಳಿಯುತ್ತದೆಯೊ ಅನ್ವೇಷಣೆ ಮಾಡು. ಆತನೇನಾದರೂ ಅಲ್ಲಿಯೇ ಸತ್ತು ಹೋಗಿದ್ದರೆ ಅದಕ್ಕೆ ಸಂಬಂಧಿಸಿದ ಪ್ರತಿಯೊಂದು ಸಾಕ್ಷಿ ಮತ್ತು ದಾಖಲೆಗಳನ್ನೂ ತೆಗೆದುಕೊಂಡು ಬಾ ಎಂದು ಆಜ್ಞಾಪಿಸಿತ್ತು. ಹೀಗಾಗಿ ಸ್ಟ್ಯಾನ್ಲಿ ಬಹುದೊಡ್ಡ ಪ್ರವಾಸದ ಕೊನೆಯ ಹಂತವಾಗಿ ಮಧ್ಯ ಆಫ್ರಿಕಾಕ್ಕೆ ಬಂದಿದ್ದ.

ಸ್ಟ್ಯಾನ್ಲಿ ಲಿವಿಂಗ್ ಸ್ಟೋನ್‌ರನ್ನು ಅಂಥ ದುರ್ದೆಸೆಯಲ್ಲಿ ಸಂಧಿಸಿದ್ದು ಆತನ ಜೀವಮಾನದ ಅತ್ಯಂತ ಅಭೂತಪೂರ್ವ ಘಟನೆಯಾಗಿತ್ತು. ಲಿವಿಂಗ್ ಸ್ಟೋನ್‌ರನ್ನು ಮಧ್ಯದಲ್ಲೇ ತೊರೆದು ಓಡಿಹೋದ ಜಾಂಜಿಬಾರಿನ ಕೂಲಿಯಾಳು ಗಳು ಜಾಂಜಿಬಾರಿಗೆ ಹಿಂದಿರುಗಿ 1868ರಲ್ಲಿ ನ್ಯಾಸಾ ಸರೋವರದ ಬಳಿ ಲಿವಿಂಗ್ ಸ್ಟೋನ್‌ರು ಸತ್ತೇ ಹೋದರೆಂದು ಹೇಳಿ ತಾವು ಹಿಂದಿರುಗಿದುದಕ್ಕೆ ಕಾರಣ ಕೊಟ್ಟಿದ್ದರು. ಇದನ್ನೇ ಬ್ರಿಟನ್ನಿನ ಪತ್ರಿಕೆಗಳೆಲ್ಲಾ ವರದಿ ಮಾಡಿದ್ದವು.

ಜಿಯೋಗ್ರಾಫಿಕಲ್ ಸೊಸೈಟಿಯೂ ಕೊನೆಗೆ ಇದೇ ತೀರ್ಮಾನಕ್ಕೆ ಬಂದಿತ್ತು. ಇದನ್ನೆಲ್ಲಾ ಸ್ಟ್ಯಾನ್ಲಿ ಲಿವಿಂಗ್ ಸ್ಟೋನ್‌ರಿಗೆ ಹೇಳಿದ. ಸ್ಟ್ಯಾನ್ಲಿ ತನ್ನ ಬಳಿ ಇದ್ದ ಸರಕು ಸರಂಜಾಮುಗಳನ್ನೆಲ್ಲಾ ಲಿವಿಂಗ್ ಸ್ಟೋನ್‌ರಿಗೆ ಕೊಟ್ಟು ಲಿವಿಂಗ್ ಸ್ಟೋನ್‌ರ ಆರೋಗ್ಯ ಸುಧಾರಿಸುವಂತೆ ಮಾಡಿದ. ಇವರಿಬ್ಬರೂ ಕೂಡಿ ಟಾಂಗನೀಕಿಯಾ ಸರೋವರಕ್ಕೆ ಹರಿದು ಬರುತ್ತಿದ್ದ ರುಸೂಜಿ ನದೀ ಮೂಲವನ್ನು ಅನ್ವೇಷಿಸಿದರು. ಅನಂತರ ಸ್ಟ್ಯಾನ್ಲಿ ತಾನು ಜಾಂಜಿಬಾರಿಗೆ ಹೋಗಿ ಲಿವಿಂಗ್ ಸ್ಟೋನ್‌ರಿಗೆ ಇನ್ನಷ್ಟು ಸರಕು ಸರಂಜಾಮುಗಳನ್ನೂ, ಕೂಲಿಗಳನ್ನೂ ಕಳಿಸುವುದಾಗಿ ತಿಳಿಸಿ ಲಿವಿಂಗ್ ಸ್ಟೋನ್‌ರ ಅಮೂಲ್ಯ ವರದಿಗಳನ್ನ, ತನ್ನ

This PDF was created using the Sonic PDF Creator.
To remove this watermark, please license this product at www.investintech.com

ತ್ರಿಕೆಗೆ ಅವರಿಂದ ಒಂದು ವಿಶೇಷ ಲೇಖನವನ್ನೂ ತೆಗೆದುಕೊಂಡು ಜಾಂಜಿಬಾರಿನ ಡೆಗೆ ಹೊರಟ.

ಸ್ಟ್ಯಾನ್ಲಿ ಅತ್ತ ಹೋದನಂತರ ಲಿವಿಂಗ್ ಸ್ಟೋನ್ ಸ್ಟ್ಯಾನ್ಲಿ ಜಾಂಜಿಬಾರಿನಿಂದ ತರುವ ಕೂಲಿಗಳಿಗಾಗಿ ಏಕಾಂಗಿಯಾಗಿ ಕಾಯತೊಡಗಿದರು. ಈಗಾಗಲೇ ಅವರಿಗೆ 59 ವರ್ಷ ವಯಸ್ಸಾಗಿತ್ತು. ಅವರ ನೈಲ್ ನದೀ ಮೂಲದ ಅನ್ವೇಷಣೆ ಹೆಚ್ಚು ಕಡಿಮೆ ಒಂದು ಬಗೆಯ ಆಧ್ಯಾತ್ಮಿಕ ಅನ್ವೇಷಣೆಯಾಗಿ ಲಿವಿಂಗ್ ಸ್ಟೋನ್‌ಗೆ ಪರಿಣಮಿಸಿತು. 1872 ಇಸ್ವಿ ಆಗಸ್ಟ್‌ನಲ್ಲಿ ಸ್ಟ್ಯಾನ್ಲಿ ಕಳಿಸಿದ ಕೂಲಿಯಾಳುಗಳೂ ಆಹಾರ ಸಂಗ್ರಹವೂ ತಬೋರಾ ಬಂದು ತಲುಪಿತು. ಲಿವಿಂಗ್ ಸ್ಟೋನ್ ಟಾಂಗನೀಕಿಯಾ ಸರೋವರವನ್ನು ದಾಟಿ ಅಲ್ಲಿಂದ ನೇರವಾಗಿ ದಕ್ಷಿಣಕ್ಕೆ ಹೊರಟರು. ಇಲ್ಲಿ ಯಾವ ದಾರಿಯೂ ಇರಲಿಲ್ಲ. ಅರಬ್ ಗುಲಾಮ ವ್ಯಾಪಾರಿಗಳೂ ಇಲ್ಲಿ ಸುಳಿದಿರಲಿಲ್ಲ. ಲಿವಿಂಗ್ ಸ್ಟೋನ್ ಲುಲುಬಾ ನದಿ ಉತ್ತರಕ್ಕೆ ಹರಿದು ಬೇಕರ್ ನೋಡಿದ ಆಲ್ಬರ್ಟ್ ಸರೋವರವನ್ನು ಸೇರುತ್ತದೆಂದೂ, ಇದೇ ಮುಂದೆ ನೈಲ್ ಮಹಾನದಿ ಆಗುತ್ತದೆಂದೂ ತಿಳಿದಿದ್ದರು. ಅವರು ಈ ಪ್ರದೇಶಕ್ಕೆ ಹೋದ ನಂತರ ಮುಂದೇನಾಯ್ತೆಂದು ಯಾರಿಗೂ ಗೊತ್ತಿಲ್ಲ. 1873 ಮಾರ್ಚ್ 1ನೆಯ ತಾರೀಖು ಚಿತಾಂಬೊ ಎಂಬ ಜಾಗದಲ್ಲಿ ಪ್ರಾರ್ಥನೆ ಮಾಡುತ್ತಾ ಹಾಗೇ ಲಿವಿಂಗ್ ಸ್ಟೋನ್ ತೀರಿಕೊಂಡರು.

ಈ ವಿಷಯ ಹೊರಜಗತ್ತಿಗೆ ಗೊತ್ತಾದುದು ಇನ್ನೊಂದು ಹೃದಯಸ್ಪರ್ಶಿ ಸಂಗತಿಯಿಂದ. ಲಿವಿಂಗ್ ಸ್ಟೋನ್ ಹೇಗೆ ಆಫ್ರಿಕದ ಜನರ ಅಂತಃಕರಣಕ್ಕೆ ಹತ್ತಿರವಾಗಿದ್ದರೆಂದರೆ ಅವರ ಮರಣಾನಂತರ ಅವರ ಪಾರ್ಥಿವ ಶರೀರವನ್ನು ಕುಯ್ದು ಒಳಗಿನ ಕೊಳೆಯ ಬಹುದಾದ ಅಂಗಾಂಗಗಳನ್ನು ತೆಗೆದು ಅವರ ದೇಹವನ್ನು ಕೆಡದಂತೆ ಹಾಗೇ ಒಣಗಿಸಿ, ಅವರ ಅಳಿದುಳಿದ ಎಲ್ಲಾ ವಸ್ತುಗಳನ್ನೂ, ಅವರ ದೇಹವನ್ನೂ ಕುಮಾ ಮತ್ತು ಸೂಸಿಯೊಡನೆ ಆಫ್ರಿಕದ ಕಾಡುಜನರು ಕಳಿಸಿದರು. ಕುಮಾ ಮತ್ತು ಸೂಸಿ ಸಹಸ್ರಾರು ಮೈಲು ದೂರದ ಜಾಂಜಿಬಾರಿಗೆ ಚಿತಾಂಬೋದಿಂದ ಉಜಿಜಿ, ಉಜಿಜಿಯಿಂದ ತಬೋರಾ ಮಾರ್ಗವಾಗಿ ತಂದರು. ಲೆಕ್ಕವಿಲ್ಲದಷ್ಟು ಕಷ್ಟಗಳನ್ನೂ ಕಾಡುಮೃಗಗಳ ತೊಂದರೆಯನ್ನೂ ಗುಲಾಮ ವ್ಯಾಪಾರಿಗಳ ದಾಳಿಯನ್ನೂ ಮೀರಿ ಈ ಮುಗ್ಧ ಆಫ್ರಿಕನ್ ಯುವಕ ಯುವತಿಯರು ತಮ್ಮ ನೆಚ್ಚಿನ ಗುರುವಿನ ಅವಶೇಷಗಳನ್ನು ಆತನ ತಾಯ್ನಾಡಿಗೆ ತಲುಪಿಸಲು ತೆಗೆದುಕೊಂಡ ಶ್ರಮ, ಆಫ್ರಿಕನ್ ಜನರ ಮಾನವೀಯತೆಗೆ

This PDF was created using the Sonic PDF Creator.
To remove this watermark, please license this product at www.investintech.com

ಸಾಕ್ಷಿಗಳಾಗಿವೆ. ಚಿತಾಂಬೋ ತಬೋರಾ ಉಜಿಜಿಗಳಲ್ಲಿ ಲಿವಿಂಗ್ ಸ್ಟೋನ್ ಬದುಕಿದ್ದ ಗುಡಿಸಿಲುಗಳನ್ನು ಪುನರ್ರಚಿಸಿ ಈಗಲೂ ಅವರ ಸ್ಮರಣಾರ್ಥ ಉಳಿಸಲಾಗಿದೆ.

ಲಿವಿಂಗ್ ಸ್ಟೋನ್‌ರ ಪಾರ್ಥಿವ ಶರೀರ ಇಂಗ್ಲೆಂಡಿಗೆ ಬಂದ ನಂತರ ರಾಷ್ಟ್ರೀಯ ನಾಯಕನೆಂದು ಅವರನ್ನು ಗೌರವಿಸಲಾಯಿತ್ತು. ಲಿವಿಂಗ್ ಸ್ಟೋನ್ ರಿಂದ ನೈಲ್ ನದೀ ಮೂಲದ ಸಮಸ್ಯೆಯನ್ನು ಇತ್ಯರ್ಥ ಮಾಡಲಾಗಲಿಲ್ಲ. ಆದರೆ ಆಫ್ರಿಕದಲ್ಲಿ ಹೊರಜಗತ್ತಿನ ನಾಗರಿಕರು ನಡೆಸುತ್ತಿದ್ದ ಪೈಶಾಚಿಕ ಕೃತ್ಯಗಳನ್ನು ನಿಸ್ಸಹಾಯಕ ವೀಕ್ಷಕರಾಗಿ ವರದಿಮಾಡಿ ಇಡೀ ಯೂರೋಪಿನ ಜನರ ಅಂತಃಸಾಕ್ಷಿಯನ್ನು ಕಲಕಿಬಿಟ್ಟರು. ಆದ್ದರಿಂದಲೇ ಇವತ್ತು ಲಿವಿಂಗ್ ಸ್ಟೋನ್ ಸೋತರೂ ಗೆದ್ದ ಆಫ್ರಿಕದ ಮಹಾನ್ ಅನ್ವೇಷಕ.

This PDF was created using the Sonic PDF Creator.
To remove this watermark, please license this product at www.investintech.com

# 6. ನೈಲ್ ವಿವಾದದ ಕೊನೆಯ ಅಂಕ
# ಲುಲಾಬಾ ಮತ್ತು ಸ್ಟ್ಯಾನ್ಲಿ

ಲಿವಿಂಗ್ ಸ್ಟೋನ್ ತಮ್ಮ ಅನ್ವೇಷಣೆಯ ಕೊನೆಗಾಲದಲ್ಲಿರಬೇಕಾದರೆ ಅಲ್ಲಿಗೆ ಇದ್ದಕ್ಕಿದಂತೆ ಅವತರಿಸಿದ ಬಿಳಿಯ ಮನುಷ್ಯನ ಹೆಸರು ಸ್ಟ್ಯಾನ್ಲಿ ಎಂದು ನಾವು ಕೇಳಿದ್ದೇವೆ. ಸ್ಟ್ಯಾನ್ಲಿ ಜಾಂಜಿಬಾರಿಗೆ ಬಂದವ ಲಿವಿಂಗ್ ಸ್ಟೋನ್‌ರಿಗೆ ಕೂಲಿಯಾಳುಗಳನ್ನೂ, ದವಸಧಾನ್ಯಗಳನ್ನೂ ಕಳಿಸಿ ಅಲ್ಲಿಂದ ನೇರವಾಗಿ ಇಂಗ್ಲೆಂಡಿಗೆ ಹೊರಟ. ಸ್ಟ್ಯಾನ್ಲಿ ಸ್ವಭಾವತಃ ಪತ್ರಿಕರ್ತ ಅವನಿಗೆ ತಾನು ಲಿವಿಂಗ್ ಸ್ಟೋನ್‌ರನ್ನು ಪತ್ತೆ ಮಾಡಿದ್ದನ್ನು ನಾಗರೀಕ ಜಗತ್ತಿಗೆ ಆಘಾತವಾಗುವಂತೆ ನಾಟಕೀಯವಾಗಿ ತಿಳಿಸಿ ಗುಲ್ಲೆಬ್ಬಿಸಬೇಕಿತ್ತು. ಆಫ್ರಿಕದ ಅನ್ವೇಷಕರ ಸರಣಿಯಲ್ಲಿ ತನಗೊಂದು ಚಿರಸ್ಥಾಯಿಯಾದ ಸ್ಥಾನ ಮಾಡಿಕೊಳ್ಳಬೇಕಿತ್ತು.

ಹೋದವನ "How I found Living Stone" ಎನ್ನುವ ಪುಸ್ತಕ ಸಿದ್ಧಪಡಿಸಿದ. ಆವನ ಬಳಿ ಲಿವಿಂಗ್ ಸ್ಟೋನ್‌ರು ಕಳಿಸಿದ್ದ ಅಮೂಲ್ಯವಾದ ದಿನಚರಿ, ನೋಟ್ಸುಗಳು ಎಲ್ಲ ಇದ್ದವು. ಲಿವಿಂಗ್ ಸ್ಟೋನ್‌ರು ತಮ್ಮ ಸ್ವಹಸ್ತಾಕ್ಷರದಿಂದ ನ್ಯೂಯಾರ್ಕ್ ಹೆರಾಲ್ಡ್ ಪತ್ರಿಕೆಗೆ ಬರೆದುಕೊಟ್ಟಿದ್ದ ಲೇಖನ ಇತ್ತು. ಇವೆಲ್ಲವುಗಳಿಂದ ತಾನು ಕ್ಷಣಮಾತ್ರದಲ್ಲಿ ಹಣ ಸಂಪಾದಿಸಬಹುದೆಂದು ಅವನಿಗೆ ಗೊತ್ತಿತ್ತು. ಒಬ್ಬ ಕಳೆದೇ ಹೋಗಿದ್ದ, ಸತ್ತೇಹೋದನೆಂದು ತಿಳಿದಿದ್ದ ಮಹಾನ್ ಅನ್ವೇಷಕನನ್ನು ಪತ್ತೆ ಮಾಡಿದ್ದು ಅಸಾಧಾರಣ ಸಾಹಸವೆಂದು ಸ್ಟ್ಯಾನ್ಲಿಗೆ ಗೊತ್ತಿತ್ತು.

This PDF was created using the Sonic PDF Creator.
To remove this watermark, please license this product at www.investintech.com

ಜಾಂಜಿಬಾರಿನಲ್ಲಿ ಲಿವಿಂಗ್ ಸ್ಟೋನರಿಗೆ ಅಗ್ಗಿಂದಾಗ್ಗೆ ಪೋರ್ಟರುಗಳನ್ನೂ ದವಸಧಾನ್ಯಗಳನ್ನೂ ಕಳಿಸಲು ನಿಯಮಿಸಿದ್ದ ಕಿರ್ಕ್ ಈಗ ಸರ್ಕಾರದ ಅಧಿಕೃತ ಕಾನ್ಸುಲೇಟ್ ಆಗಿ ಜಾಂಜಿಬಾರಿನಲ್ಲಿ ನೇಮಕಗೊಂಡಿದ್ದ. ಅವನು ಅಮೆರಿಕನ್ನನಾದ ಸ್ಟ್ಯಾನ್ಲಿಯನ್ನು ಉಪೇಕ್ಷೆಯಿಂದ ನೋಡಿ ಸರಿಯಾಗಿ ಸಹಕರಿಸಿರಲಿಲ್ಲ. ಇದರೊಡನೆ ಲಿವಿಂಗ್ ಸ್ಟೋನ್ ಕೂಡ ಕಿರ್ಕ್ ಒಳ್ಳೆಯ ಪೋರ್ಟರುಗಳನ್ನು ಕಳಿಸಲಿಲ್ಲವೆಂದೂ, ಅವರಲ್ಲಿ ಬಹಳ ಜನ ಕಳ್ಳರೂ ಇದ್ದರೆಂದೂ, ತಮ್ಮ ಅನ್ವೇಷಣೆಗೆ ಇದರಿಂದ ತುಂಬಾ ತೊಂದರೆಯಾಯ್ತೆಂದು ತಿಳಿಸಿದ್ದರು. ಇದನ್ನೆಲ್ಲಾ ಸ್ಟ್ಯಾನ್ಲಿ ಮನಸ್ಸಿನಲ್ಲಿಟ್ಟುಕೊಂಡು ಮುಯ್ಯಿ ತೀರಿಸಲು ನಿರ್ಧರಿಸಿದ್ದ. ಲಿವಿಂಗ್ ಸ್ಟೋನ್‌ರು ತಮ್ಮ ವಿಶೇಷ ಲೇಖನದಲ್ಲಿ ಪೂರ್ವ ಆಫ್ರಿಕಾದ ಬರ್ಬರ ಗುಲಾಮ ವ್ಯಾಪಾರವನ್ನು ನಿಲ್ಲಿಸಲು ಕೊಂಚವಾದರೂ ಪ್ರಯತ್ನಿಸಿದರೆ ಅದು ತಮಗೆ ನೈಲ್ ನದೀ ಮೂಲವನ್ನು ಕಂಡುಹಿಡಿದುದಕ್ಕಿಂತಲೂ ಅತೀವ ಸಮಾಧಾನ ತರುತ್ತದೆ ಎಂದು ಬರೆದಿದ್ದರು. ಅವರ ಲೇಖನ ಮತ್ತು ಸ್ಟ್ಯಾನ್ಲಿಯ ವರದಿ ನ್ಯೂಯಾರ್ಕ್ ಹೆರಾಲ್ಡಿನಲ್ಲಿ ಒಮ್ಮೆಲೆ ಪ್ರಕಟವಾದ ಕೂಡಲೆ ಇಡೀ ಯೂರೋಪು ಚಕಿತಗೊಂಡಿತು.

ಸ್ಟ್ಯಾನ್ಲಿ ತಮ್ಮ ಒಬ್ಬ ಮಹಾನ್ ಅನ್ವೇಷಕನನ್ನು ಪತ್ತೆ ಮಾಡಿದನೆಂದು ಅವನಿಗೆ ಅಭೂತಪೂರ್ವ ಸನ್ಮಾನಗಳ ಸುರಿಮಳೆಯೇ ಆಯ್ತು, ರತ್ನಖಚಿತವಾದ ನಶ್ಯದ ಡಬ್ಬಿಯನ್ನೂ ಚಿನ್ನದ ಪದಕಗಳನ್ನೂ ಇಂಗ್ಲೆಂಡಿನ ರಾಣಿ ಕೊಟ್ಟು ಅರಮನೆಯಲ್ಲಿ ಸನ್ಮಾನಿಸಿದಳು. ಇವೆಲ್ಲಾ ಆದನಂತರ ಸ್ಟ್ಯಾನ್ಲಿ ಇಡೀ ಇಂಗ್ಲೆಂಡನ್ನು ಈವರೆಗೂ ಲಿವಿಂಗ್ ಸ್ಟೋನ್‌ರನ್ನು ಉಪೇಕ್ಷಿಸಿದ್ದಕ್ಕೆ ಸರಿಯಾಗಿ ತರಾಟೆಗೆ ತೆಗೆದುಕೊಂಡ. ಕಾನ್ಸುಲೇಟ್ ಜನರಲ್ ಕಿರ್ಕ್‌ನನ್ನು ಲಿವಿಂಗ್ ಸ್ಟೋನರಿಗೆ ದ್ರೋಹ ಬಗೆದನೆಂದು ಜರೆದು, ಅವನನ್ನು ಕೂಡಲೇ ನೌಕರಿಯಿಂದ ಡಿಸ್‌ಮಿಸ್ ಮಾಡಿಸಿದ. ಈ ಅಮೆರಿಕನ್ ಪತ್ರಕರ್ತ ಇಡೀ ಇಂಗ್ಲೆಂಡ್ ಚಕ್ರಾಧಿಪತ್ಯಕ್ಕೆ ದೊಡ್ಡ ತಲೆನೋವನ್ನು ತಂದನೆಂದು ಇಂಗ್ಲೆಂಡಿನ ಜನರು ಕೈಕೈ ಹಿಸುಕಿಕೊಂಡರು. ಇಂಗ್ಲೆಂಡಿನ ಪ್ರತಿಯೊಬ್ಬರ ಕೋಪವನ್ನೂ ಕೆರಳಿಸಿದ ಸ್ಟ್ಯಾನ್ಲಿ ತನ್ನ ಪತ್ರಕರ್ತನ ಚಾಣಾಕ್ಷತೆಯಿಂದ ಅವರನ್ನು ಸರಿಯಾದ ಇಕ್ಕಟ್ಟಿಗೆ ಸಿಕ್ಕಿಸಿ ಹಾಕಿದ.

ಆದರೆ ಸ್ಟ್ಯಾನ್ಲಿ ಬರಿ ಪ್ರಚಾರದಿಂದ ತೃಪ್ತನಾಗಿ ಕೂರಲಿಲ್ಲ. ಲಿವಿಂಗ್ ಸ್ಟೋನರ ಗಾಢವಾದ ಪ್ರಭಾವ ಆತನನ್ನು ಅನೇಕ ಅಚಲ ನಿರ್ಧಾರ

This PDF was created using the Sonic PDF Creator.
To remove this watermark, please license this product at www.investintech.com

ಗಳಿಗೆ ಕೊಂಡೊಯ್ದಿತ್ತು. ಲಿವಿಂಗ್ ಸ್ಟೋನ್‌ರ ಮರಣಾನಂತರ ತಾನು ಸುಮ್ಮನೆ ಕುಳಿತರೆ ತಾನೂ ಲಿವಿಂಗ್ ಸ್ಟೋನ್‌ರಿಗೆ ದ್ರೋಹ ಬಗೆದವರಲ್ಲಿ ಒಬ್ಬನಾಗುತ್ತೇನೆಂದು ಸ್ಟ್ಯಾನ್ಲಿಗೆ ಅನ್ನಿಸಿತು. ಸ್ಟ್ಯಾನ್ಲಿ ಈ ಸಾರಿ ಆಫ್ರಿಕದ ಎಲ್ಲ ಸಮಸ್ಯೆಗಳನ್ನೂ ಅಖೈರಾಗಿ ನಿರ್ಧರಿಸಿಬಿಡುತ್ತೇನೆಂದು ಮತ್ತೆ ಆಫ್ರಿಕಾಕ್ಕೆ ಹಿಂದಿರುಗಿದ.

ಆಫ್ರಿಕದ ಅನ್ವೇಷಕರ ಚರಿತ್ರೆಯನ್ನು ನೋಡಿದರೆ ಆಫ್ರಿಕದ ಮಾಂತ್ರಿಕ ಆಕರ್ಷಣೆಯ ಬಗ್ಗೆ ಆಶ್ಚರ್ಯವಾಗುತ್ತದೆ. ಪ್ರತಿಯೊಬ್ಬರೂ ಕ್ರೂರ, ಭಯಾನಕ, ಅನಾಗರೀಕ, ಬರ್ಬರ ಎಂದೆಲ್ಲಾ ವರ್ಣಿಸಿ ಹೇಗಾದರೂ ಮಾಡಿ ಆಫ್ರಿಕದಿಂದ ಪಾರಾಗಬೇಕೆಂದು ಹಿಂದಿರುಗುತ್ತಾರೆ. ಆದರೆ ಕೆಲವೇ ಕಾಲದೊಳಗೆ ಲಿವಿಂಗ್ ಸ್ಟೋನ್‌ನಂಥ ವಿದ್ವಾಂಸನಾಗಲೀ, ಸ್ಪೀಕೆಯಂಥ ಸೈನಿಕನಾಗಲೀ, ಬೇಕರ್‌ನಂಥ ರಾಜಕಾರಣಿಯಾಗಲೀ ಮತ್ತೆ ಆಫ್ರಿಕದ ಮಾಂತ್ರಿಕ ಗುರುತ್ವಾಕರ್ಷಣೆಗೆ ಒಳಗಾಗಿ ಹಿಂದಿರುಗಿದ್ದನ್ನು ನೋಡುತ್ತೇವೆ. ಆದರೆ ಸ್ಟ್ಯಾನ್ಲಿ ಇವರೆಲ್ಲರಿಗಿಂತ ಬೇರೆ ರೀತಿಯವನು. ಒಂದು ರೀತಿಯ ನಿರ್ದಾಕ್ಷಿಣ್ಯ ಸ್ವಭಾವದ ಮನುಷ್ಯ ತನ್ನ ಧ್ಯೇಯೋದ್ದೇಶಗಳ ಆಚೆಗೆ ಏನನ್ನೂ ಲಕ್ಷಿಸದವನು.

ಈ ಸಾರಿ ಸ್ಟ್ಯಾನ್ಲಿ ಮತ್ತೆ ಆಫ್ರಿಕಾಕ್ಕೆ ಹಿಂದಿರುಗಿದ್ದಕ್ಕೆ ಮೊದಲ ಕಾರಣ ಸ್ಪೀಕೇ ನೋಡಿದ ನ್ಯಾನ್ಸಾ ಮಹಾಸರೋವರ ಇಲ್ಲವೇ ಇಲ್ಲವೆಂದು ಆಫ್ರಿಕಾದ ಭೂಪಟದಲ್ಲಿ ಆ ಜಾಗವನ್ನು ಹಲವಾರು ಚಿಕ್ಕ ಚಿಕ್ಕ ಸರೋವರಗಳಾಗಿ ಗುರುತಿಸಲಾಗಿತ್ತು. ಎರಡನೆಯದಾಗಿ ಲುಲಾಬಾ ನದಿ ಉತ್ತರದ ಕಡೆಗೆ ಹರಿಯುತ್ತಿತ್ತು. ಅದು ಮುಂದುವರೆದು ಆಲ್ಬರ್ಟ್ ಸರೋವರವನ್ನು ಸೇರುವುದಾದರೆ ಲುಲಾಬಾ ನದಿಯೇ ಮೂಲ ನೈಲ್ ನದಿಯಾಗುತ್ತದೆ. ಎಂದರೆ ಬರ್ಟನ್ ವಾದದಂತೆ ಟಾಂಗನೀಕಾ ಜಲಾನಯನ ಪ್ರದೇಶವೇ ನೈಲ್ ನದೀ ಮೂಲವಾಗುತ್ತದೆ. ಇದನ್ನೆಲ್ಲಾ ಲಿವಿಂಗ್ ಸ್ಟೋನ್ ತೀರ್ಮಾನಮಾಡದೆ ಅಕಾಲ ಮರಣಕ್ಕೆ ತುತ್ತಾಗಿದ್ದು ಸ್ಟ್ಯಾನ್ಲಿಯ ಅಚಲ ನಿರ್ಧಾರಕ್ಕೆ ಕಾರಣ.

ಈ ಸಾರಿ ಸ್ಟ್ಯಾನ್ಲಿ ಅತ್ಯಂತ ದೂರಾಲೋಚನೆಯಿಂದ ತನ್ನ ಅನ್ವೇಷಕರ ತಂಡವನ್ನು ರೂಪಿಸಿದ್ದ. ಇಬ್ಬರು ಯೂರೋಪಿಯನ್ನರನ್ನು ತನ್ನೊಡನೆ ಕರೆದೊಯ್ದ. ಸುಮಾರು ಮೂನ್ನೂರು ಜನ ಕೂಲಿಗಳ ದೊಡ್ಡ ಸೈನ್ಯವನ್ನೇ ಒಟ್ಟುಮಾಡಿದ್ದ. ಎಲ್ಲಕ್ಕಿಂತ ಲೇಡಿ ಅಲೀಸ್ ಎನ್ನುವ ದೊಡ್ಡ ದೋಣಿಯೊಂದನ್ನು ಭಾಗ ಭಾಗಗಳಾಗಿ ಕಳಚಿ ತನ್ನೊಡನೆ ಒಯ್ದಿದ್ದ. ನ್ಯಾನ್ಸಾ ಸರೋವರದ ದಾರಿಯಲ್ಲಿ ತೊಂದರೆ ಕೊಟ್ಟ ಆಫ್ರಿಕನ್ನರನ್ನೂ ಅರಬ್ಬರನ್ನೂ

This PDF was created using the Sonic PDF Creator.
To remove this watermark, please license this product at www.investintech.com

ಯುದ್ಧಮಾಡಿ ಸೋಲಿಸಿ ಓಡಿಸಿದ. ಒಟ್ಟನಲ್ಲಿ ಸ್ಟಾನ್ಲಿಯ ಅನ್ವೇಷಣೆ ಎಂದರೆ ಒಂದು ದಂಡಯಾತ್ರೆಯ ರೀತಿ ಇತ್ತು. ಅಂತೂ ಸ್ಟಾನ್ಲಿ ಜಾಂಜಿಬಾರಿನಿಂದ ಹೊರಟು ನ್ಯಾನ್ಸಾ ಬಳಿಯ ಮೆವಾನ್ಸಾ ಊರನ್ನು ತಲುಪಿ ಸ್ಪೀಕೇ ಅನೇಕ ವರ್ಷಗಳ ಹಿಂದೆ ನಿಂತು ಈ ಸರೋವರವನ್ನು ನೈಲ್‌ನದೀ ಮೂಲವೆಂದು ಊಹಿಸಿದ್ದ ಜಾಗಕ್ಕೇ ಬಂದ.

ಆದರೆ ಸ್ಟಾನ್ಲಿ ಸ್ಪೀಕೆಯಂತೆ ಊಹಿಸಿ ತೀರ್ಮಾನಕ್ಕೆ ಬರುವ ಮನುಷ್ಯ ನಾಗಿರಲಿಲ್ಲ. ಕೆಲವು ಜನ ಆಫ್ರಿಕನ್ನರನ್ನೂ ಮತ್ತು ತನ್ನೊಡನಿದ್ದ ಇಬ್ಬರು ಯೂರೋಪಿಯನ್ ಸಹಾಯಕರನ್ನೂ ಕರೆದುಕೊಂಡು ಲೇಡಿ ಆಲೀಸ್ ದೋಣಿ ಯಲ್ಲಿ ಯಾನ ಹೊರಟೇಬಿಟ್ಟ. ಇಡೀ ನ್ಯಾನ್ಸಾ ಮಹಾಸರೋವರವನ್ನು ಪೂರ್ತಿ ಒಂದು ಸುತ್ತು ಹಾಕುವುದೇ ಅವನ ಉದ್ದೇಶವಾಗಿತ್ತು. ಆ ಸರೋವರ ಎಷ್ಟೊಂದು ವಿಸ್ತಾರವಾಗಿತ್ತೆಂದರೆ ಮೂರು ವಾರಗಳ ಅವಿರತ ಶ್ರಮದಿಂದ ಅವನು ಅದರ ಪೂರ್ವತೀರವನ್ನು ಸುತ್ತುಹಾಕಿಕೊಂಡು ಸ್ಪೀಕೆ ನೋಡಿದ್ದ ರಿಪ್ಪನ್ ಜಲಾಶಯದ ಬಳಿಗೆ ಬಂದ. ಅಲ್ಲಿ ಕೆಂಪು ನಿಲುವಂಗಿ ಧರಿಸಿದ್ದ ಮಟೂಸಾನ ಆಸ್ಥಾನಿಕರು ಅವನನ್ನು ಸ್ವಾಗತಿಸಲು ಕಾದಿದ್ದರು. 1885 ಏಪ್ರಿಲ್ 5 ರಂದು ಸ್ಟಾನ್ಲಿ ಮಟೂಸಾನ ಆಸ್ಥಾನಕ್ಕೆ ಹೋದ.

ಸ್ಪೀಕೆ ಕಾಲಕ್ಕೂ ಸ್ಟಾನ್ಲಿ ಕಾಲಕ್ಕೂ ಮಟೂಸನ ರಾಜ್ಯದಲ್ಲಿ ತುಂಬಾ ಬದಲಾವಣೆಗಳಾಗಿದ್ದವು. ಆತ ಹೊರಗಿನ ರಾಜ್ಯಗಳೊಡನೆ ವಾಣಿಜ್ಯ ವ್ಯವಹಾರ ಮಾಡುವಷ್ಟು ಮುಂದುವರಿದಿದ್ದ. ಬಂದೂಕು ಈಗ ಅವನ ಬಳಿ ಸಾಕಷ್ಟು ಇದ್ದಿತು, ಮತ್ತು ಆಸ್ಥಾನದಲ್ಲಿ ಹೆಂಗಸರನ್ನು ಕೊಲ್ಲುವ ಕ್ರೂರ ವಿನೋದ ನಿಂತಿತ್ತು. ಅವನ ಕೊಬ್ಬಿದ ಹೆಂಡಿರುಗಳ ಸಮೂಹ 300ಕ್ಕಿಂತ ಹೆಚ್ಚಾಗಿತ್ತು. ಅವನ ಆಸ್ಥಾನ, ನಡವಳಿಕೆಗಳಿಂದ ಪ್ರಭಾವಿತನಾದ ಸ್ಟಾನ್ಲಿ ಬ್ರಿಟಿಷ್ ಸರ್ಕಾರಕ್ಕೆ ಇಲ್ಲಿಗೆ ಕೂಡಲೆ ಮಿಷಿನರಿಗಳನ್ನು ಕಳಿಸುವುದು ಸೂಕ್ತವೆಂದು ಶಿಫಾರಸು ಮಾಡಿದ. ಸ್ಟಾನ್ಲಿ ಮಟೂಸಾನ ಆಸ್ಥಾನದಲ್ಲಿರಬೇಕಾದರೆ ಗೊಂಡೋಕೋರೋ ದಿಂದ ಒಬ್ಬ ಫ್ರೆಂಚ್ ರಾಜಕಾರಣಿ ಬೆಲ್‌ಫ್ರಾಂಡ್ಸ್ ಎನ್ನುವವನು ಬಂದಿದ್ದ. ಅವನ ಮೂಲಕ ನ್ಯಾನ್ಸಾ ಸರೋವರದ ವರದಿಗಳನ್ನು ಕಳಿಸಿ ಸ್ಟಾನ್ಲಿ ತನ್ನ ಯಾನ ಮುಂದುವರಿಸಿದ.

ನ್ಯಾನ್ಸಾ ಸರೋವರದ ದಕ್ಷಿಣದಿಂದ ರಿಪ್ಪನ್ ಜಲಾಶಯದವರೆಗೆ ಮತ್ತು ಅಲ್ಲಿಂದ ಹಿಂದಕ್ಕೆ ಹೊರಟ ಜಾಗಕ್ಕೆ ಸುತ್ತಿಕೊಂಡು ಬರಲು ಸ್ಟಾನ್ಲಿ

This PDF was created using the Sonic PDF Creator.
To remove this watermark, please license this product at www.investintech.com

1157 ಮೈಲುಗಳನ್ನು ದೋಣಿಯಲ್ಲಿ ಕ್ರಮಿಸಿದ್ದ. ಸ್ಪೀಕೇ ಊಹಿಸಿದ್ದು ಚಾಚೂ ತಪ್ಪದೆ ಸತ್ಯವಾಗಿತ್ತು. ನ್ಯಾನ್ಸಾ ಸರೋವರ ಅನೇಕ ಸರೋವರಗಳ ಗುಂಪಾಗಿರದೆ ಒಂದೇ ಒಂದು ಮಹಾನ್ ಸರೋವರವಾಗಿತ್ತು. ಆ ಸರೋವರದಿಂದ ನೀರು ರಿಪ್ಪನ್ ಜಲಾಶಯದಲ್ಲಿ ಮಾತ್ರ ಹೊರಹೋಗುತ್ತಿತ್ತು. ಸ್ಪೀಕೇಯನ್ನು ವಿರೋಧಿಸುವವರ ಬಹುಪಾಲು ಆಕ್ಷೇಪಣೆಗಳೆಲ್ಲಾ ಸುಳ್ಳಾಯ್ತು.

ಈಗ ಉಳಿದದ್ದು ರಿಪ್ಪನ್ ಜಲಾಶಯದಲ್ಲಿ ಧುಮ್ಮಿಕ್ಕಿ ಮುಂದುವರಿಯುವ ನದಿಯೇ ನೈಲ್ ಹೌದೋ ಅಲ್ಲವೋ ಎಂಬುದು. ಸ್ಟ್ಯಾನ್ಲಿ ಟಾಂಗನೀಕಿಯ ಸರೋವರವನ್ನು ಪೂರ್ತಿ ಅನ್ವೇಷಿಸಿ ಬೇಕರ್ ನೋಡಿದ ಆಲ್ಬರ್ಟ್ ಸರೋವರಕ್ಕೂ ಇದಕ್ಕೂ ಏನಾದರೂ ಸಂಬಂಧವಿದೆಯೆ ನೋಡಬೇಕೆಂದು ನಿರ್ಧರಿಸಿದ. ಇದಕ್ಕೆ ಮೊದಲು ನ್ಯಾನ್ಸಾ ಸರೋವರದಲ್ಲಿನ ಒಂದು ದ್ವೀಪವಾದ ಬುಂಬೀರೆಯ ಆದಿವಾಸಿಗಳ ಮೇಲೆ ಸೇಡು ತೀರಿಸಬೇಕಿತ್ತು. ಏಕೆಂದರೆ ಅವನು ಲೇಡಿ ಆಲೀಸ್‌ನಲ್ಲಿ ನ್ಯಾನ್ಸಾ ಸರೋವರವನ್ನು ಸುತ್ತಿಬರಲು ಹೊರಟಾಗ ಅವರು ಅವನಿಗೆ ಸಾಕಷ್ಟು ತೊಂದರೆ ಮಾಡಿದ್ದರು. ಅದಕ್ಕಾಗಿ ಸ್ಟ್ಯಾನ್ಲಿ ತನ್ನೊಡನಿದ್ದ ಅಷ್ಟೂ ಜನರನ್ನೂ ದೋಣಿಗಳಲ್ಲಿ ಕರೆದುಕೊಂಡು ಹೋದ.

ಬುಂಬೀರೆಯ ಜನ ಭರ್ಜಿ, ಬಿಲ್ಲು ಬಾಣಗಳೊಡನೆ ಸನ್ನದ್ಧರಾಗಿ ತೀರದಲ್ಲಿ ನಿಂತಿದ್ದರು. ಸ್ಟ್ಯಾನ್ಲಿ ತೀರದಲ್ಲಿ ದೋಣಿ ಇಳಿಯದೆ ದೋಣಿಯಿಂದಲೇ ಅವರತ್ತ ಗುಂಡಿನ ಸುರಿಮಳೆ ಶುರುಮಾಡಿದ. ಭರ್ಜಿ, ಈಟಿ ಮುಂತಾದವುಗಳನ್ನು ಹಿಡಿದು ಇವರ ರುಂಡ ಚೆಂಡಾಡಲು ನಿಂತಿದ್ದ ಈ ಆಫ್ರಿಕನ್ ಯೋಧರು ಏನೂ ಮಾಡಲಾರದೆ ನಾಶವಾದರು. ತನ್ನ ಅನ್ವೇಷಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಸ್ಟ್ಯಾನ್ಲಿ ಈ ಆಫ್ರಿಕನ್ನರ ಮೇಲೆ ಯುದ್ಧ ಮಾಡಿ ಮುಯ್ಯಿ ತೀರಿಸಲು ಹೋದುದು ಸ್ಟ್ಯಾನ್ಲಿಯ ಮನೋವೃತ್ತಿಗೆ ಒಂದು ಸಾಕ್ಷಿ. ಲಿವಿಂಗ್ ಸ್ಟೋನ್ ಒಡನಾಡಿಯಾಗಿ ಆತನಿಂದ ಪ್ರಭಾವಗೊಂಡಿದ್ದರೂ ಅನೇಕ ವಿಷಯಗಳಲ್ಲಿ ಸ್ಟ್ಯಾನ್ಲಿ ಲಿವಿಂಗ್ ಸ್ಟೋನ್‌ಗಿಂತ ಭಿನ್ನವಾಗಿದ್ದ. ಆಫ್ರಿಕದ ಜನತೆಯ ಬಗ್ಗೆ ಲಿವಿಂಗ್ ಸ್ಟೋನರಲ್ಲಿ ಇದ್ದ ಕರುಣೆ ಅನುಕಂಪಗಳಾವುವೂ ಸ್ಟ್ಯಾನ್ಲಿಯಲ್ಲಿ ಇರಲಿಲ್ಲ.

ಸ್ಟ್ಯಾನ್ಲಿ ಬುಂಬೀರೆಯ ಯುದ್ಧದ ನಂತರ ಖರಾಗ್ವೆ ಕಡೆಗೆ ಪ್ರಯಾಣ ಬೆಳೆಸಿದ. ಚಂದ್ರ ಪರ್ವತಗಳೆಂದು ಕರೆಯಲ್ಪಡುವ ಈಗಿನ ರುವೆಂಸೋರಿ ಪರ್ವತ ಶ್ರೇಣಿಗಳ ಕಡೆಯಿಂದ ಆಲ್ಬರ್ಟ್ ಸರೋವರಕ್ಕೆ ಯಾವ ನದಿ ಹೋಗುತ್ತದೆ ತಿಳಿದು ಅನಂತರ ಟಾಂಗನೀಕಿಯ ಸರೋವರಕ್ಕೂ ಆಲ್ಬರ್ಟ್ ಸರೋವರಕ್ಕೂ ಸಂಬಂಧ

This PDF was created using the Sonic PDF Creator.
To remove this watermark, please license this product at www.investintech.com

ವಿದಯ ಪರಿಶೀಲಿಸುವುದು ಆವನ ಉದ್ದೇಶವಾಗಿತ್ತು. ಅಲ್ಲಿ ಖರಾಗ್ವೆ ದೊರೆ ರುಮಾನೀಕನ ಆಸ್ಥಾನಕ್ಕೆ ಹೋದ. ರುಮಾನೀಕನ ಆಸ್ಥಾನದಲ್ಲಿ ಸುಮಾರು ಒಂದು ತಿಂಗಳ ಕಾಲ ವಿರಾಮ ತೆಗೆದುಕೊಂಡು ಅಲ್ಲಿಂದ ಟಾಂಗನೀಕಿಯಾ ಸರೋವರದ ಕಡೆಗೆ ದಕ್ಷಿಣಕ್ಕೆ ಮುಂದುವರಿದ. ಅವನು ಟಾಂಗನೀಕಿಯಾ ಸರೋವರದ ಬಳಿಯ ಉಜಿಜಿ ಊರಿಗೆ ಬಂದಾಗ ಒಂದು ಆಶ್ಚರ್ಯ ಕಾದಿತ್ತು. ಟಾಂಗನೀಕಿಯಾ ಸರೋವರದ ನೀರು ಅಗಾಧವಾಗಿ ಏರಿತ್ತು. ಉಜಿಜಿ ಸಂತೆ ಮೈದಾನವೆಲ್ಲಾ ಸುಮಾರು 200 ಅಡಿ ನೀರಿನಲ್ಲಿ ಮುಳುಗಿ ನಿಂತಿತ್ತು. ಇದನ್ನು ನೋಡಿದ ಸ್ಟಾನ್ಲಿಗೆ ಈ ಸರೋವರದಿಂದ ಹೊರಕ್ಕೆ ನೀರು ಹೋಗಲು ದಾರಿಗಳಿಲ್ಲ ಎಂದೆನ್ನಿಸಿತು.

1876 ರಲ್ಲಿ ಉಜಿಜಿಗೆ ಬಂದವನೇ ತನ್ನ ಲೇಡಿಆಲೀಸ್ ದೋಣಿಯನ್ನು ನೀರಿಗಿಳಿಸಿ ಇಡೀ ಟಾಂಗನೀಕಿಯಾ ಮಹಾಸರೋವರವನ್ನು ಸುತ್ತಿ ಬರಲು ಹೊರಟ. ಸ್ಟಾನ್ಲಿಯ ಊಹೆ ನಿಜವಾಗಿತ್ತು. ಟಾಂಗನೀಕಿಯಾ ಸರೋವರದಿಂದ ಹೊರಕ್ಕೆ ಹರಿಯುವ ಯಾವುದೇ ಪ್ರಧಾನವಾದ ನದಿಯೂ ಸ್ಟಾನ್ಲಿಗೆ ಕಾಣ ಬರಲಿಲ್ಲ. ಟಾಂಗನೀಕಿಯಾ ಸರೋವರಕ್ಕೂ ನೈಲ್‌ನದಿ ಮರುಹುಟ್ಟು ಪಡೆಯುವ ಆಲ್ಬರ್ಟ್ ಸರೋವರಕ್ಕೂ ಯಾವುದೇ ಸಂಬಂಧವೂ ಇಲ್ಲವೆಂದು ತೀರ್ಮಾನ ವಾದಂತಾಯ್ತು. ಸ್ಪೀಕ್ ವಿರುದ್ಧ ಇದ್ದವರ ಎಲ್ಲ ವಾದಗಳೂ ಪೊಳ್ಳೆಂದು ಸ್ಟಾನ್ಲಿ ಸಾಬೀತು ಮಾಡಿದ.

ಸ್ಟಾನ್ಲಿಗೆ ಈಗ ಉಳಿದಿದ್ದು ಒಂದೇ ಒಂದು. ಟಾಂಗನೀಕಿಯಾ ಸರೋವರದ ಪಶ್ಚಿಮಕ್ಕೆ ಇರುವ ಲುಲಾಬಾ ನದಿ ಉತ್ತರ ದಿಕ್ಕಿನ ಕಡೆಗೆ ಹರಿಯುತ್ತದೆ. ಇದು ಪ್ರಧಾನ ನೈಲ್ ನದಿಯೆ? ಲಿವಿಂಗ್ ಸ್ಟೋನ್ ತಮ್ಮ ಕೊನೆಗಾಲದಲ್ಲಿ ಈ ಸಂಶಯ ವ್ಯಕ್ತಪಡಿಸಿದ್ದರು. ಈ ಕೊಟ್ಟ ಕೊನೆಯ ಸಮಸ್ಯೆಯನ್ನೂ ತೀರ್ಮಾನ ಮಾಡಲು ಸ್ಟಾನ್ಲಿ ನಿರ್ಧರಿಸಿದ. ಸ್ಟಾನ್ಲಿಗೆ ಆಗ ಇನ್ನೂ 35 ವರ್ಷ ವಯಸ್ಸು.

ಆಗಸ್ಟ್ 1876ರಲ್ಲಿ ಲೇಡಿ ಆಲೀಸ್ ದೋಣಿಯೊಡನೆ ಲುಲಾಬಾ ನದಿಯಲ್ಲಿ ಸ್ಟಾನ್ಲಿ ಹೊರಟ. ಸ್ಟಾನ್ಲಿಯ ಕೊನೆಯ ಮತ್ತು ಮಹಾನ್ ರೋಮಾಂಚಕ ಸಾಹಸ ಇದು. ಅನೇಕ ತಿಂಗಳುಗಳವರೆಗೆ ತಾನು ಎತ್ತ ಯಾನ ಮಾಡುತ್ತಿದ್ದೇನೆಂಬ ಅರಿವೇ ಸ್ಟಾನ್ಲಿಗೆ ಇರಲಿಲ್ಲ. ಉತ್ತರಕ್ಕೆ ಈಜಿಪ್ಟಿನ ಕಡೆಗೆ ಹೋಗುತ್ತಿದ್ದೇನೋ ಅಥವಾ ದಕ್ಷಿಣಕ್ಕೆ ಹಿಂದೂ ಸಾಗರದ ಕಡೆಗೆ ಹೋಗು

This PDF was created using the Sonic PDF Creator.
To remove this watermark, please license this product at www.investintech.com

ತ್ತಿದ್ದೇನೊ ಸ್ಟ್ಯಾನ್ಲಿಗೆ ಗೊತ್ತಾಗಲಿಲ್ಲ. ಒಟ್ಟಿನಲ್ಲಿ ಆಫ್ರಿಕದ ಮಾನವ ಕಾಲಿರಿಸದ ಭಯಂಕರ ಕಗ್ಗಾಡಿನೊಳಕ್ಕೆ ಆ ನದಿ ಸ್ಟ್ಯಾನ್ಲಿಯನ್ನು ಕರೆದೊಯ್ದಿತು. ಕೊನೆ ಕೊನೆಗೆ ಸಂಪೂರ್ಣ ಪಶ್ಚಿಮಕ್ಕೆ ಹರಿಯುವ ಒಂದು ಮಹಾನದಿಯಾಗಿ ಪರಿಣಮಿಸಿತು ಲುಲಾಬಿ. ಅದೇ ಕಾಂಗೋ ನದಿ.

ಸ್ಟ್ಯಾನ್ಲಿಯ ಕಾಂಗೋ ನದಿಯಾತ್ರೆ ಆಫ್ರಿಕದ ಅತ್ಯಂತ ರೋಮಾಂಚಕ ಸಾಹಸಗಳಲ್ಲಿ ಒಂದು. ನೈಲ್‌ನದಿಯ ವಿವಾದದಲ್ಲಿ ಈಗ ಅದು ಅಪ್ರಸ್ತುತ. ಇದನ್ನು ತಿಳಿಯಬೇಕೆನ್ನುವವರು Through the Dark Continent ಎನ್ನುವ ಸ್ಟ್ಯಾನ್ಲಿಯ ಪುಸ್ತಕ ಓದಬೇಕು. ಒಬ್ಬ ಅನ್ವೇಷಕನಿಗೆ ಒದಗಬಹು ದಾದ ಎಲ್ಲ ರೀತಿಯ ತೊಂದರೆ ತಾಪತ್ರಯಗಳನ್ನೂ ಸ್ಟ್ಯಾನ್ಲಿ ಎದುರಿಸಬೇಕಾಯ್ತು. ನೀರಾನೆಗಳು ಅವನ ನೌಕೆಗಳಷ್ಟನ್ನೂ ನಾಶಮಾಡಿ ಸ್ಟ್ಯಾನ್ಲಿ ಕಾಲುನಡಿಗೆಯಲ್ಲಿ ತನ್ನ ಯಾತ್ರೆ ಮುಂದುವರಿಸಬೇಕಾಯ್ತು. ಆತನ ಸಹಾಯಕರಾಗಿದ್ದ ಇಬ್ಬರು ಯೋರೋಪಿಯನ್ನರೂ ಕಾಂಗೋ ನದಿಯಲ್ಲಿ ಮುಳುಗಿ ಸತ್ತರು. ಮಲೇರಿಯಾ ರೋಗದಿಂದ ಅನೇಕಸಾರಿ ಸ್ಟ್ಯಾನ್ಲಿ ಹಾಸಿಗೆ ಹಿಡಿದ.

ಕೊಟ್ಟಕೊನೆಗೆ ಜಾಂಜೀಬಾರಿನಿಂದ ಹೊರಟು 999 ದಿನಗಳ ತರು ವಾಯ ಕಾಂಗೋ ನದೀ ಮುಖಜ ಭೂಮಿಯ ಕಗ್ಗಾಡುಗಳಿಂದ ಸಮುದ್ರತೀರಕ್ಕೆ ಹೊರಬಂದರು. ಮುನ್ನೂರು ಜನರ ತಂಡ ಈಗ ಕೇವಲ 114 ಕ್ಕೆ ಇಳಿದಿತ್ತು. ಎಲ್ಲ ಸುಸ್ತಾಗಿ ಜೀವಂತ ಶವಗಳಾಗಿ ಹೋಗಿದ್ದರು. ಅಲ್ಲೊಂದು ಚಿಕ್ಕ ಊರಿತ್ತು. ಅಲ್ಲಿ ಕೆಲವು ಯುರೋಪಿಯನ್ ಕುಟುಂಬಗಳಿದ್ದವು. ಕಾಂಗೋ ನದಿಯ ಕಗ್ಗಾಡಿನ ಜರ್ಝರಿತನಾಗಿ ಹೊರಬಿದ್ದ ಈ ವಿಚಿತ್ರ ಬಿಳಿಯ ಮನುಷ್ಯನನ್ನು ನೋಡಿ ಆಶ್ಚರ್ಯಚಕಿತರಾದ ಅವರು ಇವರಿಗೆ ಅನ್ನಾಹಾರಗಳನ್ನು ಕೊಟ್ಟು ಆದರಿಸಿದರು. ಆಗಲೇ ಗೊತ್ತಾದುದು ಸ್ಟ್ಯಾನ್ಲಿಗೆ, ತಾನು ಅಟ್ಲಾಂಟಿಕ್ ಸಾಗರದ ತೀರದಲ್ಲಿದ್ದೇನೆಂದು. ಉತ್ತರಕ್ಕೆ ಈಜಿಪ್ಟಿನ ದಿಕ್ಕಿನಲ್ಲಿ ಹರಿಯು ತ್ತಿದ್ದ ಲುಲುಬಾ ನದಿ ನಿಧಾನಕ್ಕೆ ಪಶ್ಚಿಮಕ್ಕೆ ತಿರುಗಿ ಆಫ್ರಿಕಾದ ಮಧ್ಯಭಾಗ ದಲ್ಲಿ ಹರಿಯುತ್ತಾ ಕೊನೆಗೆ ಕೊಂಚ ದಕ್ಷಿಣಕ್ಕೆ ತಿರುಗಿ ಅಟ್ಲಾಂಟಿಕ್ ಸಾಗರಕ್ಕೆ ಸೇರಿತ್ತು. ಉತ್ತರಕ್ಕೆ ಹರಿದು ಮೆಡಿಟರೇನಿಯನ್ ಸಮುದ್ರ ಸೇರುವ ನೈಲ್‌ನದಿ ಎಲ್ಲಿ! ಈ ನದಿ ಎಲ್ಲಿ! ಲುಲಾಬಾ ನದಿಯೇ ಕಾಂಗೋ.

ಅಲ್ಲಿಗೆ ಲಿವಿಂಗ್ ಸ್ಟೋನರ ಊಹೆಯೂ ತಪ್ಪಾಯ್ತು. ನೈಲ್ ನದೀ ಮೂಲದ ಬಗ್ಗೆ ಇದ್ದ ಕೂಟ್ಟ ಕೊನೆಯ ವಿವಾದವನ್ನೂ ಸ್ಟ್ಯಾನ್ಲಿ ಬಗೆಹರಿಸಿದ್ದ.

This PDF was created using the Sonic PDF Creator.
To remove this watermark, please license this product at www.investintech.com

ಸ್ಪೀಕೆಗೆ ನ್ಯಾನ್ಸಾ ಸರೋವರವನ್ನು ಕಂಡಾಗ ಇಂಥದೊಂದು ಸರೋವರವೇ ನೈ
ನಂಥ ಮಹಾ ನದಿಗೆ ಜನ್ಮವೀಯಲು ಸಾಧ್ಯ ಎಂದನ್ನಿಸಿದ್ದು ಕೊನೆಗೂ
ವಾಯ್ತು. ಆದರೆ ಎಷ್ಟೋ ವಾದ ವಿವಾದಗಳ ತರುವಾಯ, ಅನೇಕರ ಸಾ
ಯಾತ್ರೆ ಮತ್ತು ಜೀವದಾನದ ತರುವಾಯ! ಅಮೆರಿಕನ್ ಪತ್ರಕರ್ತ ಸಾ
ಸ್ಟ್ಯಾನ್ಲಿಯ ಅನ್ವೇಷಣೆಯ ನಂತರ ನೈಲ್ ನದಿಗೆ ಸಂಬಂಧಪಟ್ಟ ಸಂದ
ಗಳೆಲ್ಲಾ ಬಹುಪಾಲು ಅಂತ್ಯಗೊಂಡವು.

This PDF was created using the Sonic PDF Creator.
To remove this watermark, please license this product at www.investintech.com

## ಮಹಾನದಿ ನೈಲ್ : ಗ್ರಂಥಋಣ

*Harry Johnston* The Nile Quest
*Livingstone* Last Journls
*Burton* Lake Regions of Central Africa
*Speke* Albert N'Yanza
*Stanly* Through The Dark Continent
*Seavers* Livingstone
*Thomson* Through Masai Land
*Harry Johnston* The Uganda Protectorate
*Murray* The Wilder Shores of Love
*Burton* The first foot steps in Africa
*Burton* The Nile Basin
*Speke* The Discovery of the source of Nile
*Stanly* How I found Livingstone
*Coupland* David Livingstone
*Alan Moorehead* The White Nile

This PDF was created using the Sonic PDF Creator.
To remove this watermark, please license this product at www.investintech.com

ಜಗದ್ವಿಖ್ಯಾತ ಪ್ರವಾಸಿ ಸ್ಥಳಗಳಲ್ಲಿ ಕಿಂಚಿತ್ತೂ ಇಷ್ಟವಿಲ್ಲದ, ಒಂದು ರೀತಿಯಲ್ಲಿ ಪ್ರವಾಸಿಗರೇ ಅಲ್ಲದ ತೇಜಸ್ವಿಯವರ ಈ ಪ್ರವಾಸಾನುಭವದ ನಿರೂಪಣೆಯೂ ಅವರ ಉಳಿದ ಬರಹಗಳಂತೆಯೇ ಅನನ್ಯ.

ಅದಮ್ಯ ಕುತೂಹಲ, ಅಪಾರ ವಿನೋದದ ತೇಜಸ್ವಿಯವರ ಮನಸ್ಸಿನಲ್ಲಿ ಅಂಡಮಾನ್ ದ್ವೀಪಸ್ತೋಮ, ಅಲ್ಲಿನ ಜನಜೀವನ, ಸಸ್ಯ ಸಂಪತ್ತು ಮೂಡಿಸಿದ ಶ್ರೀಮಂತ ಅನಿಸಿಕೆಗಳ ವಿಶಿಷ್ಟ ದಾಖಲೆ ಈ ಅಲೆಮಾರಿಯ ಅಂಡಮಾನ್.

ತೇಜಸ್ವಿಯವರ ಮನಸ್ಸು ತಮ್ಮೆದುರು ಗುರುತಿಸಿದ್ದರ ಜೊತೆಗೇ ಒಳಗೊಳ್ಳುವ ಈ ಅಮೋಘ ಪ್ರಪಂಚದ ವಿವಿಧ ಮುಖಗಳನ್ನು, ಓದಿದ್ದು, ಯೋಚಿಸಿದ್ದು ಅಂಡಮಾನ್ ಜೊತೆಗೇ ಹೆಣೆದುಕೊಳ್ಳುವುದನ್ನು ಈ ಅಪೂರ್ವ ನಿರೂಪಣೆಯಲ್ಲಿ ಓದುಗರು ಗುರುತಿಸಬಹುದು.

— ಲಂಕೇಶ್ ಪತ್ರಿಕೆ

This PDF was created using the Sonic PDF Creator.
To remove this watermark, please license this product at www.investintech.com

This PDF was created using the Sonic PDF Creator.
To remove this watermark, please license this product at www.investintech.com